ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೦೯-೧೦ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ಬಂಡಾಯ ಕಾಲಘಟ್ಟದ ಮಹಿಳಾ ಆತ್ಮಕಥೆಗಳು

ನಿಬಂಧಕಾರರು

ಸೌಮ್ಯ ಸಿ.ಕೆ.

ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ)
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಪ್ರೊ. ಸುಧಾಕರ

ವಿಶ್ರಾಂತ ಜಾನಪದ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೦೯-೧೦

ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೦೯-೧೦ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

ಬಂಡಾಯ ಕಾಲಘಟ್ಟದ ಮಹಿಳಾ ಆತ್ಮಕಥೆಗಳು

ನಿಬಂಧಕಾರರು

ಸೌಮ್ಯ ಸಿ.ಕೆ.

ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ)
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಪ್ರೊ. ಸುಧಾಕರ

ವಿಶ್ರಾಂತ ಜಾನಪದ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೦೯-೧೦

878

ದೃಢೀಕರಣ ಪತ್ರ

೨೦೦೯-೧೦ನೇ ಸಾಲಿನಲ್ಲಿ ಕ್ರಮಸಂಖ್ಯೆ **KVTMKS-00420**ರ ಹಂಪಿ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿನಿಯಾದ ಸಿ.ಕೆ.ಸೌಮ್ಯ ಅವರು ನನ್ನ ಮಾರ್ಗದರ್ಶನದಲ್ಲಿ **"ಬಂಡಾಯ ಕಾಲಘಟ್ಟದ ಮಹಿಳಾ ಆತ್ಮಕಥೆಗಳು"** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ಮೈಸೂರು
೨೪-೦೮-೨೦೧೦

(ಪ್ರೊ. ಸುಧಾಕರ)
ಮಾರ್ಗದರ್ಶಕರು
ವಿಶ್ರಾಂತ ಜಾನಪದ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಅಭ್ಯರ್ಥಿಯ ಘೋಷಣಾ ಪತ್ರ

"ಬಂಡಾಯ ಕಾಲಘಟ್ಟದ ಮಹಿಳಾ ಆತ್ಮಕಥೆಗಳು" ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಕನ್ನಡ ಎಂ.ಫಿಲ್. ಪದವಿಯ ಕ್ರಮಸಂಖ್ಯೆ **KVTMKS-00420**ರ ವಿದ್ಯಾರ್ಥಿನಿಯಾದ ನಾನು ೨೦೦೯-೧೦ನೇ ಸಾಲಿನ ಪರೀಕ್ಷೆಗಾಗಿ ಪ್ರೊ. ಸುಧಾಕರ, ವಿಶ್ರಾಂತ ಜಾನಪದ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸಿ.ಕೆ. ಸೌಮ್ಯ
(ಸಿ.ಕೆ.ಸೌಮ್ಯ)
ವಿದ್ಯಾರ್ಥಿ

ಮೈಸೂರು
ದಿನಾಂಕ: ೨೪-೦೮-೨೦೧೦

೨೦೦೯-೧೦ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಬಂಡಾಯ ಕಾಲಘಟ್ಟದ ಮಹಿಳಾ ಆತ್ಮಕಥೆಗಳು

ಪರಿವಿಡಿ

*****

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಸಾಹಿತ್ಯ ವ್ಯಕ್ತಿಯ ಸೃಷ್ಟಿಯಾದರೂ ಸಮೂಹದ ಆಸ್ತಿ, ಜೀವನಾನುಭವದ ವಿಶಿಷ್ಟ ಅಭಿವ್ಯಕ್ತಿಯೇ ಸಾಹಿತ್ಯ. ಸಾಹಿತ್ಯವು ಕಥೆ, ಕಾವ್ಯ, ಕಾದಂಬರಿ, ವಿಮರ್ಶೆ ಹೀಗೆ ಹಲವಾರು ಪ್ರಕಾರಗಳನ್ನು ಹೊಂದಿದೆ. ಸಾಹಿತ್ಯವನ್ನು ಸೃಷ್ಟಿಸುವ ವ್ಯಕ್ತಿ ತನ್ನ ಬದುಕನ್ನೊಮ್ಮೆ ಹಿಂತಿರುಗಿ ನೋಡುತ್ತಾ ನೆನಪಿಸಿಕೊಂಡು ದಾಖಲಿಸಿದಾಗ ಅದೇ ಆತ್ಮ ಕಥೆಯಾಗುತ್ತದೆ.

ಆತ್ಮಕಥೆ ಎಂಬುದು ಆತ್ಮ ಚರಿತ್ರೆ ಎಂಬ ಹೆಸರಿನ ಮೂಲಕ ಪರಿಚಿತವಾಗಿದೆ. ಇದರಲ್ಲಿ ಲೇಖಕರ ವೈಯಕ್ತಿಕ ಬದುಕು ಪ್ರಧಾನವಾಗಿದ್ದು, ಸಾಂದರ್ಭಿಕವಾಗಿ ಸಮಕಾಲೀನ ಸಮಾಜದ ಚಿತ್ರಣ ದೊರೆಯುತ್ತದೆ. ಒಟ್ಟಾರೆ ಆತ್ಮಚರಿತ್ರೆಯು ಪ್ರತಿಷ್ಠಿತ ವ್ಯಕ್ತಿ ಮತ್ತು ಸಮಾಜದ ಚಿತ್ರಣವನ್ನು ನೀಡುವಂಥದ್ದು.

ಮನುಷ್ಯ ಸಂಘಜೀವಿ, ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಅನುಭವಗಳು ಇದ್ದೇ ಇರುತ್ತವೆ. ಸಂತೋಷದ ಜೊತೆಗೆ ಕಷ್ಟದ ವಿಷವರ್ತುಲದಲ್ಲಿ ಸಿಕ್ಕಿ ಯಶಸ್ಸು ಹೊಂದಿದಾಗ ಅವಳು ತನ್ನ ಅನುಭವಗಳನ್ನು ಇತರರೊಂದಿಗೆ ಅಭಿವ್ಯಕ್ತಿಗೊಳಿಸದಿದ್ದಾಗ, ಸಾಯುವವರೆಗೂ ಆಕೆಯ ಮನದಲ್ಲಿಯೇ ಉಳಿದು ಕೊನೆಗೊಮ್ಮೆ ಅಳಿದು ಹೋಗಬಹುದು. ಆದರೆ ಅದನ್ನು ಪ್ರಾಮಾಣಿಕವಾಗಿ ದಾಖಲಿಸಿದಾಗ ಆ ಅನುಭವಗಳೇ ಆಕೆಯ ವೃತ್ತಾಂತವಾಗಿ ಶಾಶ್ವತವಾಗಿ ಉಳಿದುಕೊಳ್ಳುತ್ತವೆ.

ಕತೆ, ಕಾದಂಬರಿಗಳಿಗಿಂತ ನಿಜವಾದ ಅನುಭವಗಳನ್ನು ಹೇಳುವ ಆತ್ಮಕಥೆಗಳು ಜನರಿಗೆ ಇಷ್ಟವಾಗುತ್ತದೆ. ಆದರೆ ಮಹಿಳೆಯರು ಆತ್ಮಕಥೆಗಳನ್ನು ಬರೆಯುವುದು ತುಂಬಾ ಕಡಿಮೆ. ಬೇರೆ ಬೇರೆ ಭಾಷೆಗಳಲ್ಲಿ ಮಹಿಳೆಯರು ಮುಕ್ತವಾಗಿ ತಮ್ಮ ಆತ್ಮಕಥೆಗಳನ್ನು ಬರೆದುಕೊಂಡಿದ್ದಾರೆ. ಆದರೆ ಕನ್ನಡದಲ್ಲಿ ಮಹಿಳೆಯರು ಆತ್ಮಕಥೆಗಳನ್ನು ಬರೆದುಕೊಂಡಿರುವುದು ಬೆರಳಣಿಕೆಯಷ್ಟಿದೆ. ಇದಲ್ಲದೇ ಮಹಿಳಾ ಆತ್ಮಕಥೆಗಳ ಬಗ್ಗೆ ಗಂಭೀರವಾದ ಅಧ್ಯಯನಗಳು ಆತ್ಮಕಥೆಗಳನ್ನು ಅಧ್ಯಯನ ಮಾಡಬೇಕೆನಿಸಿತು. ಸಾಹಿತ್ಯ ನಾನಾ ಪ್ರಕಾರಗಳಲ್ಲಿ ಕೃಷಿ ಮಾಡಿದ ಅನುಪಮಾ ನಿರಂಜನ, ಸಾಹಿತಿಯೋರ್ವನ ಪತ್ನಿಯಾಗಿ, ಯಶಸ್ವಿ ವೈದ್ಯೆಯಾಗಿ ಹೆಸರಾಂತ ಲೇಖಕಿಯಾಗಿ ಮನೆಮಾತಾಗಿದ್ದರು ಹಾಗೆಯೇ ಖ್ಯಾತ ಚಲನಚಿತ್ರ ನಟ, ನಿರ್ದೇಶಕ ಗುರುದತ್ತನ ತಾಯಿಯಾದ ವಾಸಂತಿ ಪಡುಕೋಣೆ, ಸಾಹಿತ್ಯ ಕೃಷಿ ಮಾಡಿದ ಕನ್ನಡದ

ಆರಂಭದ ಬರಹಗಾರ್ತಿಯಾಗಿದ್ದು, ಬದುಕಿನಲ್ಲಿ ಕಂಡುಂಡ ನೋವು ಅಪಾರ. ಹಾಗೆಯೇ ಹಿರಿಯ ಲೇಖಕಿಯರಲ್ಲಿ ವಿಶಿಷ್ಟರಾದ ಶಾರದ ಹೆಮ್ಮಿಗೆ ಯವರು ಓದಿನ ಹಂಬಲವನ್ನು ಸಾಹಿತ್ಯದ ಆಸಕ್ತಿಯನ್ನು ಕೊನೆಯವರೆಗೂ ಉಳಿಸಿಕೊಂಡು ತಮ್ಮ ಮಗಳಾದ ಕಮಲಾ ಹೆಮ್ಮಿಗೆಯವರು ನೀಡಿದ ಪ್ರೇರಣೆಯಿಂದ ಆತ್ಮಕಥೆಯನ್ನು ಬರೆದು ಅದರಲ್ಲಿ ತಮ್ಮ ಬದುಕಿನ ಚಿತ್ರಣವನ್ನು ನೀಡಿದ್ದಾರೆ. ಮತ್ತೊಬ್ಬ ಕನ್ನಡದ ಹೆಸರಾಂತ ಮುಸ್ಲಿಂ ಲೇಖಕಿ ಸಾರಾ ಅಬೂಬಕ್ಕರ್‌ರವರ ಆತ್ಮಕಥೆಯು ಅವರ ಬದುಕಿನ ಸಂದರ್ಭವನ್ನು ಬಿಚ್ಚಿಡುತ್ತವೆ.

ಆದ್ದರಿಂದ ಈ ನಾಲ್ಕು ವಿಶಿಷ್ಟ ಲೇಖಕಿಯರ ಆತ್ಮಕಥೆಗಳು ಬಹಳ ಮುಖ್ಯವೆನಿಸಿದವು ಗಳಾಗಿವೆ. ಪ್ರಸ್ತುತ ಈ ನನ್ನ ಅಧ್ಯಯನಕ್ಕೆ ಸೂಕ್ತವೆಂದು ಭಾವಿಸಿ ಈ ನಾಲ್ಕು ಮಹಿಳಾ ಆತ್ಮಕಥೆಗಳ ಅನಾವರಣವನ್ನು ಈ ಪ್ರಬಂಧದಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

'ಬಂಡಾಯ ಕಾಲಘಟ್ಟದ ಮಹಿಳಾ ಆತ್ಮಕಥೆಗಳು' ಎಂಬ ಶೀರ್ಷಿಕ ಅಡಿಯಲ್ಲಿ ನಿಬಂಧ ರಚಿಸಲು ನಿರ್ಧರಿಸಿ ಈ ಕೆಳಕಂಡಂತೆ ವರ್ಗೀಕರಣ ಮಾಡಿಕೊಂಡಿದ್ದೇನೆ.

೧) ಮೊದಲ ಅಧ್ಯಾಯದಲ್ಲಿ ನನ್ನ ನಿಬಂಧದ ಉದ್ದೇಶ ಮತ್ತು ವ್ಯಾಪ್ತಿಯನ್ನು ನಿರೂಪಿಸಿದ್ದೇನೆ.

೨) ಎರಡನೆಯ ಅಧ್ಯಾಯದಲ್ಲಿ ನನ್ನ ನಿಬಂಧಕ್ಕೆ ಸೀಮಿತಗೊಳಿಸಿ ಕೊಂಡಿರುವ ಲೇಖಕಿಯರ ಜೀವನ ಮತ್ತು ಸಾಧನೆಯನ್ನು ಪರಿಚಯ ಮಾಡಿಕೊಡಲಾಗಿದೆ.

೩) ಮೂರನೆಯ ಅಧ್ಯಾಯದಲ್ಲಿ ಕನ್ನಡದಲ್ಲಿ ಆತ್ಮಚರಿತ್ರೆಯ ಸ್ವರೂಪ, ಮಹಿಳಾ ಆತ್ಮಕಥೆಗಳನ್ನು ರಚಿಸಲು ಉಂಟಾಗುವ ಪ್ರೇರಣೆ ಮತ್ತು ಪ್ರಭಾವವನ್ನು ಪ್ರಸ್ತಾಮಾಡಲಾಗಿದೆ.

೪) ನಾಲ್ಕನೆಯ ಅಧ್ಯಾಯದಲ್ಲಿ ಲೇಖಕಿಯರ ಬಾಲ್ಯ ಜೀವನದ ದಿನಗಳು, ತನ್ನ ಕುಟುಂಬ ವರ್ಗದಿಂದ ದೊರೆಯುತ್ತಿದ್ದ ಪ್ರೀತಿ, ವಾತ್ಸಲ್ಯ, ಸಾಹಿತ್ಯ ಕೃಷಿಯತ್ತ, ತೊಡಗಲು ಉಂಟಾದ ಅಡಚಣೆಗಳು, ಪ್ರೋತ್ಸಾಹ ಮತ್ತು ಶೈಕ್ಷಣಿಕ ಜೀವನವನ್ನು ತಿಳಿಸಲಾಗಿದೆ.

೫) ಅಧ್ಯಾಯ ಐದರಲ್ಲಿ ಆತ್ಮಕಥೆಯನ್ನು ಬರೆಯಲು ಲೇಖಕಿಯರು ಬಳಸಿಕೊಂಡ ಭಾಷೆಯ ಶೈಲಿ ಅವರ ಧಾರ್ಮಿಕ ಆಚರಣೆಗಳು ರೂಢಿ ಮತ್ತು ಸಂಪ್ರದಾಯಗಳು ನಂಬಿಕೆ ಇವುಗಳನ್ನು ಪ್ರಸ್ತಾಪಿಸಲಾಗಿದೆ.

೬) ಅಧ್ಯಾಯ ಆರರಲ್ಲಿ ಮಹಿಳಾ ಆತ್ಮಕಥೆಗಳಿಂದ ಸಮಾಜಕ್ಕೆ ಆಗುವ ಪ್ರಯೋಜನ ಮತ್ತು ಆತ್ಮಕಥೆಗಳು ಯಾವ ರೀತಿ ಮಾರ್ಗದರ್ಶನ ಕೃತಿಗಳಾಗುತ್ತವೆ ಎಂಬುದನ್ನು ಚರ್ಚಿಸಿದ್ದೇನೆ.

೭) ಅಧ್ಯಾಯ ಏಳರಲ್ಲಿ ಒಟ್ಟಾರೆಯಾಗಿ ಅಧ್ಯಯನದ ಫಲಿತಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ಅಧ್ಯಾಯ – ೨

ಲೇಖಕಿಯರ ಸಂಕ್ಷಿಪ್ತ ಜೀವನ ಮತ್ತು ಸಾಧನೆ

ಅನುಪಮಾ ನಿರಂಜನ

'ಅನುಪಮಾ' ಎಂಬ ಕಾವ್ಯನಾಮದಿಂದಲೇ ಇಂದು ಗುರುತಿಸಲ್ಪಡುತ್ತಿರುವ ವೆಂಕಟಲಕ್ಷ್ಮಮ್ಮ ಕನ್ನಡ ಸಾಹಿತ್ಯದಲ್ಲಿನ ಬಹುಮುಖ್ಯ ಲೇಖಕಿ. ಇವರ ತಂದೆ ಶಿವರಾಮಯ್ಯ, ತಾಯಿ ಲಕ್ಷ್ಮಿ, ತಂದೆಯು ಹಿರಿಯ ಮಗಳಾದ ಇವರಿಗೆ ಅಜ್ಜಿ ಮತ್ತು ತಾಯಿಯ ಹೆಸರುಗಳೆರಡನ್ನೂ ಸೇರಿಸಿ ವೆಂಕಟಲಕ್ಷ್ಮಿ ಎಂದು ನಾಮಕರಣ ಮಾಡಿದರು. ವೆಂಕಟಲಕ್ಷ್ಮಿ ಚಿಕ್ಕ ವಯಸ್ಸಿನಿಂದಲೇ ಪದ್ಯ, ಸಣ್ಣ ಕಥೆಗಳನ್ನು ಬರೆಯುತ್ತಿದ್ದರು. ಅನುಪಮಾ ನಿರಂಜನ ಕರ್ನಾಟಕದ ಪ್ರಮುಖ ಲೇಖಕಿಯರಲ್ಲಿ ಒಬ್ಬರಾಗಿದ್ದು, ಇಪ್ಪತ್ತೆರಡು ಕಾದಂಬರಿಗಳು, ಒಂಭತ್ತು ಕಥಾಸಂಕಲನಗಳು, ಒಂದು ನಾಟಕ, ಶಿಶೂಸಾಹಿತ್ಯ. ಎರಡು ಆತ್ಮಕಥನ ಎರಡು ಪ್ರವಾಸ ಕಥನಗಳು, ಮಹಿಳೆಯರಿಗಾಗಿ ಬರೆದ ಮೂರು ಕೃತಿಗಳು, ದಾಂಪತ್ಯ ವಿಜ್ಞಾನಕ್ಕೆ ಸಂಬಂಧಿಸಿದ ಎರಡು ಪುಸ್ತಕಗಳು, ಒಂಭತ್ತು ವೈದ್ಯಕೀಯ ವಿಜ್ಞಾನ ಗ್ರಂಥಗಳು, ಎರಡು ಲೇಖನ ಸಂಗ್ರಹಗಳು. ಹೀಗೆ ಕನ್ನಡ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಉತ್ತಮ ಕೊಡುಗೆ ನೀಡಿದ್ದಾರೆ. ವೃತ್ತಿಯಿಂದ ವೈದ್ಯೆಯಾಗಿ, ಪ್ರವೃತ್ತಿಯಿಂದ ಲೇಖಕಿಯಾದ ಅನುಪಮಾ ನಿರಂಜನರು ೧೯೩೪ ಮೇ ೧೭ರಂದು ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಹುಟ್ಟಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಬಿ.ಬಿ.ಎಸ್. ಪದವಿ ಪಡೆದು ವೈದ್ಯ ವೃತ್ತಿಯಲ್ಲಿ ನಿರತರಾದರು. ಬೆಂಗಳೂರಿನಲ್ಲಿ ಚಿಕಿತ್ಸಾಲಯವನ್ನು ತೆರೆದು ಸಾವಿರಾರು ರೋಗಿಗಳಿಗೆ ಶುಶ್ರೂಷೆ ನೀಡಿದರು. ಜಾತಿಯ ಬಗೆಗೆ ಅತಿ ಮಡಿವಂತಿಕೆಯಿದ್ದ ದಿನಗಳಲ್ಲೇ ಪ್ರಗತಿಶೀಲ ಲೇಖಕರಾದ ನಿರಂಜನರನ್ನು ಪ್ರೀತಿಸಿ ಅಂತರ್ಜಾತಿ ವಿವಾಹವಾದರು.

ಡಾ. ಅನುಪಮಾ ನಿರಂಜನ ಅವರು ಎರಡನೇ ತಲೆಮಾರಿನ ಪ್ರಮುಖ ಲೇಖಕಿ ವೃತ್ತಿಯಿಂದ ವೈದ್ಯೆಯಾದುದರಿಂದ ಸಾಮಾಜಿಕ ಕಳಕಳಿಯೊಂದಿಗೆ, ಸಾಮಾಜಿಕ ಆರೋಗ್ಯದ ಕಡೆ ಗಮನ ಹರಿಸುತ್ತಾರೆ. ವಿಮರ್ಶಕರ ಅವಜ್ಞೆಗೆ ತುತ್ತಾಗಿದ್ದರೂ ಅವರ 'ಘೋಷ' ಮತ್ತು 'ಮಾಧವಿ' ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಹೊಸ ಆಯಾಮವನ್ನು ಸೃಷ್ಟಿಸಿದ ಕೃತಿಗಳು, ಆತ್ಮವೃತ್ತ 'ನೆನಪು ಸಿಹಿಕಹಿ', ಬರಹಗಾರ್ತಿಯ ಬದುಕು

ಅವರ ವಿಶಿಷ್ಟ ಆತ್ಮಕಥನಗಳು, ಅವರ ವಿಜ್ಞಾನ ಸಾಹಿತ್ಯ ಕನ್ನಡಕ್ಕೆ ಅಮೂಲ್ಯ ಕೊಡುಗೆಯಾಗಿದೆ.

೧೯೫೨ರಲ್ಲಿ ಪ್ರಕಟವಾದ 'ಕಣ್ಮಣಿ' ಇವರ ಮೊದಲ ಕಥಾಸಂಕಲನ, ಮೊದಲ ಕಾದಂಬರಿ 'ಅನಂತಗೀತ' ೧೯೫೮ರಲ್ಲಿ ಪ್ರಕಟಗೊಂಡಿದೆ. ಕೃತಿ ಪ್ರಕಟಗೊಂಡ ಕಾಲಕ್ಕೆ ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲ ಚಳುವಳಿ ತನ್ನ ಕಾವು ಕಳೆದುಕೊಂಡು ನವ್ಯ ಸಂವೇದನೆಗಳು ಕಾಣಿಸಿಕೊಂಡಿತ್ತು. ಭಾರತೀಯ ಬದುಕಿನಲ್ಲಿ ಸ್ವಾತಂತ್ರ್ಯ ಚಳುವಳಿಯ ಉದ್ದೇಶಗಳು ಈಡೇರಿ ದೇಶಕ್ಕೆ ಸ್ವಾತಂತ್ರ್ಯ ಲಭ್ಯವಾಗಿತ್ತು. ಅವರ ಕಾದಂಬರಿಯಲ್ಲಿ ಯಾವ ಸಾಹಿತ್ಯ ಚಳುವಳಿಯ ಪ್ರಭಾವವೂ ಇಲ್ಲ. ಆದರೆ ಅವರ ಕೃತಿಗಳಲ್ಲಿ ದಟ್ಟ ವೈಚಾರಿಕತೆಯಿದೆ. ಸಾಮಾಜಿಕ ಪ್ರಜ್ಞೆಯಿದೆ. ಬಂಡಾಯದ ಸೊಲ್ಲಿದೆ. ಅನುಪಮ ಅವರಿಗೆ ಮಹಿಳೆಯರ ಬಗ್ಗೆ ಅಪಾರ ಕಳಕಳಿ ಇದೆ. ಅವರಿಗೆ ತಿಳುವಳಿಕೆ ನೀಡಬೇಕು. ಅವರಲ್ಲಿ ಜಾಗೃತಿ ಉಂಟುಮಾಡಬೇಕು. ಮಹಿಳಾ ಬದುಕಿನ ಸ್ವರೂಪ, ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೊಸ ಅರ್ಥ ಪಡೆಯಬೇಕೆಂಬ ಹಿನ್ನೆಲೆಯಲ್ಲಿ ಶುಭಕಾಮನೆ, ಮಾನಿನಿ, ನಾರೀಲೋಕ ಮೊದಲಾದ ಕೃತಿಗಳನ್ನು ರಚಿಸಿದರು. ಇದರೊಂದಿಗೆ ಮಹಿಳೆಯರ ಆರೋಗ್ಯ, ಹೊಸದಾಗಿ ಸಾಂಸಾರಿಕ ಜೀವನ ಪ್ರವೇಶಿಸುತ್ತಿರುವ ಹೊಸ ವಧುವಿಗೆ ಕಿವಿಮಾತು, ದಾಂಪತ್ಯ ದೀಪಕ್ಕೆ ಸ್ತ್ರೀ ಸ್ವಾಸ್ಥ್ಯ ಸಂಹಿತೆ, ಕಿಶೋರಾವಸ್ಥೆಗೆ ಪ್ರವೇಶಿಸುತ್ತಿರುವ ಹದಿಹರೆಯದ ಹೆಣ್ಣಿಗೆಂದೇ ಕೇಳುಕಿಶೋರಿ, ಹೀಗೆ ಅನುಪಮ ಹೆಣ್ಣಿನ ಬಗೆಗೆ ಸಾಹಿತ್ಯದಾಚೆಗೆ ಸ್ಪಂದಿಸಿದ ಸ್ತ್ರೀವಾದಿ.

ಅನುಪಮಾ ಅವರ ಪ್ರತಿಭೆಗೆ ಸಾಕಷ್ಟು ಪ್ರಶಸ್ತಿಗಳು ಲಭಿಸಿವೆ. 'ರೂವಾರಿಯ ಲಕ್ಷ್ಮಿ' ಕಥಾಸಂಕಲನಕ್ಕೆ ರಾಜ್ಯಪ್ರಶಸ್ತಿ. ೧೯೭೮ರಲ್ಲಿ ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ, ಆತ್ಮಕಥನ 'ನೆನಪು ಸಿಹಿಕಹಿ'ಗೆ ಸಾಕಷ್ಟು ಪ್ರಶಸ್ತಿಗಳು ಲಭಿಸಿವೆ. 'ರೂವಾರಿಯ ಲಕ್ಷ್ಮಿ' ಕಥಾಸಂಕಲನಕ್ಕೆ ರಾಜ್ಯಪ್ರಶಸ್ತಿ, ೧೯೭೮ರಲ್ಲಿ ನಂಜನಗೂಡು ತಿರುಮಲಾಂಬ ಪ್ರಶಸ್ತಿ ಇದಲ್ಲದೆ ೧೯೭೮ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ, ಮಾನ ಸನ್ಮಾನಗಳು ದೊರೆತಿವೆ. ಅವರ 'ಋಣ' ಕಾದಂಬರಿ ಚಲನಚಿತ್ರವಾಗಿ ಜನಪ್ರಿಯ ಗಳಿಸಿದೆ. ಬದುಕಿಗೆ ಬದ್ಧರಾದ, ಜನಪರ ನಿಲುವಿನ, ಖಚಿತ ಸಿದ್ಧಾಂತ ಮತ್ತು ಧೋರಣೆಗಳ ಕೆಲವರೇ ಕನ್ನಡ ಸಾಹಿತಿಗಳಲ್ಲಿ ಅನುಪಮ ಒಬ್ಬರು. 'ಸಾಹಿತ್ಯಕ್ಕಾಗಿ ಸಾಹಿತ್ಯ' ಎಂದು ತಿಳಿಯದೆ, "ಸಾಹಿತ್ಯ ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿ

ಬದಲಾವಣೆಗಳಿಗೆ ನೆರವಾಗಬೇಕು" ಎಂದು ನಂಬಿದವರು. ನಡೆನುಡಿಗಳಲ್ಲಿ ಏಕತೆಯನ್ನು ತೋರಿಸಿಕೊಟ್ಟವರು. ಸಾಹಿತ್ಯದ 'ದಂತಗೋಪುರ'ದಲ್ಲಿ ಉಳಿಯದೆ ಜನಪರ ಹೋರಾಟಗಳಲ್ಲಿ ಸ್ವತಃ ಭಾಗವಹಿಸಿದ ಸಾಹಿತಿ ಡಾ. ಅನುಪಮಾ, ಸ್ನೇಹಜೀವಿ, ಪ್ರೋತ್ಸಾಹಕಿ, ಬದುಕಿಗಾಗಿ ಹೋರಾಡಿದ ವೀರವನಿತೆ, ಅವರ ಜೀವನವೇ ಒಂದು ವೀರಗಾಥೆ. ಡಾ. ಅನುಪಮಾ ನಿರಂಜನರ ಸಾಹಿತ್ಯ ಎಷ್ಟು ಅಭ್ಯಾಸ-ಯೋಗ್ಯವೋ ಅವರ ಬದುಕು ಕೂಡ ಅಷ್ಟೇ ಅಭ್ಯಾಸ ಯೋಗ್ಯವಾಗಿವೆ.

ಹೀಗೆ ಅನುಪಮಾರವರು ಬದುಕು ಸಾಗಿಸಿ ಬದುಕಿದಾಗಲೇ ಸಾವು ಸಮೀಪಿಸುತ್ತಿದೆ ಎಂಬುದನ್ನು ಬಲ್ಲವರಾಗಿದ್ದ ಅನುಪಮಾ ಸಾವನ್ನು ನಿರೀಕ್ಷಿಸುತ್ತಲೇ ಕಾರ್ಯ ಮುಂದುವರೆಸಿದ ಅವರ ಕಾರ್ಯತತ್ಪರತೆ ಶ್ಲಾಘನೀಯ. ೧೯೯೧ರಲ್ಲಿ ಇವರು ದೈವಾಧೀನರಾದರು.

ಸಾ.ರಾ.ಅಬೂಬಕ್ಕರ್

ಕನ್ನಡ ಸಾರಸ್ವತ ಲೋಕಕ್ಕೆ ಹೊಸದೊಂದು ಕ್ರಾಂತಿಕಾರಕ ಅಲೆಯೂ ದಲಿತ–ಬಂಡಾಯದೊಡನೇ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದೆ. ಅದುವರೆವಿಗೂ ನಿರ್ಲಕ್ಷಿಸಲ್ಪಟ್ಟು ಅದುಮಿಟ್ಟ ಧ್ವನಿಗಳು ಕೊರಳೆತ್ತಿದಾಗ ಅಪರಿಚತವಾಗಿದ್ದ ಅಜ್ಞಾತವಾಗಿದ್ದ ಮುಸ್ಲಿಂ ಸಂವೇದನೆಗಳು ಮೊದಲಬಾರಿಗೆ ಅಭಿವ್ಯಕ್ತಿಕಂಡುಕೊಂಡಿದ್ದರ ಫಲವಾಗಿ ಮುಸ್ಲಿಂ ಸಮಾಜ–ಸಂಸ್ಕೃತಿಯನ್ನು ಸಾಹಿತ್ಯ ಲೋಕಕ್ಕೆ ತೆರೆದು ತೋರಿಸುವ ಮೂಲಕ ಒಂದು ಭಿನ್ನ ಸಮಾಜದ ಸಮರ್ಪಕ ಚಿತ್ರಣವನ್ನು ಮಾಡಿಕೊಡುವ ಮುಸ್ಲಿಂ ಬರಹಗಾರ್ತಿಯರಲ್ಲಿ ಸಾ.ರಾ.ಅಬೂಬಕ್ಕರ್ ಅವರು ಕನ್ನಡದ ಶ್ರೇಷ್ಠ ಮುಸ್ಲಿಂ ಬರಹಗಾರ್ತಿಯಾಗಿದ್ದಾರೆ. ದಿವಂಗತ 'ಪಿ.ಲಂಕೇಶ್' ಅವರ ಪ್ರೋತ್ಸಾಹದಿಂದಾಗಿ ಮುಸ್ಲಿಂ ಕುಟುಂಬದ ಹಿನ್ನೆಲೆಯಿಂದ ಬಂದು ಕನ್ನಡ ಸಾಹಿತ್ಯದಲ್ಲಿ ದೃಢವಾಗಿ ಹೆಜ್ಜೆಯಿಟ್ಟು ಮುಂದೆ ಬಂದವರಲ್ಲಿ ಸಾ.ರಾ. ಅಬೂಬಕ್ಕರ್ ಒಬ್ಬರಾಗಿದ್ದಾರೆ.

'ಪಿ.ಮಹಮ್ಮದ್' ಮತ್ತು 'ಜೈನಾಬಿ' ದಂಪತಿಗಳ ಏಕೈಕ ಸುಪುತ್ರಿಯಾಗಿ ಕಾಸರಗೋಡಿನ ಚಮನವಾಡಿಯಲ್ಲಿ ೧೯೩೬ರಂದು ಹುಟ್ಟಿದ ಸಾರಾ ಅವರು ಐದು ಜನ ಸಹೋದರರ ಮುದ್ದಿನ ಕಣ್ಮಣಿಯಾಗಿ ಅಜ್ಜ, ಅಜ್ಜಿಯರ ಪ್ರೀತಿಯ ಮೊಮ್ಮಗಳಾಗಿ ವಾತ್ಸಲ್ಯಮಯ ವಾತಾವರಣ ಪ್ರಜ್ಞಾವಂತ ಕುಟುಂಬದಲ್ಲಿ ಕೆಲವೊಂದು ಅಡ್ಡಿ, ನಿರ್ಬಂಧಗಳ ನಡುವೆಯೂ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಬರೆದ ಸಾರಾ ಅವರು ಮುಂದೆ ಹೆಚ್ಚಾಗಿ ಓದಲಾಗಲಿಲ್ಲ. ಕುಟುಂಬದವರಿಂದದೊರೆತ ಅಪಾರ ಪ್ರೋತ್ಸಾಹ, ಪ್ರೇರಣೆಗಳಿಂದ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ಮುಸ್ಲಿಂ ಸಮಾಜದಲ್ಲಿ ಹೆಣ್ಣು ಪಡುತ್ತಿರುವ ಯಾತನಾಮಯ ಜೀವನವನ್ನು ಶೋಷಣೆ, ಅನ್ಯಾಯ, ದೌರ್ಜನ್ಯ, ದಬ್ಬಾಳಿಕೆಯನ್ನು ತೆರೆಗಣ್ಣಿನಿಂದ ನೋಡಿ ಅವರು ನೋವುಗಳಿಗೆ ಸ್ಪಂದಿಸುವ ಕಾರ್ಯವನ್ನು ಕಥೆ, ಕಾದಂಬರಿಗಳ ಮೂಲಕ ಕೈಗೊಂಡರು."[೧]

"ಸಾರಾ ಅವರು ಮಲೆಯಾಳಂ ಮೂಲದವರಾಗಿದ್ದು, ಕನ್ನಡದಲ್ಲಿ ಸಾಹಿತ್ಯ ಕೃಷಿ ಗೈಯ್ಯುತ್ತಿರುವ ಮುಸ್ಲಿಂ ಲೇಖಕಿಯರಲ್ಲಿ ಅಗ್ರಗಣ್ಯರಾಗಿದ್ದಾರೆ. 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಇವರ ಆತ್ಮಕಥನವಾಗಿದೆ. ಸಾರಾ ಅವರಿಗೆ ಪ್ರಕೃತಿಯೊಂದಿಗಿನ ಅವಿನಾಭಾವ ಸಂಬಂಧ ಬಾಲ್ಯದಲ್ಲೇ ಬೆಸೆದುಕೊಂಡಿತ್ತು. ತಮ್ಮ ೪೫ನೇ ವಯಸ್ಸಿನಲ್ಲೆ

೧. ಕೆ.ಷರಿಫಾ (ಸಂ.), ರಂಗರಾಜ್ ವನದುರ್ಗ, ಬಂಡಾಯ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ, ಪು. ೧೩೨.

ಬರವಣಿಗೆಯನ್ನು ಪ್ರಾರಂಭಿಸಿದ ಸಾರಾ ಅವರು ಲಂಕೇಶ ಪತ್ರಿಕೆಯಲ್ಲಿ ಪ್ರಕಟವಾದ "ಮುಸ್ಲಿಂ ಹೆಣ್ಣಿನ ಸ್ಪಂದನ" ಎಂಬ ತಲೆ ಬರಹದಡಿಯಲ್ಲಿ ಬರೆದ ಹಲವಾರು ಲೇಖನಗಳ ಮೂಲಕ ರಚನೆಗಳ ಭದ್ರವಾದ ನೆಲೆಯನ್ನು ಕಂಡುಕೊಂಡರು."[೧]

ಸ್ವ-ವಿವರಗಳನ್ನು, ಮನೆತನ, ತಂದೆತಾಯಿ, ಸಹೋದರರ ಕೌಟುಂಬಿಕ ಹಿನ್ನೆಲೆಯನ್ನು ಕಥೆಯ ರೂಪದಲ್ಲಿ ಹೆಣೆದಿದ್ದರೆ. ೧೯೮೪ರಲ್ಲಿ 'ಸಹನಾ' ಎಂಬ ಕಾದಂಬರಿಯನ್ನು, ೧೯೯೦ರಲ್ಲಿ 'ವಜ್ರಗಳು' ಕಾದಂಬರಿಯನ್ನು ಬರೆದರು. ಇವುಗಳ ನಂತರ 'ತಳ ಒಡೆದ ದೋಣಿಯಲ್ಲಿ', 'ಕದನ ವಿರಾಮ', 'ಸುಳಿಯಲ್ಲಿ ಸಿಕ್ಕವರು', 'ಪ್ರವಾಹ-ಸುಳಿ' ಮುಂತಾದ ಕಾದಂಬರಿಗಳು ಪ್ರಕಟವಾದವು.

"೧೯೮೯ರಲ್ಲಿ 'ಚಪ್ಪಲಿಗಳು', ೧೯೯೨ರಲ್ಲಿ 'ಪಯಣ ಮತ್ತು ಇತರ ಕಥೆಗಳು', ೧೯೯೭ರಲ್ಲಿ 'ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು' ಹಾಗೂ 'ಖೆಡ್ಡಾ' ಕಥಾಸಂಕಲನಗಳನ್ನು ಹೊರತಂದಿದ್ದಾರೆ. ಜೊತೆಗೆ 'ಅನಾವರಣ', ಹಾಗೇ 'ಲೇಖನಗುಚ್ಛ' ಎಂಬ ಅಂಕಣ ಬರಹಗಳ ಸಂಗ್ರಹಗಳೂ ಪ್ರಕಟವಾಗಿದೆ. ಕಥೆ, ಕಾದಂಬರಿ, ಲೇಖನಗಳೇ ಅಲ್ಲದೆ ಅನುವಾದ ಸಾಹಿತ್ಯದಲ್ಲೂ ಸಾರಾ ಅವರು ಕೈಯಾಡಿಸಿದ್ದಾರೆ. ಕಮಲದಾಸ್ ಅವರ 'ಮನೋಮಿ', ಬಿ.ಎಂ.ಸುಹರಾ ಅವರ 'ಬಲೆ' 'ನಾನಿನ್ನು ನಿದ್ರಿಸುವೆ', ಪಿ.ಕೆ.ಬಾಲಕೃಷ್ಣನ್‌ರವರ ಮಲಯಾಳಂ ಭಾಷೆಯ ಕಾದಂಬರಿ-ಗಳನ್ನು ಕನ್ನಡ ಭಾಷೆಗೆ ಅನುವಾದಿಸಿದ್ದಾರೆ."[೨]

ಸಾರಾ ಅವರಿಗೆ ಸಂದಿರುವ ಪ್ರಶಸ್ತಿಗಳೆಂದರೆ 'ದಾನ ಚಿಂತಾಮಣಿ' ಪ್ರಶಸ್ತಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಅನುಪಮ ನಿರಂಜನ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮಲ್ಲಿಕಾ ಪ್ರಶಸ್ತಿ, ರತ್ನಮ್ಮ ಹೆಗ್ಗಡೆ ಪ್ರಶಸ್ತಿ, ಹಾಗೂ ಶ್ರೇಷ್ಠ ಮಹಿಳಾ ಲೇಖಕಿಗೆ ಸಲ್ಲುವ 'ಅತ್ತಿಮಬ್ಬೆ ಪ್ರಶಸ್ತಿ', ವರ್ಧಮಾನ ಉದಯೋನ್ಮುಖ ಪ್ರಶಸ್ತಿ, ಸಾವಿತ್ರಮ್ಮ ದೇಜಗೌ ಭಾರತೀಯ ಭಾಷಾ ಸಮ್ಮಾನ ಪ್ರಶಸ್ತಿ ಇತ್ತೀಚೆಗೆ ಮಂಗಳೂರು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್ ಪ್ರಶಸ್ತಿ ನೀಡಿ ಗೌರವಿಸಿದೆ.

---

೧. ದಾದಾಪೀರ್, ನವಿಲೇಹಾಲ, (ಸಂ.), ರಂಗರಾಜ್ ವನದುರ್ಗ, ಮುಸ್ಲಿಂ ಸಂವೇದನೆಗಳು: ಕೆಲವು ಅವಮಾನಗಳು, ಪು. ೧೧೦.

೨. ಬಂಡಾಯ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ, ಕೆ.ಷರೀಫಾ, ಪು. ೧೩೨.

[illegible]

ವಾಸಂತಿ ಪಡುಕೋಣೆ

ವಾಸಂತಿ ಪಡುಕೋಣೆ ದಕ್ಷಿಣ ಜಿಲ್ಲೆಯ ಮೂಲದವರಾದರೂ, ಹುಟ್ಟಿದ್ದು ೨೫-೪-೧೯೦೮ರಂದು ಬರ್ಮಾದೇಶದ ಮಿಥಿಲಾದಲ್ಲಿ ತಂದೆ ಅಣ್ಣಾಜಿರಾವ್ ಹಾಗೂ ತಾಯಿ ರಾಧಾಬಾಯಿ ವಾಸಂತಿಯವರಿಗೆ ಇಟ್ಟ ಹೆಸರು ಶಾಂತಿ.

ನಿಂತು ನಿಂತು ಸಾಗಿದ ಓದು ವಾಸಂತಿ ಅವರದು ೧೨ನೇ ವಯಸ್ಸಿನಲ್ಲಿ ಶಿವಶಂಕರರೊಡನೆ ವಿವಾಹವಾದರು. ಸರಿಯಾದ ತಿಳುವಳಿಕೆ, ಪರಸ್ಪರ ಅರ್ಥವಂತಿಕೆಯಿಲ್ಲದ ದಾಂಪತ್ಯದಲ್ಲಿ ಐವರು ಮಕ್ಕಳು ಸಾಲಾಗಿ ಅರಳಿದರು.

ವಾಸಂತಿಯವರು ತಮ್ಮ ಬದುಕಿನುದ್ದಕ್ಕೂ ಕುರುಡುಶ್ರದ್ಧೆ, ಅಂಧಾನುಕರುಣೆ, ಜಡ ಆಚರಣೆಗಳನ್ನು ಪ್ರಶ್ನಿಸುತ್ತಲೇ ಬಂದರು. ಸಮಾಜಕ್ಕೆ ಹೆದರುವ ಜಾಯಮಾನ ಅವರದಾಗಿರಲಿಲ್ಲ. ಪತಿ ಕುಟುಂಬದ ಬಗೆಗೆ ತೋರಿದ ನಿರ್ಲಕ್ಷ್ಯದಿಂದಾಗಿ ತಾವೇ ಕುಟುಂಬಹದ ಹೊಣೆ ಹೊತ್ತರು. ಮೆಟ್ರಿಕ್ ಮುಗಿಸಿ ಹಿಂದಿ ಕೋವಿದೆಯಾಗಿತಮ್ಮ ಮಕ್ಕಳನ್ನು ಸಾಕುವ ಸಲುವಾಗಿ ಪರರ ಮಕ್ಕಳಿಗೆ ಪಾಠ ಹೇಳಿ ದುಡಿಯುವ ಮಹಿಳೆಯಾದರೂ. ಈ ನಡುವೆ ಗಾಂಧಿಜಿಯವರೊಡನೆ ಪತ್ರ ವ್ಯವಹಾರ ನಡೆಸಿ ದೇಶ ಪ್ರೇಮವನ್ನು ತೋರಿದರು.

ವಾಸಂತಿಯವರು ತಮ್ಮ ಬದುಕಿನುದ್ದಕ್ಕೂ ಕುರುಡುಶ್ರದ್ಧೆ, ಅಂಧಾನುಕರುಣೆ, ಜಡ ಆಚರಣೆಗಳನ್ನು ಪ್ರಶ್ನಿಸುತ್ತಲೇ ಬಂದರು. ಸಮಾಜಕ್ಕೆ ಹೆದರುವ ಜಾಯಮಾನ ಅವರದಾಗಿರಲಿಲ್ಲ. ಪತಿ ಕುಟುಂಬದ ಬಗೆಗೆ ತೋರಿದ ನಿರ್ಲಕ್ಷ್ಯದಿಂದಾಗಿ ತಾವೇ ಕುಟುಂಬದ ಹೊಣೆ ಹೊತ್ತರು ಮೆಟ್ರಿಕ್ ಮುಗಿಸಿ ಹಿಂದಿ ಕೋವಿದೆಯಾಗಿ ತಮ್ಮ ಮಕ್ಕಳನ್ನು ಸಾಕುವ ಸಲುವಾಗಿ ಪರರ ಮಕ್ಕಳಿಗೆ ಪಾಠ ಹೇಳಿ ದುಡಿಯುವ ಮಹಿಳೆಯಾದರೂ. ಈ ನಡುವೆ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಚರಕಕ್ಕೆ ಅಂಟಿಕೊಂಡರು. ಗಾಂಧೀಜಿಯವರೊಡನೆ ಪತ್ರ ವ್ಯವಹಾರ ನಡೆಸಿ ದೇಶ ಪ್ರೇಮವನ್ನು ತೋರಿದರು.

ವಾಸಂತಿಯವರಿಗೆ ಕನ್ನಡವಲ್ಲದೆ ಹಿಂದಿ, ಇಂಗ್ಲಿಷ್, ಗುಜರಾತಿ, ಬಂಗಾಳಿ, ಮರಾಠಿ, ಕೊಂಕಣಿ, ಭಾಷೆಗಳು ಚೆನ್ನಾಗಿ ಬರುತ್ತಿದ್ದವು. ಬೇರೆ ಬೇರೆ ಭಾಷೆಗಳಿಗೆ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಅನುವಾದ ಮಾಡಿದರು. ಕಥೆಗಳನ್ನು, ಕಾದಂಬರಿಗಳನ್ನು ಬರೆದರು. ಚಲನಚಿತ್ರಗಳಿಗೆ ಚಿತ್ರಕಥೆ, ಸಂಭಾಷಣೆ ಬರೆದರು. ವಾಸಂತಿಯವರು ೧೯೬೫ರಲ್ಲಿ 'ಮಿಥುನಲಗ್ನ', ೧೯೫೫ರಲ್ಲಿ 'ಕರ್ಮಚಾರಿ' ಎಂಬ ಕಾದಂಬರಿಗಳನ್ನು ಬರೆದಿದ್ದಾರೆ. ೧೯೮೩ರಲ್ಲಿ ಬರೆದ 'ನನ್ನ ಮಗ ಗುರುದತ್ತ' ಕನ್ನಡ

[illegible]

ಮಹಿಳಾ ಜೀವನ ಚರಿತ್ರೆಗಳಲ್ಲಿ ತುಂಬ ವಿಭಿನ್ನ ನೆಲೆಯಲ್ಲಿ ನಿಲ್ಲುತ್ತದೆ. ೧೯೮೫ರಲ್ಲಿ ತಮ್ಮ ೭೩ನೇ ಇಳಿವಯಸ್ಸಿನಲ್ಲಿ ರಚಿಸಿದ 'ಜೀವನದ ಹೋರಾಟ' ಅವರ ಆತ್ಮಕಥೆಯಾಗಿದೆ. ಇದಲ್ಲದೇ 'ಮೋಹಿನಿ', 'ತ್ಯಾಗವೋ ಒಪ್ಪಿಗೆಯೋ', 'ಪುನರ್ಜೀವ' ಎಂಬ ಕಥೆಗಳನ್ನು ಬರೆದಿದ್ದಾರೆ.

ವಾಸಂತಿ ಪಡುಕೋಣೆಯವರು ಸಮಕಾಲೀನ ಬದುಕಿನ ಸಮಸ್ಯೆಗಳನ್ನು ಎಚ್ಚರದ ಕಣ್ಣಿನಿಂದ ಪರೀಕ್ಷಿಸುತ್ತಾರೆ. ದುಡಿಯುವ ಹೆಣ್ಣಿನ ಸಮಸ್ಯೆಯಾಗಬಹುದು, ವರದಕ್ಷಿಣೆಯ ಸಮಸ್ಯೆಯಾಗಬಹುದು, ಇವು ಅವರ 'ಸಮಸ್ಯೆ', 'ವರದಕ್ಷಿಣೆ', 'ಸಮಾಜದ ಅಗ್ನಿಕುಂಡ' ಮುಂತಾದ ಕಥೆಗಳಲ್ಲಿ ಪರಿಣಾಮಕಾರಿಯಾಗಿ ಚಿತ್ರಿತ–ಗೊಂಡಿದೆ. ೧೯೭೫ರ ದಶಕದೊಳಗೆ ರಚಿತಗೊಂಡ ಅವರ ಕೃತಿಗಳಲ್ಲಿ ಕಷ್ಟದ, ಬಡತನದಲ್ಲಿ ಕನಲಿದ ನಿಟ್ಟುಸಿರುಗಳಿವೆ.

ಅಧ್ಯಾಯ – ೩

ಕನ್ನಡದಲ್ಲಿ ಆತ್ಮಚರಿತ್ರೆಯ ಸ್ವರೂಪ

ಸಾಹಿತ್ಯವು ಮಾನವನ ಆಸೆ ಆಕಾಂಕ್ಷೆಗಳನ್ನು ಆತನ ಅನುಭವಗಳನ್ನು ಹೊರಹೊಮ್ಮಿಸುವ ಮಾಧ್ಯಮವಾಗಿದೆ. ಮಾನವನಿಗೆ ತನ್ನ ಜೀವನದ ಘಟನೆಗಳನ್ನು ಹೇಳಿಕೊಳ್ಳಲು ಸಾಹಿತ್ಯಕ್ಕಿಂತ ಉತ್ತಮವಾದ ಮಾರ್ಗ ಬೇರೊಂದಿಲ್ಲ. ಹಿಂದಿನವರ ಜೀವನವನ್ನು ಮುಂದಿನವರು ಅರಿತುಕೊಳ್ಳಲು ಈ ಮಾರ್ಗವು ದಾರಿದೀಪವಾಗಿದೆ. ಘಟನೆಗಳನ್ನು ತಿಳಿಸಿಕೊಡುತ್ತದೆ. ಆದರೆ ಆತ್ಮಚರಿತ್ರೆ ಒಬ್ಬ ವ್ಯಕ್ತಿಯ ಹೊರಗಿನ ವಿಷಯಗಳನ್ನು ತಿಳಿದುಕೊಳ್ಳಲು ಅನುವಾಗಿದೆ. ಮಹಾನ್ ವ್ಯಕ್ತಿಗಳ ಜೀವನದಲ್ಲಿ ನಡೆದಂತಹ ಘಟನೆಗಳನ್ನು ತಿಳಿದುಕೊಳ್ಳುವ ತವಕ, ಆಸೆಯಿರುತ್ತದೆ. ಆ ಆಸೆಯನ್ನು ಈ ಮಾರ್ಗವು ಈಡೇರಿಸುತ್ತದೆ. ಇನ್ನೊಬ್ಬರ ಖಾಸಗಿ ಬದುಕಿನಲ್ಲಿ ಇಣುಕಿನೋಡುವ ಉತ್ಸುಕತೆ ಮಾತ್ರ ಆತ್ಮಕಥೆಯ ಓದಿಗೆ ಕಾರಣವಾಗುವುದಿಲ್ಲ, ಉತ್ಸುಕತೆಗಾಗಿ ಓದುವವರು ಇರಬಹುದಾದರೂ ಅವರ ಸಂಖ್ಯೆ ವಿರಳ.

ಮನುಷ್ಯನ ಭಾವನೆಗಳು, ವಿಚಾರಗಳು ಮತ್ತು ನೆನಪುಗಳು ಅನುಭವ ವೇದ್ಯವಾಗಿ ಮೂರ್ತೀಕರಣಗೊಂಡು ಸೌಂದರ್ಯಾತ್ಮಕ ರೂಪದಲ್ಲಿ ಮೈದಳೆದು ನಿಂತಾಗ ಸಾಹಿತ್ಯವೆನಿಸುತ್ತದೆ. ಮನುಷ್ಯನ ಸೃಜನಶೀಲತೆ ಮತ್ತು ಅಭಿವ್ಯಕ್ತಿ ಸಾಮರ್ಥ್ಯಗಳು ಸಾಹಿತ್ಯ ಪ್ರಕಾರಗಳ ಹರವನ್ನು ಹೆಚ್ಚಿಸುತ್ತಲೇ ಇವೆ. ಕಾದಂಬರಿ, ಸಣ್ಣಕಥೆ, ನಾಟಕ, ಕಾವ್ಯ, ವಿಮರ್ಶೆ, ಜೀವನಚರಿತ್ರೆ ಹೀಗೆ ಪಟ್ಟಿ ಮುಂದುವರಿಯುತ್ತಲೇ ಇದೆ. ಜೀವನ ಚರಿತ್ರೆಗಳನ್ನು ಬರೆಯುವ ಕಾಯಕ ಇಂದು ನೆನ್ನೆಯದಲ್ಲ. ಅದಕ್ಕೆ ಹಲವಾರು ವರ್ಷಗಳ ಇತಿಹಾಸವಿದೆ. ಹೀಗಾಗಿ ಮೊದಲು ಜೀವನಚರಿತ್ರೆಯನ್ನು ಸಾಹಿತ್ಯ ಪ್ರಕಾರವಾಗಿ ನೋಡುವ ಪರಿಪಾಠ ಬೆಳೆಯಿತು. ಅದರ ಜೊತೆ ಜೊತೆಯಲ್ಲೇ ಬೆಳೆದ ಆತ್ಮಕಥೆಯ ಬರವಣಿಗೆಗಳು ಜೀವನ ಚರಿತ್ರೆಯ ಭಾಗವಾಗಿಯೇ ಬಳಕಯಲ್ಲಿದ್ದವು. ತೀರ ಇತ್ತೀಚೆಗೆ ಆತ್ಮಕಥೆಯನ್ನು ಸಾಹಿತ್ಯದ ಮಹತ್ವದ ಪ್ರಕಾರವಾಗಿ ನೋಡುವ ಕಾಲ ಬಂದಂತಿದೆ.

ಜೀವನಚರಿತ್ರೆಗಳಿಂದ ಆತ್ಮಚರಿತ್ರೆಗಳಿಗೆ ಬಂದರೆ ಅವು ಜೊತೆ ಜೊತೆಗೆ ಮೊಳಕೆಯೊಡೆಯುವ ಇತರ ಮೊಗ್ಗುಗಳಿದ್ದಂತೆ, ಜೀವನ ಚರಿತ್ರೆಯ ಜೊತೆಯಲ್ಲೇ ಪಳಕೆಗಳನ್ನು ಬಿಡುತ್ತಸಾಗಿ ಬಂದವುಗಳು. ಇಂದು ಸ್ವತಂತ್ರ ಪ್ರಕಾರವಾಗುವಷ್ಟು ಬೆಳೆದು ನಿಂತರೂ ಮೊದಲಿನಿಂದಲೂ ಜೀವನ ಚರಿತ್ರೆಯ ಮಗ್ಗುಲಿನಲ್ಲಿಯೇ ಆತ್ಮಚರಿತ್ರೆಯನ್ನು ಹುಡುಕಬೇಕಾಗುತ್ತಿತ್ತು.

ಆತ್ಮಚರಿತ್ರೆ ಒಬ್ಬ ವ್ಯಕ್ತಿಗೆ ಸಂಬಂಧಿಸಿದ್ದು, ಕ್ರಿ.ಶ. ೧೯೮೨ರಲ್ಲಿ ಫ್ರೈಡನ್ ಎಂಬುವವನು ಮೊಟ್ಟಮೊದಲನೆಯದಾಗಿ 'ಬಯಾಗ್ರಫಿ' ಎಂಬ ಶಬ್ದವನ್ನು ಉಪಯೋಗಿಸಿದನು. ಬಯಾಗ್ರಫಿ ಎಂದರೆ ಜೀವನಚರಿತ್ರೆ ಆಟೋಬಯಾಗ್ರಫಿ ಎಂದರೆ ಆತ್ಮಚರಿತ್ರೆ. ಒಬ್ಬ ವ್ಯಕ್ತಿಯ ಜೀವನಚರಿತ್ರೆಯನ್ನು ಮತ್ತೊಬ್ಬ ವ್ಯಕ್ತಿಯು ಬರೆದಾಗ ಅದು ಜೀವನ ಚರಿತ್ರೆಯಾಗುತ್ತದೆ. ಒಬ್ಬ ವ್ಯಕ್ತಿಯು ತನ್ನ ಜೀವನ ಚರಿತ್ರೆಯನ್ನು ತಾನೇ ಬರೆದಾಗ ಆತ್ಮಚರಿತ್ರೆಯಾಗುತ್ತದೆ.

ಆತ್ಮಜೀವನ, ಆತ್ಮಕಥಾ, ಆತ್ಮಚರಿತ್, ಆತ್ಮಚರಿತ್ರೆ, ಆತ್ಮವೃತ್ತ, ಜೆತ್‌ನಾಮ್, ಆತಮ್‌ಕಥ ಮೊದಲಾಗಿ ಭಾರತೀಯ ಭಾಷೆಗಳಲ್ಲಿ ಅನುವಾದಿಸಲ್ಪಟ್ಟ ಇಂಗ್ಲಿಷಿನ 'Autobiography' ಪದ ಗ್ರೀಕ್ ಮೂಲದ autos, 'self', bios, life' ಮತ್ತು graphein, write ಶಬ್ದಗಳ ಮಿಲನದಿಂದ 'self-life-writing' ಅಂದರೆ 'ತನ್ನನ್ನು ಕುರಿತು ಬರೆಯುವುದು' ಎಂಬರ್ಥದಲ್ಲಿ ಬಳಕೆಯಲ್ಲಿದೆ. ಈ Autobiography ಪದವನ್ನು ೧೮೦೯ರಲ್ಲಿ ರಾಬರ್ಟ್ ಸಾಥೆ ಎನ್ನುವವನು Quarterly Review' ಎಂಬ ಇಂಗ್ಲಿಷ್ ನಿಯತಕಾಲಿಕೆಯಲ್ಲಿ ಮೊಟ್ಟ ಮೊದಲಬಾರಿಗೆ ಬಳಸಿದನು. ಜೀವನಚರಿತ್ರೆಗಳು ಭಿನ್ನ ಭಿನ್ನ ದಾಖಲೆಗಳು ಮತ್ತು ಸಾಮಾನ್ಯ ಅಭಿಪ್ರಾಯಗಳ ತಳಹದಿಯ ಮೇಲೆ ರಚಿತವಾದರೆ ಆತ್ಮಚರಿತ್ರಾತ್ಮಕ ಬರಹಗಳು ಲೇಖಕನ ನೆನಪುಗಳ ಆಧಾರವನ್ನು ಹೊಂದಿದೆ. ಆತ್ಮಚರಿತ್ರೆಗೆ ಬಳಕೆಯಾದ ಪ್ರಾಚೀನ ಹೆಸರೇ ''apologia'. ಇದು ಸ್ವ-ವಿಮರ್ಶೆಗಿಂತ ಸ್ವ-ಸಮರ್ಥನೆಗೆ ಒತ್ತುಕೊಟ್ಟ ಪದ. ಈ ನೆಲೆಯಲ್ಲಿ ನಮಗೆ ಸಿಗುವ ಹೆಸರು ಜಾನ್ ಹೆನ್ರಿ ನ್ಯೂಮನ್‌ನ 'Appologia provitasva' ಈ ಮನೋಭಾವನೆಯು ಮುಂದೆ 'ಸೇಂಟ್ ಆಗಸ್ಟೀನ್' ಮತ್ತು 'ರೋಸೋ'ರವರ ಆತ್ಮಚರಿತ್ರೆಗಳಲ್ಲಿ ಮುಂದುವರಿಯಿತು, ೧೨೧-೮೦ಳರಲ್ಲಿ ಜೀವಿಸಿದ್ದ 'ಮಾರ್ಕಸ್ ಅರೀಲಿಯಸ್' ಎಂಬ ರಾಜನ 'ಮೆಡಿಟೇಷನ್ಸ್' ಎಂಬ ಕೃತಿಯೇ ಆತ್ಮಕಥೆಯ ಗುಂಪಿಗೆ ಸೇರಿದ ಅತ್ಯಂತ ಹಳೆಯ ಬರವಣಿಗೆಯೆಂದು ಹೇಳಲಾಗಿದೆ. ಮುಂದೆ ಸೇಂಟ್ ಅಗಸ್ಟೀನ್ ಬರೆದ 'ಕನ್‌ಫೆಷನ್ಸ್' ಆತ್ಮಚರಿತ್ರೆಗಳ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ನಂತರದ್ದು ಕ್ರಿ.ಶ. ೧೫೭೩ರಲ್ಲಿ ಬರೆಯಲ್ಪಟ್ಟ 'ಪೂಯಟಿಕಲ್ ನೆಗೆಟಿವ್ ಆಫ್ ಥಾಮಸ್ ಟಸರ್' ಎಂಬ ಆತ್ಮಕಥೆ ಪಾಶ್ಚಾತ್ಯ ಸಂದರ್ಭದಲ್ಲಿ ಈ ಪ್ರಕಾರ ೧೮, ೧೯ ಮತ್ತು ೨೦ನೇ ಶತಮಾನಗಳಲ್ಲಿ ಅಧಿಕವಾಗಿ ಬೆಳೆದರೂ ಭಾರತೀಯ ಸಂದರ್ಭದಲ್ಲಿ ಬೆಳೆಯಲು ವಿಳಂಬವಾಯಿತು. ಭಾರತೀಯರು ಲೌಕಿಕ ವಿಚಾರಗಳಿಗಿಂತ ಅಲೌಕಿಕ ವಿಚಾರಗಳಿಗೆ ಮಹತ್ವ ಕೊಡುವವರಾಗಿದ್ದರು. ಹೀಗಾಗಿ ವ್ಯಕ್ತಿಗಳಿಗಿಂತ ದೇವರು, ದೇವತೆ, ಪುರಾಣಗಳಲ್ಲಿ ಆಸಕ್ತಿ ತಳೆದವರಾಗಿದ್ದರು.

ಗಯಟೆಯ Dichtung and wahreit ಇಂದಿಗೂ ಜರ್ಮನಿಯಲ್ಲಿ ಅತ್ಯಂತ ಪ್ರಸಿದ್ಧ ಆತ್ಮಚರಿತ್ರೆಯಾಗಿದೆ. ರೂಸೋ ಮತ್ತು ಅಗಸ್ಟೀನ್‌ರ 'ಕನ್‌ಪೆಷನ್ಸ್', ಟಿ.ಎಸ್.ಈಲಿಯಟ್‌ನ 'Four Quarters', ಯೀಟ್ಸ್‌ನ್ 'Collected poems' ಇವುಗಳನ್ನು 'ಆಧ್ಯಾತ್ಮಿಕ ಆತ್ಮಚರಿತ್ರೆ' 'Spiritual Autobiography'ಗಳೆಂದು ಕರೆಯುತ್ತಾರೆ. ಮೈಖೆಲ್ ಮಾಂಟೇನನ 'Essays' ಮತ್ತು ಅದರಿಂದ ಮುಂದೆ ಪ್ರಕಟವಾದ ಭಾಗಗಳ ಸಂಕಲನ ಧಾರ್ಮಿಕ ಮತ್ತು ನೈತಿಕ ಉದ್ದೇಶಗಳಿಂದ ಮುಕ್ತವಾದ ಸ್ವಾಭಾವಿಕ ಇಚ್ಛೆಯನ್ನು ಬಹಿರಂಗಪಡಿಸುವ ಮೊಟ್ಟಮೊದಲ ಆತ್ಮಕಥನವಾಗಿದೆ.

ಯುರೋಪಿನಲ್ಲಿ ಆತ್ಮಕಥೆ ಬೆಳೆದು ಬರುವುದಕ್ಕೆ ಕ್ರೈಸ್ತಮತದ ಪ್ರಮುಖ ಅಂಶಗಳಲ್ಲೊಂದಾದ 'ಪಾಪ ನಿವೇದನೆ'ಯು ಕಾರಣ ಎಂದು ಹೇಳಲಾಗಿದೆ. ಜಾಗತಿಕ ಸಂದರ್ಭದಲ್ಲಿ ಆತ್ಮಚರಿತ್ರೆಗಳನ್ನು ಹಲವಾರು ಕೋನಗಳಿಂದ ದೃಷ್ಟಿಸಲಾಗಿದೆ. ಈ ಕಾರಣದಿಂದ 'ಜೇಮ್ಸ್‌ಬಲ್ನಿ' ಈ ರೀತಿ ಬರೆಯುತ್ತಾರೆ. "ಒಬ್ಬ ಓದುಗನಿಗೆ ಆತ್ಮಕಥೆಯಾಗಿ ಕಂಡಿದ್ದು ಇನ್ನೊಬ್ಬನಿಗೆ ಇತಿಹಾಸ ಅಥವಾ ತತ್ವಶಾಸ್ತ್ರವಾಗಿಯೋ, ಮನೋವಿಜ್ಞಾನ ಅಥವಾ ಕಾವ್ಯಸಾಹಿತ್ಯವಾಗಿಯೋ, ಸಮಾಜಶಾಸ್ತ್ರ ಅಥವಾ ಆಧ್ಯಾತ್ಮಿಕ ಸಿದ್ಧಾಂತವಾಗಿಯೋ ಕಾಣಬಹುದಾಗಿದೆ"[೧] ಹೀಗಾಗಿ ಮನೋವಿಶ್ಲೇಷಣ ವಿಮರ್ಶಕರು ಆತ್ಮಕಥೆ ಬರೆಯುವುದನ್ನು, ಆತ್ಮವನ್ನು ಪುನಾರಚಿಸುವ ಲೇಖಕನ ಪ್ರಯತ್ನವಾಗಿದ್ದು ಆಂತರಿಕ ಉದ್ವೇಗಗಳನ್ನು ಉಪಶಮನಗೊಳಿಸಿಕೊಳ್ಳುವ ಚಿಕಿತ್ಸಕ ಪದ್ಧತಿಯಾಗಿದೆ ಎಂದಿದ್ದಾರೆ. ಸಿಗ್ಮಂಡ್ ಫ್ರಾಯ್ಡ್ ೧೯೨೫ರಲ್ಲಿ 'ಆತ್ಮಚರಿತ್ರಾತ್ಮಕ ಅಧ್ಯಯನ' ಎಂಬ ಪುಸ್ತಕವನ್ನು ಬರೆದು ಅದರಲ್ಲಿ ತನ್ನ ಸ್ವಂತ ಜೀವನ ಕಥೆಯೇ ತನ್ನ 'ಮನೋವಿಶ್ಲೇಷಣ ಸಿದ್ಧಾಂತ'ಕ್ಕೆ ಸಾಮಗ್ರಿಯಾಗಿದೆ ಎಂದಿದ್ದಾರೆ. ಫ್ರಾಯ್ಡ್ ಹೇಳುವ ಹಾಗೆ ಜೀವನ ಚರಿತ್ರಾತ್ಮಕ ಮತ್ತು ಆತ್ಮಚರಿತ್ರಾತ್ಮಕ ಬರಹಗಾರರನ್ನು ಸುಳ್ಳುಗಳು, ಗೌಪ್ಯಗಳು ಮತ್ತು ಮಿಥ್ಯಾಚಾರಗಳೆಂಬ ನೆರಳು ಸದಾ ಹಿಂಬಾಲಿಸುತ್ತಿದ್ದು ಆ ಅಂಶಗಳ ಮೂಲಕವೇ ನನ್ನ ಮನೋವಿಶ್ಲೇಷಣ ತತ್ವಗಳಿಗೆ ಸೈದ್ಧಾಂತಿಕ ಜಯ ಸಿಕ್ಕಿದೆ ಎಂದಿದ್ದಾರೆ. ಬಹುಶಃ ಈ ಕಾರಣದಿಂದ ಆತ್ಮಚರಿತ್ರೆ ಬರೆಯುವವರು 'ಆರಾಧಾನಾ' ಮತ್ತು 'ಸ್ವಾರಾಧನಾ ಪ್ರವೃತ್ತಿ'ಗೆ ಜೋತುಬೀಳುವುದು ಸಹಜ. ಈ ಎಂಬ 'Narcissim' ಎಂಬ ಪದವೇ ನೀರಿನಲ್ಲಿ ಪ್ರತಿಫಲವಾದ ಸ್ವಷ್ಟರೂಪದಲ್ಲಿ ಮೋಹಗೊಂಡ 'Nakissos' ಎಂಬ ಗ್ರೀಕ್ ತರುಣನ

---

೧. ಆಲಯಗಳ ಬಯಲು, ಸಂಪಾದಕರು ಡಾ. ಶ್ರೀಪಾದಶೆಟ್ಟಿ, ಪು. ೧೧, ಡಾ. ಗುರುಪಾದ ಮರಿಗುದ್ದಿ.

ಹೆಸರಿನಿಂದ ಬಂದುದಾಗಿದೆ. ಹೀಗಾಗಿ ಆತ್ಮಚರಿತ್ರೆ ಬಹಳಷ್ಟು ವೇಳೆ 'ಆತ್ಮಶ್ಲಾಘನೆ'-ಯಾಗಿರುತ್ತದೆ ಎಂದು ಅನೇಕರ ಅಭಿಪ್ರಾಯ.

ಪಾಶ್ಚಾತ್ಯ ಸಂದರ್ಭದಲ್ಲಿ ಹೆಸರಿಸಬೇಕಾದ ಇನ್ನೊಂದು ಅದ್ವಿತೀಯ ಆತ್ಮಚರಿತ್ರೆ 'The Autobiography of Benjamin Franklin', ಆತ್ಮಚರಿತ್ರೆ ಬರವಣಿಗೆಯಲ್ಲೇ ಇದೊಂದು ಮಿನುಗುತಾರೆಯೆಂದು ಖ್ಯಾತಿಯಾಗಿದೆ. ಸಾಹಿತ್ಯ ಮತ್ತು ಐತಿಹಾಸಿಕ ಮೌಲ್ಯಗಳಿಗೆ ನೀಡಿದ ಕೊಡುಗೆಯಿಂದಾಗಿ ಶ್ಲಾಘನೆಗೊಳಗಾಗಿರುವ ಕೃತಿ, ಬಹುಷಃ ಫ್ರಾಂಕ್ಲಿನ್ ಜೀವನದ ಕುರಿತು ಸರಳವಾಗಿ ನೇರವಾಗಿ ಹೇಳುವ ರೀತಿ ಮಿಲಿಯನ್‌ಗಟ್ಟಲೆ ಓದುಗರಿಗೆ ಖುಷಿ ಕೊಟ್ಟಿರಲಾರದೆ ಇರದು ಎಂದೆನಿಸುತ್ತದೆ. ಪಾಶ್ಚಾತ್ಯ ಮಾದರಿಯ ಆತ್ಮಕಥೆಗಳ ವಿಶಿಷ್ಟರೂಪಗಳನ್ನು ವಿಷಯ ನಿರೂಪಣಾತ್ಮಕ, ಧಾರ್ಮಿಕ, ಬೌದ್ಧಿಕ ಮತ್ತು ಕಾಲ್ಪನಿಕ ಎಂದು ವಿಂಗಡಿಸಲಾಗಿದೆ. ಹಿಟ್ಲರನ 'Main Kamif', (೧೯೨೪) ಅಗಸ್ಟೀನ್‌ನ 'ಕೆನ್‌ಫೇಷನ್ಸ್', ತತ್ವಜ್ಞಾನಿ ಜಾನ್‌ಮಿಲ್ಲಿನ ಆತ್ಮಕಥೆ ಸ್ಯಾಮಯಲ್ ಬಟ್ಲರ್‌ನ 'Way of all Flesh' (೧೯೦೩) ಅನುಕ್ರಮವಾಗಿ ಅವುಗಳಿಗೆ ಉದಾಹರಣೆಗಳು, ಹಾಗೆಯೇ ಪಾಶ್ಚಾತ್ಯರಲ್ಲಿ ಕ್ರೀಡಾಪಟುಗಳು ಮತ್ತು ಮಾಧ್ಯಮ ಶ್ರೇಷ್ಠರನ್ನು ಕುರಿತು ಬೇರೆಯವರು 'ತತ್ಕಾಲದ ಆತ್ಮಚರಿತೆ' (ad hoc autobiography)ಗಳನ್ನು ಬರೆಯುತ್ತಿದ್ದರೆಂದು ತಿಳಿದು ಬರುತ್ತದೆ. ಮತ್ತು ಆತ್ಮಚರಿತ್ರೆಯನ್ನು ಬರೆಯುವಾಗ ಮೂರು ಮುಖ್ಯ ಸಂಗತಿಗಳ ಬಗ್ಗೆ ಲಕ್ಷ್ಯವಿರಿಬೇಕೆಂದು ಕೆಲವರು ಸ್ಪಷ್ಟಪಡಿಸುತ್ತಾರೆ. ಜೀವನದಲ್ಲಿ ನೀವ್ಯಾರು? ಇಲ್ಲಿ ನಿಮ್ಮ ಹೆಸರಿನ ಜೊತೆ, ನಿಮ್ಮ ವ್ಯಕ್ತಿತ್ವ, ಶಿಕ್ಷಣ, ಪ್ರಶಸ್ತಿಗಳು ಸತ್ಯಾಂಶಗಳೊಂದಿಗೆ ನಿರೂಪಿತವಾಗಿರಬೇಕು. ನೀವು ಕಂಡ ಜೀವನ? ಇಲ್ಲಿ ನೀವು ಜೀವನವನ್ನು ನೋಡುವ ರೀತಿ, ಹರ್ಷಿತರೋ ದುಃಖಿತರೋ ಗೆಳೆಯ-ಗೆಳತಿಯರು ಮೆಚ್ಚುವ ಸ್ಥಳಗಳು ಸಂಬಂಧಗಳ ಕುರಿತಾಗಿರಬೇಕು. ಮೂರನೆಯದರಲ್ಲಿ ನೀವು ಭವಿಷ್ಯದ ಬಗ್ಗೆ ಹೊಂದಿರುವ ಸಾಮಾನ್ಯಭಿಪ್ರಾಯವಿರಬೇಕು. ಉದಾಹರಣೆಗೆ ನೀವು ಯಾವ ರೀತಿಯ ಭವಿಷ್ಯವನ್ನು ನಿರೀಕ್ಷಿಸುತ್ತೀರಿ? ಎಲ್ಲಿರುತ್ತೀರಿ? ಹೇಗೆ ಜೀವಿಸಲು ಇಚ್ಛಿಸುತ್ತೀರಿ? ಮದುವೆ ಯಾಗುತ್ತೀರಾ? ಮಕ್ಕಳಿರುತ್ತಾರಾ? ಇತ್ಯಾದಿಗಳು ಒಳಗೊಂಡಿರಬೇಕು. ಸಮರೋಪದಲ್ಲಿ ಮೊದಲು ಹೇಳಿದ ಅಂಶಗಳನ್ನೆಲ್ಲ ಪುನರ್ ಸೃಷ್ಟಿಸಿ ಹೇಳಿ ಅದಕ್ಕೊಂದು ಉತ್ತಮ ಮುಕ್ತಾಯ ಕೊಡಬೇಕಾಗುತ್ತದೆ. ಇದು ಆತ್ಮಕಥೆಯ ಮಹತ್ವದ ಭಾಗವೂ ಹೌದು.

ಅನೇಕ ಪಾಶ್ಚಾತ್ಯ ವಿದ್ವಾಂಸರು ಆತ್ಮಕಥೆ ಮತ್ತು ಅದರ ಬರವಣಿಗೆಯನ್ನು ಹಲವಾರು ದೃಷ್ಟಿಕೋನಗಳಿಂದ ವ್ಯಾಖ್ಯಾನಿಸಿದ್ದಾರೆ. 'Quentiro crisp' ಪ್ರಕಾರ 'ಆತ್ಮಕಥೆ ಎನ್ನುವುದು ಅಂತಾಧ್ಯಾಯ ರಹಿತ ಧಾರಾವಾಹಿ ರೂಪದ

[illegible]

ಚರಮಗೀತೆ'ಯಾದರೆ, "ಆತ್ಮಚರಿತಾತ್ಮಕ ದತ್ತವು, ಅದರಲ್ಲೂ ಸಾರ್ವಜನಿಕ ದಾಖಲೆಯಾಗುಳಿದಿರುವುದು ಒಬ್ಬನ ಅತ್ಯಂತ ಖಾಸಗಿ ವಿಚಾರವಾಗಿದ್ದು, ಅದನ್ನು ಮುಕ್ತವಾಗಿ ಪ್ರಚುರಪಡಿಸುವುದು ಮನೋವಿಶ್ಲೇಷಕನನ್ನು ಎದುರಿಸಿದಂತೆ"[೧] ಎಂದು `Italo caluino' ಅಭಿಪ್ರಾಯಪಡುತ್ತಾರೆ. "ಆತ್ಮಚರಿತ್ರೆಯೊಂದು ಸ್ವಲ್ಪವಾದರೂ ಅಪಕೀರ್ತಿಯನ್ನು ತೋರ್ಪಡಿಸುತ್ತಿದ್ದರೆ ಮಾತ್ರ ಅದನ್ನು ನಂಬಬಹುದು. ಯಾರ ಬದುಕನ್ನು ಒಳಹೊಕ್ಕು ನೋಡಿದಾಗ ಸೋಲುಗಳ ಸರಮಾಲೆಯೇ ಆಗಿರುವುದರಿಂದ ಯಾರೋಬ್ಬರೂ ತಮ್ಮ ಬದುಕಿನ ಬಗ್ಗೆ ಒಳ್ಳೆಯ ಮಾತನ್ನೇ ಹೇಳಿದ್ದರೆ ಅವರು ಬಹುಶಃ ಸುಳ್ಳು ನುಡಿಯುತ್ತಿರಬೇಕೆಂದು ಭಾವಿಸಬೇಕಾಗುತ್ತದೆ."[೨] ಎಂದು `George orweli ಬರೆಯುತ್ತಾರೆ.

"ನೀವು ನಿಮ್ಮ ಜೀವನದ ಕುರಿತು ಬರೆಯುವಾಗ ಅದರ ಪ್ರತಿ ಪುಟವೂ ಯಾರು ಎಂದಿಗೂ ಕೇಳಿರದ ಅಂಶಗಳನ್ನು ಹೊಂದಿರಬೇಕು"[೩] ಎನ್ನುವುದು 'Elias canetti' ಅವರ ನಿಲುವು.

"ನಾನು ಕಲ್ಪಿಕತೆ ಬರೆದರೆ ಅದನ್ನು ಆತ್ಮಚರಿತ್ರೆ ಎನ್ನುತ್ತಾರೆ; ನಾನು ಆತ್ಮಚರಿತ್ರೆಯನ್ನು ಬರೆದರೆ ಅದನನು ಕಲ್ಪಕತೆ (fiction) ಎನ್ನುತ್ತಾರೆ. ಹೀಗೆ ಕೆಲವೊಮ್ಮೆ ನಾನು ದಡ್ಡನಾಗಿಯೂ ಅವರು ಬಹಳ ಜಾಣರಾಗಿಯೂ ಕಾಣುವುದರಿಂದ ಅದು ಏನೆಂಬುದನ್ನು ಅವರೇ ನಿರ್ಧರಿಸಲಿ"[೪] ಎಂದು ತಮ್ಮ ಮನದಳಲನ್ನು ತೋಡಿಕೊಳ್ಳುತ್ತಾರೆ. 'Philips Roth. "ಒಬ್ಬನ ಆತ್ಮಚರಿತ್ರೆಯಲ್ಲಿ ಅವನ ಇತ್ತೀಚಿನ ಒಲವುಗಳಿಗನುಸಾರವಾಗಿ ಅವನ ಹಿಂದಿನ ಬದುಕನ್ನು ತಿರುಚಿ ಹೇಳಬೇಕಾಗುತ್ತದೆ. ಬಹಳ ಆದರ್ಶ ಆತ್ಮಚರಿತ್ರೆ ಬಹುಶಃ ಅವನು ಹೇಗಿದ್ದ ಎಂಬುದಕ್ಕಿಂತ ಹೇಗಿದ್ದಾನೆ ಎನ್ನುವುದನ್ನು ಪ್ರತಿಬಿಂಬಿಸುತ್ತದೆ" ಎನ್ನುತ್ತಾರೆ. Frawn M-Brodie, 'oscar wilde' ಬರೆಯುತ್ತಾ "ಆಧುನಿಕ ವೃತ್ತಾಂತಗಳು ನನಗೆ ಸೇರುವುದಿಲ್ಲ. ಸಾಮಾನ್ಯವಾಗಿ ಅವುಗಳನ್ನು ತಮ್ಮ ನೆನಪುಗಳನ್ನೆಲ್ಲ ಸಂಪೂರ್ಣ ಮರೆತವರು ಅಥವಾ ನೆನಪಿಡುವಂತಹ ಯಾವುದನ್ನೂ ಮಾಡದವರು ಬರೆದಿರುತ್ತಾರೆ" ಎಂದಿದ್ದಾರೆ. "ಆತ್ಮಚರಿತ್ರೆ ಏಕಾಂಗಿತನದಿಂದ ಪ್ರಾರಂಭವಾಗುತ್ತದೆ. ಅದು ಒಂದು ಅನಾಥ ಸಾಹಿತ್ಯ

---

೧. ಆಲಯಗಳ ಬಯಲು, ಸಂಪಾದಕರು ಡಾ. ಗುರುಪಾದ ಮರಿಗುದ್ದಿ, ಪು. ೧೩.

೨. ಆಲಯಗಳ ಬಯಲು, ಸಂಪಾದಕರು ಡಾ. ಗುರುಪಾದ ಮರಿಗುದ್ದಿ, ಡಾ. ಶ್ರೀಪಾದ ಶೆಟ್ಟಿ ಪು. ೧೧.

೩. ಆಲಯಗಳ ಬಯಲು, ಸಂಪಾದಕರು ಡಾ. ಗುರುಪಾದ ಮರಿಗುದ್ದಿ, ಪು. ೧೧,

೪. ಆಲಯಗಳ ಬಯಲು, ಸಂಪಾದಕರು ಡಾ. ಗುರುಪಾದ ಮರಿಗುದ್ದಿ, ಪು. ೧೪.

ಪ್ರಕಾರವಾಗಿದೆ" ಎನ್ನುವ ಮಾತು ಅವರದಾಗಿದೆ. "ನಾವು ನಮ್ಮ ಪಾಪಕಾರ್ಯಗಳ ಬಗ್ಗೆ ಮಾತ್ರ ಚೆನ್ನಾಗಿ ಬರೆಯಬಲ್ಲವು. ಯಾಕೆಂದರೆ ಒಂದು ಸತ್ಕಾರ್ಯದ ಬಗ್ಗೆ ನೆನಪಿಸಿಕೊಳ್ಳುವುದಾಗಲೀ, ಆ ಕಾರ್ಯವೂ ಸಹ ಸದುದ್ದೇಶ ಪರಿಣಾಮವೋ, ದುರುದ್ದೇಶದ ಪರಿಣಾಮವೋ ಎಂಬುದನ್ನು ಹೇಳುವುದಾಗಲೀ ಬಹಳ ಕಷ್ಟಕರವಾದುದು' ಎಂದು ಮತ್ತೊಂದು ರೀತಿಯಲ್ಲಿ ನಿರ್ವಹಿಸುತ್ತಾರೆ. 'Edward Danberg ಆತ್ಮಕಥೆ ಹೇಗಿರಬೇಕೆಂದು 'Evelyn Waugh' ಹೀಗೆ ಹೇಳುತ್ತಾರೆ. "ಜೀವನದ ಉದ್ದೇಶ ಮತ್ತು ಕಲೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಕೊಡಬೇಡಿ. ಅವು ಅಭಿವ್ಯಕ್ತಿಸಲಾಗದ ಕಡಿಮೆ ಸ್ವಾರಸ್ಯವುಳ್ಳದ್ದು. ನಿಮ್ಮನ್ನು ನೀವೇ ವಿಶ್ಲೇಷಿಸಿಕೊಳ್ಳಬೇಡಿ. ಸುಸಂಬದ್ಧ ಸತ್ಯಾಂಶಗಳನ್ನು ಕೊಡಿ ಮತ್ತು ಓದುಗರ ನಿರ್ಧಾರಕ್ಕೆ ಬಿಡಿ. ನಿಮ್ಮ ಕಥೆಗೆ ಅಂಟಿಕೊಳ್ಳಿ ಇದು ತಿಹಾಸ ಮಹತ್ವವುಳ್ಳ ವಿಷಯವಾಗಿರದೇ ಇರಬಹುದು. ಆದರೆ ಅದನ್ನು ಮಾತನಾಡಲು ನೀವು ವಿಶಿಷ್ಟ ಅರ್ಹತೆಯನ್ನು ಹೊಂದಿರುತ್ತೀರಿ. ಒಟ್ಟಿನಲ್ಲಿ "ಆತ್ಮಚರಿತ್ರೆ ಎನ್ನುವುದು ಒಬ್ಬ ವ್ಯಕ್ತಿಯ ಜೀವನದ ಬಗ್ಗೆ ಆತನೇ ಬರೆದ ಕಥೆ ಕಾಲಾನುಕ್ರಮ ಘಟನೆಗಳ ಜೊತೆಗೆ ಆ ಘಟನೆಗಳ ಪ್ರತಿಫಲನ ಮತ್ತು ಅದರಲ್ಲಿ ಭಾಗಿಯಾದ ವ್ಯಕ್ತಿಗಳನ್ನೊಳಗೊಂಡು ಸಮಕಾಲೀನ ಸಾಂಸ್ಕೃತಿಕ ಮತ್ತು ಸಾಮಾಜಿಕ ವ್ಯವಸ್ಥೆಯ ಟಿಪ್ಪಣಿಗಳನ್ನೊಳಗೊಂಡಿರಬಹುದು"[೧] ಎನ್ನುವುದು ಸಾಮಾನ್ಯವಾಗಿ ನಿರ್ವಹಿಸಲ್ಪಡುವಂತದ್ದು.

ಭಾರತೀಯ ಸಂದರ್ಭಕ್ಕೆ ಬಂದರೆ ೧೯ನೇ ಶತಮಾನದ ಮಧ್ಯದವರೆಗೂ ಆತ್ಮಚರಿತ್ರೆಗೊಂದು ಗಟ್ಟನೆಲೆ ಇರಲೇ ಇಲ್ಲ. ಅದು ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ ಹಾಸುಹೊಕ್ಕಾಗಿರಲಿಲ್ಲ. ತದನಂತರ ಅನೇಕ ಸಾಹಿತ್ಯ ಪ್ರಕಾರಗಳಂತೆ ಇದು ಕೂಡ ಪಾಶ್ಚಾತ್ಯಾರಿಂದ ಬಂದ ಬಳುವಳಿ. ಅಂದಿನಿಂದಲೂ ಜೀವನ ಚರಿತ್ರೆಗಳಲ್ಲೇ ಗುರುತಿಸಲ್ಪಡುತ್ತಿದ್ದ ಆತ್ಮಚರಿತ್ರೆಯ ಕೃಷಿ ಪ್ರತ್ಯೇಕವಾಗಿ ಬೆಳೆಯುವಷ್ಟು ಹೆಚ್ಚಾಯಿತು. ಗಾಂಧಿ, ನೆಹರೂ, ನೀರಧ್ ಚೌಧರಿಯಂಥವರ ಆತ್ಮಚರಿತ್ರೆಗಳು ಸಾಧಾರಣವಾಗಿ ಎಲ್ಲ ಭಾರತೀಯ ಭಾಷೆಗಳಲ್ಲಿ ಅನುವಾದವಾಗಿರುವುದಷ್ಟೇ ಅಲ್ಲ ಪ್ರಪಂಚದ ಬೇರೆ ಬೇರೆ ಭಾಷೆಗಳಿಗೂ ಅನುವಾದವಾಗಿವೆ.

ಭಾರತೀಯ ಆತ್ಮಚರಿತ್ರೆಗಳು ಭಿನ್ನ ಭಿನ್ನ ಭಾಷೆಗಳು, ಭಿನ್ನ ಭಿನ್ನ ಲೇಖಕರು, ಭಿನ್ನ ಭಿನ್ನ ಸಂಸ್ಕೃತಿಗಳ ಹಿನ್ನೆಲೆಯಿಂದ ವೈವಿಧ್ಯತೆಗೆ ಹೆಸರಾಗಿವೆ. ಗಾಂಧಿ(ಗುಜರಾತಿ), ನೆಹರೂ(ಇಂಗ್ಲಿಷ್), ಉಪೇಂದ್ರನಾಥ್ ಬಂಡೋಪಾಧ್ಯಾಯ (ಬಂಗಾಳಿ), ರಾಜೇಂದ್ರ–

---

೧. ಆಲಯಗಳ ಬಯಲು, ಸಂಪಾದಕರು ಡಾ. ಗುರುಪಾದ ಮರಿಗುದ್ದಿ, ಪು. ೧೪.

ಪ್ರಸಾದ್ (ಹಿಂದಿ), ಸಮಾಜ ಸುಧಾರಕರಾದ ಇ.ಎಂ.ಎಸ್. ನಂಬೂದ್ರಿಪಾದ್ (ಮಲಯಾಳಂ) ವಿ.ಡಿ.ಸಾವರಕರ್ (ಮರಾಠಿ), ಬಂಗಾಳದ ಈಶ್ವರಚಂದ್ರ ವಿದ್ಯಾಸಾಗರ್, ಆಂಧ್ರದ ಕೆ.ವೀರೇಶಲಿಂಗಂ ಪಂತುಲು, ಕೇರಳದ ಮನ್ನಾತ್ ಪದ್ಮನಾಭನ್, ಮಹಾರಾಷ್ಟ್ರದ ಡಿ.ಕೆ.ಕರ್ವೆ, ಮಹಾಲೇಖಕರಾದ ಅಸ್ಸಾಮಿಯ ಲಕ್ಷ್ಮಿನಾಥ ಬೆಜ್‌ಬರುವಾ, ಬಂಗಾಳದ ರವೀಂದ್ರನಾಥ ಟಾಗೂರ್ ಹಾಗೂ ಬುದ್ಧದೇವ, ಹಿಂದಿಯ ಎಚ್ಚೆನ್, ಕನ್ನಡದ ಮಾಸ್ತಿ ಹಾಗೂ ಕಾರಂತ, ಮಲಯಾಳಂನ ಕೆ.ಪಿ.ಕೇಶವ ಮೆನನ್, ಮರಾಠಿಯ ಎನ್.ಎಸ್.ಫಡ್ಕೆ ಮುಂತಾದವರೆಲ್ಲಾ ಆತ್ಮಕಥೆಯ ಸಾಹಿತ್ಯಕ್ಕೆ ಕೊಡುಗೆಗಳನ್ನು ನೀಡಿದ್ದಾರೆ. ರಂಗಭೂಮಿ ಮತ್ತು ವಿವಿಧ ಕ್ಷೇತ್ರಗಳಿಗೆ ಸೇರಿದ ಮಹಿಳೆಯರು ಸಹ ಭಾರತೀಯ ಆತ್ಮಚರಿತ್ರೆಗೆ ಕೊಡುಗೆಗಳನ್ನು ನೀಡಿದ್ದಾರೆ. ಕಲಾವಿದೆಯರಾದ ಬಂಗಾಳಿಯ ಕಾನನ್‌ದೇವಿ, ಮಹಾರಾಷ್ಟ್ರದ ಹಂಸಾ ವಾಡ್ಕರ್ ಸಾಹಿತಿಗಳಾದ ಪಂಜಾಬಿನ ಅಮೃತಾ ಪ್ರೀತಮ್, ನಯನ ತಾರಾ ಸೆಹಗಲ್, ಆಂದ್ರದ ಟಿ ಹೇಮಲತಾ; ಸಾರ್ವಜನಿಕ ರಂಗದ "The Scope of Happiness" ಆತ್ಮಚರಿತ್ರೆಯ ವಿಜಯಲಕ್ಷ್ಮಿ ಪಂಡಿತ್, ಕೇರಳದ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರ ಸ್ವದೇಶಭಿಮಾನಿ ಕೆ.ರಾಮಕೃಷ್ಣ ಪಿಳ್ಳೆಯವರ ಪತ್ನಿ ಬಿ.ಕಲ್ಯಾಣಮ್ಮ ಮುಂತಾದವರನ್ನು ಹೆಸರಿಸಬಹುದು.

ಸಂಸ್ಕೃತದಲ್ಲಿ ಆತ್ಮಚರಿತ್ರಾತ್ಮಕ ಬರವಣಿಗೆ ಇಲ್ಲ. ಬಾಣ ಮತ್ತು ದಂಡಿ ಇವರು 'ಹರ್ಷಚರಿತೆ' ಮತ್ತು 'ಆವಂತೀ ಸುಂದರಿ'ಯಲ್ಲಿ ತಮ್ಮ ಬಗ್ಗೆ ಅಲ್ಲಲ್ಲಿ ಹೇಳಿಕೊಳ್ಳುವುದನ್ನು ಬಿಟ್ಟರೆ ಬೇರೇನೂ ಸಿಗುವುದಿಲ್ಲ. ಸಿಂಧಿ ಭಾಷೆಯಲ್ಲೂ ಹೇಳಿಕೊಳ್ಳುವ ರೀತಿಯಲ್ಲಿ ಈ ಪ್ರಕಾರ ಬೆಳೆದಿಲ್ಲ. ಇಲ್ಲಿ ದೊರೆಯುವ ಏಕೈಕ ಮೂಲ ಆತ್ಮಕಥೆಯೆಂದರೆ ಎನ್.ಆರ್.ಮಲ್ಕಾನಿಯವರ 'ನಿರಾಲೀ ಜಿಂದಗೀ' (ವಿಲಕ್ಷಣ ಜೀವನ – ೧೯೭೩) ಹಾಗೆಯೇ ಗಾಂಧಿ; ನೆಹರೂರವರ ಆತ್ಮಕಥೆಗಳು ಅನುವಾದಗೊಂಡಿವೆ.

ಭಾರತೀಯ ಸಂದರ್ಭದಲ್ಲಷ್ಟೇ ಅಲ್ಲ ಜಾಗತಿಕ ಮಟ್ಟದಲ್ಲೂ ಗಾಂಧಿ, ನೆಹರು, ನೀರಧ ಚೌಧರಿಯಂತವರ ಆತ್ಮಕಥೆಗಳು ಪ್ರಸಿದ್ಧಿ ಪಡೆದಿವೆ. ನೀರಧ ಚೌದರಿಯ 'Autobiography of an unknown Indian" (ಅನಾಮಧೇಯ ಭಾರತೀಯನ ಆತ್ಮಕಥೆ) ಕೃತಿಯಲ್ಲಿ ಅಂತಃಸತ್ವ ಇದೆಯಂತಲ್ಲ. ಈ ಆತ್ಮವೃತ್ತಾಂತ ಸುಳ್ಳು ಕೀರ್ತಿಯಿಂದ ಪ್ರಸಿದ್ಧಿ ಪಡೆದಿವೆ ಎನ್ನುತ್ತಾರೆ ವಿಮರ್ಶಕರು. ನೆಹರೂರವರ ಆತ್ಮಚರಿತ್ರೆ ಮಾನವೀಯತೆಗೆ ಸ್ಪಂಧಿಸಿದರೆ, ನೀರಧ್ ಚೌಧರಿಯವರದು ಅಮೂರ್ತ ಮತ್ತು ನೀರಸ ಪಾಂಡಿತ್ಯದಿಂದ ಕೂಡಿದೆ. ನೆಹರೂರವರು ಭಾರತೀಯರಿಗಾಗಿ ಬರೆದರೆ, ಚೌದರಿಯವರು 'ಇಂಗ್ಲಿಷ್ ಭಾಷೆಯನ್ನಾಡುವ ಜನತೆಗಾಗಿ ಬರೆದಿದ್ದೇನೆ' ಎನ್ನುತ್ತಾರೆ. ನೆಹರೂರವರು ಇತಿಹಾಸ ಮಹತ್ವಪೂರ್ಣ ಅರ್ಥವನ್ನು ತಿಳಿದುಕೊಂಡಿದ್ದರೆ, ಚೌದರಿ

ತಮ್ಮ ಗತಕಾಲವನ್ನು ಅಳಿಸಿಹಾಕಿ ಹೊಸದಾಗಿ ಬದುಕನ್ನು ಪ್ರಾರಂಭಿಸಲು ಬಯಸುತ್ತಾರೆ.

ಗಾಂಧೀಜಿಯವರ 'My Experiments with Truth' (ನನ್ನ ಸತ್ಯಶೋಧನೆ) ಸಾರ್ವಕಾಲಿಕ ಮಹತ್ವವನ್ನು ಪಡೆದ ಆತ್ಮಚರಿತ್ರೆ. ಗಾಂಧಿ ಆತ್ಮಚರಿತ್ರೆ ಎಂದಿಗೂ 'Best Seller' ಆಗಿಯೇ ಉಳಿಯುತ್ತದೆ. ಪ್ರತಿವರ್ಷ ಭಾರತದುದ್ದಕ್ಕೂ ಗಾಂಧಿ ಆತ್ಮಕಥೆಯ ೨ ಲಕ್ಷ ಪ್ರತಿಗಳು ಮಾರಾಟವಾಗುತ್ತವೆ ಎಂದು ಇತ್ತೀಚಿನ ಸಮೀಕ್ಷೆ ಹೇಳುತ್ತದೆ. ಒಟ್ಟು ಮಾರಾಟದ ಅರ್ಧದಷ್ಟು ಕೇರಳ ರಾಜ್ಯವೊಂದರಲ್ಲೇ ಆಗುತ್ತದೆ. ಅಂದರೆ ಹೊಸ ತಲೆಮಾರಿನ ಯುವ ಜನತೆ ಗಾಂಧಿ ವಿಚಾರಗಳಿಂದ ಆಕರ್ಷಿತರಾಗಿದ್ದಾರೆ ಎಂದು ಅರ್ಥ. ಗಾಂಧೀಜಿಯವರೇ ಹೇಳುವಂತೆ "ನಿಜವಾದ ಆತ್ಮಕಥೆಯ ಪ್ರಯತ್ನ ನನ್ನ ಉದ್ದೇಶವಲ್ಲ, ನಾನು ನನ್ನ ಸತ್ಯಶೋಧನೆಯ ಅಸಂಖ್ಯಾತ ಕಥೆಗಳನ್ನು ಸುಮ್ಮನೆ ಹೇಳಲಿಚ್ಛಿಸುತ್ತೇನೆ. ಯಾಕೆಂದರೆ ನನ್ನ ಜೀವನ ಅಂಥ ಶೋಧನೆಗಳಿಂದ ತುಂಬಿರುವುದರಿಂದ ಅದು ಆತ್ಮಕಥೆಯ ಸ್ವರೂಪ ಪಡೆದು ಕೊಳ್ಳುತ್ತದೆ ಎನ್ನುವುದು ಸತ್ಯ ಮತ್ತು ಇದರ ಪ್ರತಿಯೊಂದು ಪುಟವು ನನ್ನ ಶೋಧನೆಯನ್ನು ನುಡಿಯುತ್ತಿದ್ದರೆ ನಾನೇನೂ ಚಿಂತಿಸುವುದಿಲ್ಲ" ಮತ್ತೊಂದು ಕಡೆ ಹೀಗೆ ಹೇಳುತ್ತಾರೆ. "ನಾನು ಪುನಃ ಹುಟ್ಟಲು ಬಯಸುವುದಿಲ್ಲ. ಆದರೆ ಹುಟ್ಟಬೇಕಾಗಿ ಬಂದಿಲ್ಲ, ನಾನು ಅಸ್ಪೃಶ್ಯನಾಗಿ ಹುಟ್ಟಬೇಕು. ಯಾಕೆಂದರೆ ಅವರ ಮೇಲೊದಗುವ ದುಃಖಗಳು, ಕಷ್ಟಗಳು, ಅವಮಾನಗಳಿಂದ ನನ್ನನ್ನು ಮತ್ತು ಅವರನ್ನು ಆ ಶೋಚನೀಯ ಸ್ಥಿತಿಯಿಂದ ಮುಕ್ತಗೊಳಿಸುವ ಸಾಹಸ ಮಾಡಬಹುದು."

ನಮ್ಮ ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಮರ 'Wings of Fire' (ಅಗ್ನಿಜ್ವಾಲೆಗಳು – ೨೦೦೪) ಆತ್ಮಕಥೆ ಕೂಡ ಸ್ವತಂತ್ರ ಭಾರತದ ವೈಜ್ಞಾನಿಕ ಮತ್ತು ತಾಂತ್ರಿಕ ಸ್ವಯಂ ಸಮೃದ್ಧಿ ಹುಡುಕಾಟದಲ್ಲಿ ಪಾಲ್ಗೊಂಡ ಧೈರ್ಯ ಮತ್ತು ನಂಬಿಕೆಯುಳ್ಳ ವ್ಯಕ್ತಿಯೊಬ್ಬನ ಸಾಹಸಗಾಥೆ, ತಮಿಳುನಾಡಿನ ಯಾತ್ರಾಸ್ಥಳವಾದ ರಾಮೇಶ್ವರಂನ ಕಡಿಮೆ ಶಿಕ್ಷಣ ಪಡೆದ ಮೀನುಗಾರರ ಕುಟುಂಬದಲ್ಲಿ ಜನಿಸಿದ ವ್ಯಕ್ತಿಯೊಬ್ಬ ಭಾರತದ ಬಾಹ್ಯಕಾಶ ಸಂಶೋಧನೆ ಮತ್ತು ಕ್ಷಿಪಣಿ ಬೆಳವಣಿಗೆ ಕಾರ್ಯಕ್ರಮದ ನಾಯಕನಾಗಿ ಬೆಳೆದ ಯಶೋಗಾಥೆ ಇಲ್ಲಿದೆ. ಅವರೇ ಹೇಳುವಂತೆ "ಈ ಕಥೆ ಕೇವಲ ನನ್ನ ಸ್ವಂತ ವಿಜಯ ಮತ್ತು ದುಃಖ ನೋವುಗಳ ಲೆಕ್ಕಾಚಾರವಲ್ಲ. ಇದು ಆಧುನಿಕ ಭಾರತದ ವೈಜ್ಞಾನಿಕ ಸ್ಥಾಪನೆಯ ಯಶಸ್ಸು ಮತ್ತು ಹಿನ್ನೆಡೆಗಳ ಕುರಿತಾದುದು, ಭಾರತ ತಾಂತ್ರಿಕವಾಗಿ ಮುಂಚೂಣಿಗೆ ಬರಲು ಹೆಣಗಾಡಿದ ವಿವರಣೆ", ಮುಂದೆ ಬರೆಯುತ್ತಾ "ವಿಮಾನದಿಂದ ಕೆಳಗೆ ನೋಡಿದಾಗ ಜನರು, ಮನೆಗಳು, ಕಲ್ಲುಗಳು, ಗದ್ದೆಗಳು,

ಮರಗಳು ಎಲ್ಲವೂ ಏಕರೀತಿಯ ಭೂದೃಶ್ಯವಾಗಿ ಗೋಚರಿಸುತ್ತದೆ. ಒಂದನ್ನು ಇನ್ನೊಂದರಿಂದ ಬೇರ್ಪಡಿಸಿ ನೋಡುವುದು ಕಷ್ಟ. ನನ್ನ ಆತ್ಮಚರಿತ್ರೆ ಸಹ ನನ್ನ ಜೀವನದ ಅದೇ ರೀತಿಯ ಪಕ್ಷಿನೋಟ" ಎಂದಿದ್ದಾರೆ. ಒಟ್ಟಿನಲ್ಲಿ ಕಲಾಂ ಅವರ ಆತ್ಮಚರಿತ್ರೆ ಯುವಪೀಳಿಗೆಯನ್ನು ಹುರುದುಂಬಿಸುವುದರಲ್ಲಿ ಸಂಶಯವಿಲ್ಲ.

ಈಗ ಆತ್ಮಚರಿತ್ರೆ ಬರೆಯುವವರ ಸಂಖ್ಯೆ ಬೆಳೆಯುತ್ತಲೇ ಇವೆ. ಸಾಹಿತಿಗಳಷ್ಟೇ ಅಲ್ಲ, ರಾಜಕಾರಣಿಗಳು, ಚಿತ್ರನಟರು, ಸಂಗೀತಜ್ಞರು, ಕ್ರೀಡಾಪಟುಗಳು, ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಇತರ ಕ್ಷೇತ್ರಗಳಿಗೆ ಸೇರಿದವರೂ ತಾವು ನಡೆದುಬಂದ ದಾರಿಯನ್ನು ಹಿಂತಿರುಗಿ ನೋಡುತ್ತಿದ್ದಾರೆ. ಜಗತ್ತಿನುದ್ದಕ್ಕೂ ಆತ್ಮಕಥೆಗಳ ರಚನೆ ನಡೆಯುತ್ತಲೇ ಇದೆ. ಕೆಲವು ವಿವಾದಗಳನ್ನು ಹುಟ್ಟುಹಾಕುತ್ತವೆ. ಉದಾಹರಣೆಗೆ: ಮುಸ್ಲಿಂ ಸಂಪ್ರದಾಯವಾದಿಗಳ ಕೆಂಗೆಣ್ಣಿಗೆ ಗುರಿಯಾದ ಬಾಂಗ್ಲಾದೇಶದ ವಿವಾದಾತ್ಮಕ ಲೇಖಕಿ ತಸ್ಲೀಮಾ ನಸ್ರೀನ್ ಅವರ 'ದ್ವಿಖಂಡಿತೊ' ಆತ್ಮಕತೆಯನ್ನು ಹೆಸರಿಸಬಹುದು. ಪಾಕಿಸ್ತಾನದ ಮಾಜಿ ಪ್ರಧಾನಿ ದಿವಂಗತ ಬೆನ್‌ಜೀರ್ ಭುಟ್ಟೋರವರ 'Daughter of the east' ಎಲ್.ಕೆ.ಅದ್ವಾನಿಯವರ 'My country my life" (2007) ಕಲಾವಿದನೊಬ್ಬನ ಆತ್ಮಚರಿತ್ರೆಯಾಗಿದೆ. ಆದರೆ ಭಾರತೀಯ ಆತ್ಮಕಥೆಗಳ ಇತಿಹಾಸದಲ್ಲೇ ಮೊಟ್ಟಮೊದಲಬಾರಿಗೆ ವೇಶ್ಯೆಯೊಬ್ಬಳು ಆತ್ಮಕಥೆ ರಚಿಸಿದ್ದಾಳೆ. ಅವಳೇ ಆ ದಿಟ್ಟ ವೇಶ್ಯೆ ನಳಿನಿ ಜಮೀಲಾ. "The Autobiography of a Sex woker" (ವೇಶ್ಯೆಯ ಆತ್ಮಕಥೆ – ೨೦೦೭) ಕೃತಿಯಲ್ಲಿ ಲೇಖಕಿ "ಪ್ರಾಯಶಃ ವೃತ್ತಿಗೌರವಿಲ್ಲದ ಏಕಮಾತ್ರದಂಥ ಎಂದರೆ ವೇಶ್ಯವೃತ್ತಿಯೊಂದೇ ಎಂದು ಹೇಳಿ ವೇಶ್ಯೆಯರ ಬದುಕಿನ ಕರಾಳ ದೃಶ್ಯಗಳನ್ನು ಬಿಚ್ಚಿಡುತ್ತಾಳೆ. ವೇಶ್ಯೆಯೊಬ್ಬಳು ನಿತ್ಯ ಕಳಂಕಿತೆ, ಸದಾ ಲೋಕನಿಂದಿತೆಯಾದರೂ ಅವಳಲ್ಲೂ ಒಂದು ಮನಸ್ಸಿದೆ ಎನ್ನುವುದನ್ನರಿಯಲು ಓದಲೇಬೇಕಾದ ಪುಸ್ತಕ, ಇತ್ತೀಚೆಗೆ ಕನ್ನಡದಲ್ಲಿ ಬಿಡುಗಡೆಯಾದ ಮಾಜಿ ಮಂತ್ರಿ ಎಚ್.ವಿಶ್ವನಾಥ್ ಅವರ 'ಹಳ್ಳಿ ಹಕ್ಕಿಯ ಹಾಡು' (೨೦೦೮) ಸಹ ವಿವಾದಾತ್ಮಕ ಆತ್ಮಕಥೆ. ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರ ಖಾಸಗಿ ವಿಚಾರವನ್ನು ವಿಶ್ವನಾಥ್ ತಮ್ಮ ಆತ್ಮಕಥೆಯಲ್ಲಿ ಪ್ರಸ್ತಾಪಿಸಿದ್ದಾರೆ ಎನ್ನುವುದೇ ವಿವಾದಕ್ಕೆ ಕಾರಣ. ಒಟ್ಟಿನಲ್ಲಿ ವಿಭಿನ್ನ ರೀತಿಯ ಆತ್ಮಕಥೆಗಳು ಆಗಾಗ ಸೃಷ್ಟಿಯಾಗುತ್ತಿರುವುದಂತೂ ಸತ್ಯ.

ಕನ್ನಡದಲ್ಲಿ ಬಂದಿರುವ ಆತ್ಮಚರಿತ್ರೆಗಳನ್ನು ಗಮನಿಸಿದರೆ ಹೆಚ್ಚು ವಿವರಣಾ ಮತ್ತು ಪ್ರಶಂಸಾ ಪ್ರಧಾನವಾಗಿದ್ದು, ವಿಮರ್ಶಾ ಪ್ರಧಾನವಾಗಿರುವುದು ಕಡಿಮೆ ಕನ್ನಡದಲ್ಲಿ ಜೀವನ ಚರಿತ್ರೆಗಳಷ್ಟು ಆತ್ಮಚರಿತ್ರೆ ವಿಭಾಗ ಬೆಳೆಯದಿದ್ದರೂ ಅನುವಾದವಾಗಿ ಬಂದ ಆತ್ಮಕಥೆಗಳನ್ನು ಗಮನಿಸಿದರೆ ಬೆಳವಣಿಗೆ ತೃಪ್ತಿಕರವಾಗಿದೆ

ಎನ್ನಬಹುದು. ಕನ್ನಡ ಆತ್ಮಚರಿತ್ರೆಗಳಲ್ಲಿ ಮೂರು ಸಂಪುಟಗಳಲ್ಲಿ ಪ್ರಕಟವಾದ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ (೧೯೬೮–೬೯) ಅವರ 'ಭಾವ' ಗಮನಾರ್ಹವಾದುದು. ಮಾಸ್ತಿಯವರ ಬಾಲ್ಯ. ಅಧಿಕಾರಾವಧಿ ಹಗೂ ವಿಶ್ರಾಂತಿ ಕಾಲದ ಬದುಕಿನ ಸೊಗಸಾದ ಚಿತ್ರಣ ಇದರಲ್ಲಿದೆ. ಮಾಸ್ತಿಯವರ ಸಾರ್ಥಕ ಬಾಳಿನ ಅರ್ಧಶತಮಾನದ ಚಿತ್ರಣವನ್ನೊಳಗೊಂಡ ಈ ಕೃತಿ ಕನ್ನಡ ಆತ್ಮಚರಿತ್ರೆಯ ಪ್ರಪಂಚಕ್ಕೆ ಮಾತ್ರವಲ್ಲದೆ ಕನ್ನಡ ಸಾಹಿತ್ಯಕ್ಕೆ ಅವರ ಬಹುದೊಡ್ಡ ಕೊಡುಗೆಯಾಗಿದೆ. ಕೋಟ ಶಿವರಾಮಕಾರಂತರು 'ಹುಚ್ಚು ಮನಸ್ಸಿನ ಹತ್ತು ಮುಖಗಳು' (೧೯೪೮) ಕೃತಿಯಲ್ಲಿ ಕಾಲು ಶತಮಾನ ಬಾಳಿದ ಬದುಕನ್ನು ಚಿತ್ರಿಸಿದರೆ, 'ಸ್ಮೃತಿ ಪಟಲದಿಂದ' (೧೯೭೭–೭೮) ಕೃತಿಯು ಮೂರು ಭಾಗಗಳ ಅವರ ಆತ್ಮಚರಿತ್ರೆಯ ಮುಂದುವರಿದ ಭಾಗವಾಗಿದೆ. ಹೊಣೆ ಎಂದು ಅನ್ನದೆಯೇ ಇಂಥ ಕೆಲಸ ತಮ್ಮ ಮತ್ತು ತಮ್ಮ ಆವರಣದ ಸುಖಕ್ಕಾಗಿ ಬೇಕೆಂಬ ಬಯಕೆಯನ್ನು ಇತರರಲ್ಲಿ ಮೂಡಿಸುವುದಕ್ಕಾಗಿ ಈ ಆತ್ಮಚರಿತ್ರಾತ್ಮಕವಾದ ಪುಸ್ತಕವನ್ನು ಬರೆದಂತೆ ಕಾಣುತ್ತದೆ. ತಮ್ಮ ಸುತ್ತಮುತ್ತಲಿನ ನಿಸರ್ಗವನ್ನು, ಜೀವಕೋಟಿಯ ಮತ್ತು ಬದುಕಿನ ಅನಂತ ವೈವಿಧ್ಯವನ್ನು ನೋಡಿದ ಕಾರಂತರ ಈ ಪುಸ್ತಕದ ತುಂಬ ಬೆರಗು, ಆಶ್ಚರ್ಯ, ಸೋಜಿಗ, ಕುತೂಹಲ, ಋಣ ಎನ್ನುವ ಪದಗಳು ಪದೇ ಪದೇ ಕಾಣಿಸಿಕೊಳ್ಳುತ್ತವೆ. ಜೀವನದಲ್ಲಿ ಬಹಳಷ್ಟು ಸಾಧಿಸಿದ್ದೇವೆ ಎಂದು ಹೇಳುವ ಯಾರೇ ಆದರೂ ಇದನ್ನು ಓದಿದರೆ ಜ್ಞಾನೋದಯವಾಗುವುದು. ಹುಚ್ಚು ಮನಸ್ಸಿನ ಹತ್ತು ಮುಖಗಳಲ್ಲಿನ ಅನೇಕ ಅಂಶಗಳು ಇದರಲ್ಲಿದ್ದರೂ 'ಸ್ಮೃತಿಪಟಲದಿಂದ' ಒಂದು ಕೃತಿಯಾಗಿ ನಿಲ್ಲುತ್ತದೆ. ಕುವೆಂಪುರವರ 'ನೆನಪಿನ ದೋಣಿಯಲ್ಲಿ' (೧೯೮೦) ಅವರ ಬಾಲ್ಯ, ಮಲೆನಾಡಿನ ಪ್ರಕೃತಿ. ಮನೆಯಲ್ಲಿನ ಆಚಾರಗಳು, ಸಾವು–ನೋವು, ಬಂಧುಬಳಗ, ಜಾತವರ್ಗ, ಇತ್ಯಾದಿಗಳ ಚಿತ್ರಣ ಮಲೆನಾಡಿನ ಕಾಡಿನ ಹಾಗೆಯೇ ಸಮೃದ್ಧವಾಗಿದ್ದು, ಕುವೆಂಪುರವರ ಕಾವ್ಯ, ನಾಟಕ, ಕಾದಂಬರಿ, ವಿಮರ್ಶೆ, ವೈಚಾರಿಕ ಲೇಖನಗಳಿಗೆ ಅಧಿಕೃತವಾದ ಹಿನ್ನೆಲೆಯನ್ನು ಒದಗಿಸುತ್ತದೆ. ಇದನ್ನು ಓದುವುದೇ ಒಂದು ಅವರ್ಣನೀಯ ಅನುಭವವಾಗಿದೆ ಎನ್ನುವುದು ಹಲವರ ಅಭಿಪ್ರಾಯ.

'ಹೋರಾಟದ ಬದುಕು' (೧೯೬೮) ದೇ.ಜ.ಗೌ. ಅವರ ಆತ್ಮಕಥೆ. ಇದು ಅಚ್ಚ ಕನ್ನಡದ ಧೀಮಂತನ ಹೋರಾಟದ ಬದುಕನ್ನೊಳಗೊಂಡಿದೆ. ಕುವೆಂಪುರವರ ಕೃಪಾಕಟಾಕ್ಷಕ್ಕೆ ಪಾತ್ರವಾಗಿ, ಅವರ ಆಶೀರ್ವಾದದ ಮಹಾರಕ್ಷೆಯಲ್ಲಿ ಕನ್ನಡದ ದೀಕ್ಷೆಯನ್ನು ಪಡೆದು ಕನ್ನಡಕ್ಕಾಗಿ ದುಡಿದು, ಕನ್ನಡದಿಂದ ಕೀರ್ತಿ ಯಶಸ್ಸುಗಳನ್ನು ಪಡೆದು, ಕನ್ನಡಕ್ಕಾಗಿಯೇ ತನು, ಮನ, ಧನಗಳನ್ನು ಸಮರ್ಪಿಸಿಕೊಂಡ ಮಹಾಚೇತನವೊಂದರ ಆತ್ಮವೃತ್ತಾಂತವಿದು ಎಂದು ಕೆಲವರು ಹಾಡಿ ಹೊಗಳಿದರೂ

ಅನೇಕ ವಿಷಯಗಳು ಸತ್ಯಕ್ಕೆ ದೂರವಾಗಿವೆ. ಕೆಲವು ಚರ್ಚಾರ್ಹ ವಿಷಯಗಳಿದ್ದರೂ ಗುಡಿಸಿಲಿನಿಂದ ಗಂಗೋತ್ರಿಯರೆಗೆ ಸಾಗಿಬಂದ ಅವರ ಜೀವನ ಹೋರಾಟದ ಕಥೆ ಇಲ್ಲಿದೆ.

ಬೀಚಿಯವರು 'ನನ್ನ ಭಯಾಗ್ರಫಿ' (೧೯೭೬)ಯಲ್ಲಿ ತಮ್ಮ ಬದುಕಿನಲ್ಲಿ ನಡೆದ ಮುಖ್ಯವೆನಿಸಿದ ಘಟನೆಗಳ ಬಗ್ಗೆ ಬೆಳಕು ಚೆಲ್ಲುತ್ತಾರೆ. ಆದ್ದರಿಂದ ಪ್ರತಿಯೊಂದು ಅಧ್ಯಾಯವು ಪ್ರತ್ಯೇಕವಾಗಿ ನಿಲ್ಲುತ್ತದೆ. ಕಳೆದುಹೋದದ್ದು ನೆನಪಿಗೆ ಬಂದಾಗ ಅದು ಆಹ್ಲಾದದಾಯಕವೆಂಬ ಸಾಮಾನ್ಯ ನಂಬಿಕೆಗೆ ವಿರುದ್ಧವಾಗಿ ಲೇಖಕರಿಗೆ ಅವು ಭಯತರಿಸುತ್ತವೆ. 'ಎದೆ ಝಲ್ ಅನ್ನುತ್ತದೆ' ಆದ್ದರಿಂದ ಇದು 'ಭಯಾಗ್ರಫಿ', ಎಂದು ತಮ್ಮ ಶೀರ್ಷಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಕನ್ನಡದ ವರಕವಿ ಬೇಂದ್ರೆಯವರು ನಡೆದು ಬಂದ ದಾರಿಯ ಮೂರನೇ ಸಂಪುಟದಲ್ಲಿ (೧೯೬೧) 'ಚತುರ್ಮುಖ' ಎಂಬ ಹೆಸರಿನ ಆತ್ಮಚರಿತ್ರೆಯನ್ನು ಬರೆದಿದ್ದಾರೆ. ತಮ್ಮ ಬದುಕಿನ ಕೆಲವೇ ಪ್ರಮುಖ ಮಾಹಿತಿಗಳನ್ನು 'ಚತುರ್ಮುಖ'ದಲ್ಲಿ ತೆರೆದಿಟ್ಟಿದ್ದಾರೆ. "ಕವಿಯು ಭೂತಕಾಲದ ಒಂದು ಸಾಂಸ್ಕೃತಿಕ ಪರಂಪರೆಯನ್ನು ನಡೆಸಿಕೊಂಡು ಬರುವ ಸಾಂಕೇತಿಕ ವ್ಯಕ್ತಿ" ಎಂದು ಬೇಂದ್ರೆ ನುಡಿಯುತ್ತಾರೆ. ಹೀಗಾಗಿ ಕವಿಗಳ ಆತ್ಮಕಥೆಗಳು ಸಾರ್ವಕಾಲಿಕ ಮಹತ್ವವನ್ನು ಪಡೆಯುತ್ತವೆ ಎನ್ನುವುದು ಅವರ ಮನದಾಳದ ಇಂಗಿತ. ಒಟ್ಟಿನಲ್ಲಿ 'ಚತುರ್ಮುಖ' ಆತ್ಮಕಥನದಲ್ಲಿ ದೊರೆಯುವ ಮಾಹಿತಿಗಳು ಬೇಂದ್ರೆಯವರ ಬಾಲ್ಯ ಹಾಗೂ ವಿದ್ಯಾರ್ಥಿ ಜೀವನಗಳ ಬಗ್ಗೆ ಸಿಗುವ ಅಮೂಲ್ಯ ಮಾಹಿತಿಗಳಾಗಿವೆ. ಅವರ ಸ್ತ್ರೀ ಪೋಷಿತವಾದ ಬಾಲ್ಯ, ಚಿಕ್ಕಂದಿನಲ್ಲಿಯೇ ಸಂಭವಿಸಿದ ತಂದೆಯವರ ಸಾವು, ತಾಯಿ ಹಾಗೂ ಅಜ್ಜಿಯ ವಾತ್ಸಲ್ಯದಲ್ಲಿ ಬೆಳೆದದ್ದು, ಬಾಲ್ಯದ ತುಂಟಾಟ ಉದ್ಧಟತನಗಳು ನಮಗೆ ಕಾಣಸಿಗುತ್ತವೆ. ಈ ಆತ್ಮಕಥೆಯ ಉತ್ತರಾರ್ಧವನ್ನು ಅವರ ಮಗ ವಾಮನಬೇಂದ್ರೆಯವರು ಪೂರ್ಣಮಾಡಿದ್ದಾರೆ.

'ಜಿ.ಎಸ್.ಶಿವರುದ್ರಪ್ಪನವರ 'ಚತುರಂಗ'(೧೯೮೬) ಹೆಸರೇ ಸೂಚಿಸುವಂತೆ ನಾಲ್ಕು ಭಾಗಗಳನ್ನು ಒಳಗೊಂಡಿದೆ. ಅವರೇ ಇದೊಂದು ಅಸಮಗ್ರ ಆತ್ಮಚರಿತ್ರೆ-ಯೆಂದು ಹೇಳಿಕೊಂಡಿದ್ದಾರೆ. ಒಬ್ಬ ಸೃಜನಶೀಲ ಲೇಖಕ ಆತ್ಮಚರಿತ್ರೆಯಲ್ಲಿ ನಿಜವನ್ನು ಹೇಳಿರುತ್ತಾನೆ ಎನ್ನುವ ಕಾರಣದಿಂದ, ನಿಸ್ಸಂಕೋಚವಾಗಿ ಹೇಳಿಕೊಳ್ಳಲಾಗದನೇಕಗಳು ನನಗೆ ಮತ್ತು ನನ್ನಂಥವರಿಗೆ ಇರುವುದರಿಂದ ನನ್ನ ದೃಷ್ಟಿಯಲ್ಲಿ ಇದು ಪರಿಪೂರ್ಣ-ದಲ್ಲಿ ಎಂದು ಹೇಳಿಕೊಳ್ಳುವುದಕ್ಕೆ ಇಷ್ಟಪಡುತ್ತಾರೆ.

ಹಾಗೆಯೇ 'ಹತ್ತು ವರುಷ' (೧೯೩೯) ಜೆ.ಪಿ.ರಾಜರತ್ನಂ ಅವರ ಆತ್ಮಕಥೆ ೧೫೨ ಪುಟಗಳ ಈ ಕೃತಿಯಲ್ಲಿ ಲೇಖಕರ ಹತ್ತು ವರ್ಷಗಳ ಜೀವನ ಕಥೆಯಿದೆ. ಸತಿಯನ್ನು ಕ್ಷಯದ ಆಸ್ಪತ್ರೆಗೆ ಸೇರಿಸಿ ಹಿಂತಿರುಗಿ ಬರುವಾಗ ದಾರಿಯಲ್ಲಿ ಕಂಡ ಹೆಂಡದಂಗಡಿಯ ಅನುಭವವೇ ಅವರ 'ರತ್ನನ ಪದಗಳು' ಸೃಷ್ಟಿಯಾಗಲು ಕಾರಣವಾಯಿತೆಂದು ಓದಿದಾಗ ಕುತೂಹಲವೂ ಆಶ್ಚರ್ಯವೂ ಉಂಟಾಗುತ್ತದೆ. ಮಿಂಚಿನ ಬಳ್ಳಿ ಕಾರ್ಯಾಲಯದಿಂದ ಪ್ರಕಟವಾದ ಸಾಹಿತ್ಯಜ್ಞರ ಆತ್ಮಕಥನ(೧೯೪೭) ಇನ್ನೊಂದು ವಿಶಿಷ್ಟ ಕೃತಿ. ಇದರಲ್ಲಿ ಗೋವಿಂದ ಪೈ, ಆರ್.ವಿ.ಗೋಕಾಕ, ಶಂ.ಭಾ.ಜೋಶಿ, ಉತ್ತಂಗಿ ಚನ್ನಪ್ಪ, ಬೆಟಗೇರಿ ಕೃಷ್ಣಶರ್ಮ, ಎ.ಆರ್. ಕೃಷ್ಣಶಾಸ್ತ್ರಿ, ದ.ರಾ.ಬೇಂದ್ರೆ ಹೀಗೆ ಹನ್ನೊಂದು ಸಾಹಿತಿಗಳ ಆತ್ಮವೃತ್ತಾಂತಗಳಿವೆ.

ಎಸ್.ಎಲ್. ಭೈರಪ್ಪನವರ ಆತ್ಮಚರಿತ್ರೆಯಾದ 'ಭಿತ್ತಿ' (೧೯೯೬) ಕನ್ನಡದ ಉತ್ತಮ ಕೃತಿಗಳಲ್ಲೊಂದು, ಇದೊಂದು ಕಾದಂಬರಿ ಓದಿನ ಅನುಭವ ಕೊಡುತ್ತದೆ. 'ಭಿತ್ತಿ' ಭೈರಪ್ಪನವರ ಕಾದಂಬರಿಯ ಧಾಟಿಯಲ್ಲಿಯೇ ಸಾಗುತ್ತದೆ. ಭೈರಪ್ಪನವರು ಹೇಳುವಂತೆ "ಆತ್ಮವೃತ್ತಾಂತ ಎಂದರೆ ವಾಸ್ತವವಾಗಿ ನಡೆದದ್ದನ್ನು ನೆನಪಿನ ಅಥವಾ ದಿನಚರಿ ಪತ್ರ ಮೊದಲಾದ ಇತರ ದಾಖಲೆಗಳು ಇದ್ದರೆ ಅವುಗಳ ಆಧಾರವಿದ್ದಷ್ಟನ್ನು ಮಾತ್ರ ಬರೆಯುವುದು, ಕಾದಂಬರಿಯಂತೆ ಅಲ್ಲಿ ಬಹು ಆಯಾಮದ ಕಲ್ಪನೆಗೆ ಸ್ಥಾನವಿಲ್ಲ. ಕಾದಂಬರಿಯಲ್ಲಾದರೆ ಸ್ವರೂಪವೇ ಸರ್ವಸ್ವ, ಸ್ವರೂಪವನ್ನು ಸಾಕ್ಷಾತ್ಕರಿಸಿ–ಕೊಳ್ಳಲು ಬೇಕಾದಂತೆ ಅನುಭವವನ್ನು ವಿನ್ಯಾಸಗೊಳಿಸುತ್ತಾ ವೀಕ್ಷಿಸುವುದೇ ಬರವಣಿಗೆಯ ವರ್ಮ. ಹೊಸತನವನ್ನು ಸೃಷ್ಟಿಸುವ ಸವಾಲಿನ ಜೊತೆಗೆ ಉದ್ವಿಗ್ನತೆಯೂ ಇರುತ್ತದೆ. ಆತ್ಮವೃತ್ತಾಂತದಲ್ಲಿ ಸೃಷ್ಟಿಸುವುದೇನಿದೆ? ಭೈರಪ್ಪರಿಗಿರುವ ತಮ್ಮ ಮೇಲಿನ ಅಭಿಮಾನ, ಆತ್ಮವಿಶ್ವಾಸ ಆತ್ಮಕಥೆಯಲ್ಲಿ ಆತ್ಮಪ್ರಶಂಸೆಯ ಹಂತವನ್ನು ತಲುಪುತ್ತದೆ ಎಂದು ಭಾಸವಾಗದೆ ಇರದು. ಆದರೂ ಇಲ್ಲಿ ಶ್ರದ್ಧೆ, ಛಲಗಳಿಂದ ಬದುಕಿನಲ್ಲಿ ಮಹತ್ವದನ್ನು ಸಾಧಿಸಬಹುದೆಂಬ ಕಥನವಿದೆ. 'ಅಣ್ಣನ ನೆನಪು' ಕುವೆಂಪು ಅವರನ್ನು ಕುರಿತು ಅವರ ಮಗ ಪೂರ್ಣಚಂದ್ರ ತೇಜಸ್ವಿ ಬರೆದು 'ನೆನಪೂ ಹೌದು; ತೇಜಸ್ವಿ ತಾವು ಬೆಳೆದು ಬಂದ ಬಗೆಯನ್ನು ನಿರೂಪಿಸುವ ಕಥನವೂ ಹೌದು. ಏಕಕಾಲಕ್ಕೆ ತಂದೆ ಮಗನ ಚರಿತ್ರೆಯನ್ನು ಹೇಳುವ ವಿಶಿಷ್ಟ ಬಗೆಯ ಕೃತಿಯಿದು. ಆದ್ದರಿಂದ ಬರೆಯುವಾಗ ಅವರೇ ಕೇಳಿಕೊಳ್ಳುತ್ತಾರೆ. "ನಾನು ಬರೆಯುತ್ತಿರುವುದೇನು? ನನ್ನ ಆತ್ಮಕಥೆಯೋ ಅಣ್ಣನ ನೆನಪೋ? ಕನ್ನಡ ಸಂಸ್ಕೃತಿ ಇತಿಹಾಸದ ಅವಲೋಕನವೋ?"[೧] ಅಣ್ಣನ ನೆನಪು ಈ ಎಲ್ಲವೂ ಹೌದು ಎಂದರೆ ತಪ್ಪಿಲ್ಲ.

---

೧. ಆಲಯಗಳ ಬಯಲು, ಸಂಪಾದಕರು ಡಾ. ಗುರುಪಾದ ಮರಿಗುದ್ದಿ, ಪು. ೨೮.

ಅರವಿಂದ ಮಾಲಗತ್ತಿಯವರ 'ಗೌರ್ಮೆಂಟ್ ಬ್ರಾಹ್ಮಣ' (೧೯೯೪) ಕನ್ನಡದಲ್ಲಿ ಬಂದ ಮೊದಲ ದಲಿತ ಆತ್ಮಕಥೆ. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಇದು ಅನೇಕ ಸಹೃದಯ ಓದುಗರ ಮತ್ತು ವಿಮರ್ಶಕರ ಗಮನ ಸೆಳೆಯಿತು. ಅನಂತರದಲ್ಲಿ ಬಂದ ಸಿದ್ಧಲಿಂಗಯ್ಯ ಅವರ 'ಊರುಕೇರಿ' (೧೯೯೭), ತುಂಬಾಡಿ ರಾಮಯ್ಯ ಅವರ 'ಮಣೆಗಾರ' (೧೯೯೧), ಕೆ.ಗೋವಿಂದರಾಜು ಅವರ 'ಮನವಿಲ್ಲದವರ ಮಧ್ಯೆ', ಸಿದ್ಧಲಿಂಗಯ್ಯನವರ 'ಊರುಕೇರಿ'ಯಲ್ಲಿ ನಾನು ಎಂಬ ಅಹಂ ಇಲ್ಲ; ಬದಲಾಗಿ ನಾನು ಎಂಬ ಅಸ್ಥಿತ್ವವನ್ನು ಕಂಡುಕೊಳ್ಳುವ ಪ್ರಕ್ರಿಯೆಯ ಕಥನವಾಗಿ ಇದು ಮುಖ್ಯ ಆಗುತ್ತದೆ. ಸೃಜನಶೀಲ ಮನಸ್ಸು ಬಡತನದಲ್ಲಿ ಹೊರಳಾಡುತ್ತಲೇ ಅದನ್ನು ಗೆಲ್ಲುತ್ತ ಅಪಮಾನ ಅನುಭವಿಸುತ್ತಲೇ ಅದರ ವಿರುದ್ಧ ಹೋರಾಟದ ಮನೋಭಾವನೆಯನ್ನು ಬೆಳೆಸಿಕೊಳ್ಳುತ್ತ ಸಮಾಜದ ವಾಸ್ತವ ಸ್ಥಿತಿಯನ್ನು ಒಪ್ಪಿಕೊಳ್ಳುತ್ತಲೇ ಅದಕ್ಕೆ ಮುಖಾಮುಖಿಯಾಗುತ್ತ ಸುತ್ತಲಿನ ಪರಿಸರಕ್ಕೆ ಆರೋಗ್ಯ ಪೂರ್ಣವಾಗಿ ಸ್ಪಂದಿಸುವ ಕಥೆಯಿದು ಎನ್ನುತ್ತಾರೆ ನರಹಳ್ಳಿ ಬಾಲಸುಬ್ರಹ್ಮಣ್ಯನವರು.

ಒಟ್ಟಾರೆಯಾಗಿ ಕನ್ನಡದಲ್ಲಿ ಸಮಾಜದ ಕ್ಷೇತ್ರಗಳ ಜನರು ತಮ್ಮ ಬದುಕಿನ ಅನುಭವಗಳನ್ನು ಹಂಚಿಕೊಳ್ಳಲು ಮುಂದೆ ಬರುತ್ತಿರುವುದು ಶ್ಲಾಘನೀಯ, ಆದರೂ ಕನ್ನಡದಲ್ಲಿ ಆತ್ಮಚರಿತ್ರೆ ಪ್ರಕಾರ ಇನ್ನೂ ಬೆಳೆಯಬೇಕಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಸೂಚಿ, ಕನ್ನಡ ಸಾಹಿತ್ಯ ಅಕಾಡೆಮಿಯ ಸಾಹಿತ್ಯ ವಾರ್ಷಿಕ ಮೈಸೂರಿನ ಗ್ರಂಥಲೋಕ ಮಾಸಪತ್ರಿಕೆ, ಕನ್ನಡ ಸಾಹಿತ್ಯ ಅಕಾಡೆಮಿಯ ಕನ್ನಡ ಸಾಹಿತ್ಯ ಸಮೀಕ್ಷೆ ಮುಂತಾದವುಗಳಲ್ಲಿ ಇವುಗಳ ಬಗ್ಗೆ ಮಾಹಿತಿ ಸಿಕ್ಕಿದರೂ ಬಹಳಷ್ಟು ಕೃತಿಗಳು ದಾಖಲಾತಿಗೆ ಸಿಗದೆ ಹೋಗಬಹುದಾದ ಸಾಧ್ಯತೆಯನ್ನೂ ತಳ್ಳಿ ಹಾಕುವಂತಿಲ್ಲ.

"ಜೀವನ ಪರಿಚಯ ಬಂದು ಒಳ್ಳೆಯ ದಾಖಲೆಯಾಗಬೇಕಾದರೆ ಅದನ್ನು ಸಂಬಂಧಿಸಿದವರೇ ಬರೆಯುವುದು ಒಳಿತು" ಎಂದು ಸಾಮ್ಯುಯಲ್ ಜಾನ್ಸನ್ ಹೇಳಿದರೆ "ಆತ್ಮವೃತ್ತಾಂತಗಳನ್ನು ಬರೆಯುವವರು ತಮ್ಮ ಕಾಲ ಮತ್ತು ಅಂದಿನ ಘಟನೆಗಳ ಬಗೆಗೆ ಅವರೇ ತೀರ್ಪುಗಾರರೂ ಆಗಲಾರರು" ಎನ್ನುವುದು 'ಜಾರ್ಜ್‌ಸಾಪ' ಅವರ ಹೇಳಿಕೆ. ಆದರೆ ವ್ಯಕ್ತಿಯೊಬ್ಬ ಜೀವನ ಚರಿತ್ರೆಯನ್ನಾಗಲಿ ಆತ್ಮಚರಿತ್ರೆಯನ್ನಾಗಲಿ ಬರೆಯುವಾಗ ಯಾವುದೇ ನಿರ್ವಚನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆಯುವುದಿಲ್ಲ. ತನ್ನ ಭಾಷೆ, ತನ್ನ ವಿಷಯ, ತನ್ನ ತಂತ್ರಗಳಿಗೆ ಬದ್ಧನಾಗಿರುತ್ತಾನೆ. ಓೀಗಾಗಿ ಭಿನ್ನ ಭಿನ್ನ ಮನಸ್ಸುಗಳು ಭಿನ್ನವಾಗಿ ಆಲೋಚಿಸಿ ಭಿನ್ನ

[illegible]

ಭಿನ್ನವಾಗಿ ಮೈದಾಳಿ ನಿಂತಿರುವುದು ಸರ್ವವಿದಿತ, ಹಾಗೆಯೇ ಆತ್ಮ ಚರಿತ್ರೆಗಳನ್ನು ಬರೆಯುವ ಉದ್ದೇಶವೂ ಹಲವಾರು, ಕೆಲವರಿಗೆ ತಮ್ಮತನವನ್ನು ಪ್ರಾಮಾಣಿಕವಾಗಿ ಜನರ ಮುಂದೆ ತೆರೆದಿಡಬೇಕೆಂಬ ಹಂಬಲವಿದ್ದರೆ ಇನ್ನು ಕೆಲವರು ನಕಲಿ ಪೋಷಾಕು ಧರಿಸಿ ಆತ್ಮಶ್ಲಾಘನೆಗೆ ತೊಡಗಿ ಸಮಾಜದಲ್ಲಿ ಗೌರವ ಗಿಟ್ಟಿಸಲು ಪ್ರಯತ್ನಿಸುತ್ತಾರೆ. ಉದ್ದೇಶವೇನಿದ್ದರೂ ವ್ಯಕ್ತಿಯೊಬ್ಬ ನಡೆದು ಬಂದ ದಾರಿಯ ಹೆಜ್ಜೆ ಗುರುತುಗಳ ವಿವರಣೆಯ ಆತ್ಮಕಥೆಯ ವಸ್ತುವಾಗುತ್ತದೆ. ನಮ್ಮ ಸುತ್ತಲಿನ ಪ್ರಸಿದ್ಧ ವ್ಯಕ್ತಿಗಳ ಕುರಿತು ತಿಳಿದುಕೊಳ್ಳುವ ಕುತೂಹಲ ಇಂದು ನಿನ್ನೆಯದಲ್ಲ. ಅದು ಲಾಗಾಯ್ತಿನಿಂದಲೂ ಬಂದಿದೆ. ಹೀಗಾಗಿ ಫ್ರಾಂಕ್ಲಿನ್, ಅಗಸ್ಟೀನ್, ಗಾಂಧಿ, ನೆಹರೂರಂತವರ ಆತ್ಮಚರಿತ್ರೆಗಳು ಇಂದಿಗೂ ಜಾಗತಿಕ ಮಗತ್ವವನ್ನು ಪಡೆದಿವೆ. ಮೊದಮೊದಲು ಜೀವನದ ಒಂದು ನಿರ್ಣಾಯಕ ಹಂತ ತಲುಪಿದ ವ್ಯಕ್ತಿ ತನ್ನ ಬದುಕಿನ ಘಟನೆಗಳನ್ನು ಅವಲೋಕಿಸಿ ಆತ್ಮ ಚರಿತ್ರೆಯನ್ನು ಬರೆಯುತ್ತಿದ್ದನು. ಆದರೆ ಈಗ ಯಾವುದೇ ಕ್ಷೇತ್ರದ ವ್ಯಕ್ತಿ ಜೀವನದ ಯಾವ ಹಂತದಲ್ಲಾದರೂ ಬರೆಯಬಹುದಾಗಿದೆ. ಹಂತ ಯಾವುದೇ ಇದ್ದರೂ, ಯಾವುದೇ ಒಂದು ಬಲವಾದ ಪ್ರೇರೇಪಣೆಯ ಕಾರಣವಿಲ್ಲದೆ ವ್ಯಕ್ತಿಯೊಬ್ಬ ತನ್ನ ಕುರಿತು ಬರೆಯಲು ಮುಂದಾಗುವುದಿಲ್ಲ ಎನ್ನುವುದು ಅಷ್ಟೇ ಸತ್ಯ.

ಮಹಿಳಾ ಆತ್ಮಕಥೆಗಳು: ಪ್ರೇರಣೆ –ಪ್ರಭಾವ–ಸ್ವರೂಪ

"ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯ ಜೀವನದ ವಿವರಗಳನ್ನು ಬರಹದಲ್ಲಿ ದಾಖಲಿಸಿದರೆ ಅದು ಜೀವನಚರಿತ್ರೆ; ತನ್ನ ಬದುಕಿನ ವಿವರಗಳನ್ನು ತಾನೇ ದಾಖಲಿಸಿದರೆ ಅದು ಆತ್ಮಚರಿತ್ರೆ, ತಾನು ಬದುಕಿನಲ್ಲಿ ಕಂಡುಂಡ ನೋವು–ನಲಿವು, ಸೋಲು–ಗೆಲವು, ಕಹಿ–ಸಿಹಿ ಅನುಭವಗಳು, ತನ್ನ ಬದುಕಿನ ಸ್ವಾರಸ್ಯ, ನಿರ್ವಹಿಸಿದ ಜವಾಬ್ದಾರಿ, ಮಾಡಿದ ಕೆಲಸಗಳು, ತೆಗೆದುಕೊಂಡ ನಿರ್ಣಯಗಳು, ತಾಳಿದ ನಿಲುವು..... ಇತ್ಯಾದಿಗಳನ್ನು ಆತ್ಮನಿಷ್ಠವಾಗಿ ದಾಖಲಿಸ ಬೇಕಾಗುತ್ತದೆ. ತನ್ನ ಮನಸ್ಸಿನ ಒಳಗುದಿಯನ್ನು ಬಿಚ್ಚಿಡಬೇಕಾಗುತ್ತದೆ. ಸತ್ಯವನ್ನು ಬಿಚ್ಚಿಡುವ ಆತ್ಮಕಥನ, ಆತ್ಮಪ್ರಶಂಸೆಯಾಗಿ ಬದಲಾಗುವ ಸಾಧ್ಯತೆಯೂ ಇದೆ."[೧]

'ಆತ್ಮಚರಿತ್ರೆ ಎಂಬ ಪದ ಸರಿಯಾದುದೇ ಅಥವಾ 'ಆತ್ಮಕಥೆನ' ಎಂಬ ಪದ ಸೂಕ್ತವಾದುದೇ? ಚರಿತ್ರೆ ಎಂಬುದು ನಡೆದು ಹೋದ ಸಮಗ್ರ ವಿಷಯಗಳನ್ನೂ ದಾಖಲಿಸುವುದಾಗಿದೆ. ಆದರೆ ತಮ್ಮ ಆತ್ಮಕಥನಗಳನ್ನು ಬರೆದುಕೊಳ್ಳುವ ಯಾರೇ ಆಗಲಿ ತಮ್ಮ ನೆನಪಿನಲ್ಲಿರುವ, ತಮ್ಮ ಬದುಕಿನ ಎಲ್ಲ ಘಟನೆಗಳನ್ನು, ಎಲ್ಲ ವಿವರಗಳನ್ನು ಸಮಗ್ರವಾಗಿ ದಾಖಲಿಸುತ್ತಾರೆಂದೇನಿಲ್ಲ. ಹಾಗೇ ದಾಖಲಿಸಬೇಕು ಎಂದು ಬಯಸುವುದು ನ್ಯಾಯವೂ ಅಲ್ಲ. ದಾಖಲಿಸಬೇಕಾದ ಅಗತ್ಯವೂ ಇಲ್ಲ. ತಮಗೆ ಹೇಳಬೇಕೆನಿಸಿದ ವಿವರಗಳನ್ನು ಮಾತ್ರ ತೆರೆದಿಡುತ್ತಾರೆ. ಬೇಡ ಎನಿಸಿದ್ದನ್ನು ಕೈ ಬಿಡುತ್ತಾರೆ. ಆದ್ದರಿಂದ ಇದನ್ನು ಚರಿತ್ರೆ ಎಂದು ಕರೆಯುವುದಕ್ಕಿಂತ 'ಆತ್ಮಕಥನ' ಎಂದು ಕರೆಯುವುದೇ ಸೂಕ್ತ ಎನ್ನುವವರೂ ಉಂಟು.

ಆತ್ಮಚರಿತ್ರೆಗಳಿಗೆ ಮೂಲ ಯೂರೋಪಿಯನ್ನರ ಆತ್ಮನಿವೇದನೆ ಅಥವಾ ಆತ್ಮಪರಿಶೋಧನೆ ಇದೇ ಮುಂದೆ ಆತಮಕಥೆಗೆ ಪ್ರೇರಣೆಯಾಯಿತು.

ಸಂಖ್ಯಾದೃಷ್ಟಿಯಿಂದ ಗಮನಿಸಿದರೆ ಯಾವುದೇ ಭಾಷೆಯಲ್ಲಗಲೀ, ಮಹಿಳೆಯರ ಆತ್ಮಚರಿತ್ರೆಗಳು ಪುರುಷರ ಆತ್ಮಚರಿತ್ರೆಗಿಂತ ತುಂಬ ಕಡಿಮೆಯಿರುತ್ತವೆ. ತಮಿಳು ಕೂಡ ಇದಕ್ಕೆ ಹೊರತಾಗಿಲ್ಲ. ಮಹಿಳೆಯರು ಆತ್ಮಕಥನ ರಚಿಸಲು ಹಿಂಜರಿಯಲು ಹಲವಾರು ಕಾರಣಗಳಿವೆ. ತನ್ನ ಅನುಭವ, ಅನಿಸಿಕೆಗಳನ್ನೆಲ್ಲ ಹೊರಹಾಕಿದರೆ ಆಮೇಲೆ ಸಮಾಜ, ಕುಟುಂಬ ತನ್ನನ್ನು ನೋಡುವ ದೃಷ್ಟಿಕೋನವೇ ಬದಲಾಗಬಹುದು ಎಂಬ ಅಳುಕು, ಸಂಬಂಧಗಳು ಸಡಿಲಗೊಳ್ಳಬಹುದಾದ ಭಯ ಇತ್ಯಾದಿಗಳು ಮಹಿಳೆಯರು ತಮ್ಮ ಅಂತರಂಗವನ್ನು ಅನಾವರಣಗೊಳಿಸಿಕೊಳ್ಳಲು ತಡೆಯೊಡ್ಡುತ್ತಿವೆ.

---

೧. ಮಹಿಳಾ ಆತ್ಮಕಥೆಗಳು: ಅನುಸಂಧಾನ, ಡಾ.ಸಬಿಹಾಭೂಮಿಗೌಡ(ಸಂಪಾದಕರು).

ಮಹಿಳೆ ತನ್ನ ಸಮಕಾಲೀನ ಸಾಮಾಜಿಕ ಸಂದರ್ಭದಲ್ಲಿ ಎಷ್ಟರಮಟ್ಟಿಗೆ ತನ್ನನ್ನು ಪ್ರಾತಿನಿಧಿಕವಾಗಿ ಅಭಿವ್ಯಕ್ತಿಸಿಕೊಳ್ಳುತ್ತಿದ್ದಾಳೆ? ಅವಳ ಅನುಭವಗಳು, ಸಂಘರ್ಷಗಳು, ಆಯಾಕಾಲದ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಡುವುದರಲ್ಲಿ ಹೇಗೆ ಸಹಕಾರಿಯಾಗಿದೆ? ಎಂಬುದನ್ನು ತಿಳಿಯುವಲ್ಲಿ ಮಹಿಳಾ ಆತ್ಮಕಥೆಗಳು ಬಹುಮುಖ್ಯ ಪಾತ್ರವಹಿಸುತ್ತವೆ.

ವಾಸ್ತವಿಕವಾಗಿ ನೋಡಿದರೆ ಮಹಿಳೆಯರ ಜೀವನಾನುಭವ ಪುರುಷರಿಗಿಂತ ಭಿನ್ನ ಮತ್ತು ವಿಶಿಷ್ಟವಾದುದು. ಇಂದಿನ ಸಂದರ್ಭದಲ್ಲಿ ಪುರುಷರ ಹಲವಾರು ಅನುಭವಗಳು ಮಹಿಳೆಯರದಾಗುವ ಸಾಧ್ಯತೆ ಇದೆ. ಮುಖ್ಯವಾಗಿ ಮಹಿಳೆ ಎದ್ದು ಬಂದಿರುವುದು ಪ್ರತಿಕೂಲ ಪರಿಸ್ಥಿತಿಗಳಿಂದ ಕಲಿಯುವಷ್ಟು ಪಾಠಗಳನ್ನು ಬೇರೆಲ್ಲೂ ಕಲಿಯಲು ಸಾಧ್ಯವಿಲ್ಲ. ಶತಶತ ಮಾನಗಳಿಂದಲೂ ತನ್ನ ಮೇಲೆ ಹೇರಲಾಗಿರುವ ಕಟ್ಟು ನಿಟ್ಟು ಸಂಪ್ರದಾಯದ ಲಕ್ಷ್ಮಣರೇಖೆಗಳನ್ನು ದಾಟಿ ಇಂದಿನ ಹಂತವನ್ನು ಮುಟ್ಟಬೇಕಾದರೆ ಮಹಿಳೆ ಹಲವಾರು ರೀತಿಯ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸಿ ಹೋರಾಡುತ್ತಾ ಬಂದಿದ್ದಾಳೆ. ಈ ಹೋರಾಟದಲ್ಲಿ ಯಾರೂ ಕಲಿಸಲಾಗದ ಹೊಸ ಪಾಠಗಳನ್ನು ಕಲಿತು ತನ್ನ ತನವನ್ನು ಗುರುತಿಸಿಕೊಂಡು ಆತ್ಮವಿಶ್ವಾಸವನ್ನು ಬೆಳೆಸಿಕೊಂಡಿದ್ದಾಳೆ. ಇದರಿಂದಾಗಿ ಎಲ್ಲ ವೈರುದ್ಯಗಳ ಮಧ್ಯೆಯೂ ಒಂದು ವಿಶಿಷ್ಟವಾದ ನೆಲೆಯನ್ನು ಕಂಡುಕೊಳ್ಳವುದು ಆಕೆಗೆ ಸಾಧ್ಯವಾಗಿದೆ. ಈ ಸಂಪ್ರದಾಯದ ಸಂಕೋಲೆಗಳಿಂದ ಬಿಡಿಸಿಕೊಳ್ಳುವ ಹೋರಾಟ ಸುಲಭವಲ್ಲ. ಹಲವಾರು ವೈರುಧ್ಯಗಳೊಡನೆ ಅನುಸಂಧಾನ ಮಾಡುತ್ತಾ, ಯಾವ ರೀತಿಯ ವಿರೋಧಗಳಿಗೂ ಧೈರ್ಯಗೆಡದೆ ಮುನ್ನಡೆಯುತ್ತ, ತನ್ನ ಜೀವನವನ್ನು ತನಗೆ ಬೇಕಾದಂತೆ ರೂಪಿಸಿ ಹಾಗೇ ಜೀವಿಸುತ್ತಾ ತನ್ನೊಡನೆ ಇತರರನ್ನೂ ಮುನ್ನಡೆಸುತ್ತಾ ಸಾಗಿದ ಸದ್ದುಗದ್ದಲವಿಲ್ಲದ ಹೋರಾಟವದು. ಈ ಹೋರಾಟ ಸ್ತ್ರೀತ್ವದ, ಸ್ತ್ರೀಶಕ್ತಿಯ ಪ್ರತಿಪಾದನೆಗಾಗಿ ಕೈಗೊಂಡಿರುವ ಹೋರಾಟವಲ್ಲದೆ ಸ್ತ್ರೀ ಪುರುಷರೊಳಗಿನ ಹೋರಾಟವಲ್ಲ.

ಸಮಾನ ಮನಸ್ಸುಗಳನ್ನು ಸಮಾನ ಬುದ್ಧಿಮತ್ತೆಯನ್ನು ಲಿಂಗಬೇಧವಿಲ್ಲದೆ ಗುರುತಿಸಬೇಕೆನ್ನುವುದರ ಕಡೆಗೆ ಕೇಂದ್ರೀಕರಿಸಿರುವ ಹೋರಾಟ. ಮಹಿಳೆ ಪುರುಷನಿಗೆ ಪೂರಕವಾಗಿರುವಂತೆ ಪುರುಷನೂ ಮಹಿಳೆಗೆ ಪೂರಕವಾಗಿ ಇಬ್ಬರೂ ಒಟ್ಟಾಗಿ ಮುನ್ನಡೆಯಬೇಕು ಎನ್ನುವ ಸದಾಶಯದ ನ್ಯಾಯಯುತ ಹೋರಾಟ. ಈ ಹೋರಾಟ ನಮ್ಮ ಹೊಣೆಗಾರಿಕೆಯೂ ಆಗಿದೆ ಎಂದು ತಿಳಿದುಕೊಂಡು ತೆರೆಯ ವಿರುದ್ಧವಾಗಿ ಈಜಿದವರ ಜೀವನ ಚರಿತ್ರೆಗಳು ದಾಖಲಾಗಬೇಕಾದ ಅಗತ್ಯವಿದೆ. ಇಂತಹ ಹೋರಾಟಗಳು ದಾಖಲಾಗುವುದು ಆತ್ಮಕಥನಗಳ ಮೂಲಕವೇ.

ಮಹಿಳೆಯರ ಮತ್ತು ಪುರುಷನ ಜಗತ್ತು ಇಬ್ಭಾಗವಾಗಿ ಉಳಿದುಕೊಂಡಿರು-ವುದರಿಂದ ಆತ್ಮಕತೆ ಬರವಣಿಗೆಯ ಒಳಗೂ ಅದರ ಛಾಯೆ ಸ್ಪಷ್ಟವಾಗಿ ಕಂಡುಬರುತ್ತದೆ. ಮಹಿಳೆಯರ ಆತ್ಮಕತೆಗಳಲ್ಲಿ ಖಾಸಗಿ ಬದುಕು ಎಂದರೆ ಅವರ ಬಾಲ್ಯ, ವೈವಾಹಿಕ ಜೀವನ, ಕುಟುಂಬದೊಳಗಿನ ಸಂಬಂಧಗಳ ಮಧುರ, ಕಹಿ ಸ್ಮೃತಿಗಳು ಹೆಚ್ಚಾಗಿ ವ್ಯಾಪಿಸಿಕೊಂಡಿದ್ದರೆ, ಪುರುಷರ ಆತ್ಮಕಥೆಗಳಲ್ಲಿ ಇದರ ಗೈರುಹಾಜರಿ ಕಣ್ಣಿಗೆ ರಾಚುವಂತೆ ಕಾಣುತ್ತಿರುತ್ತದೆ. ಪುರುಷರ ಆತ್ಮಕತೆಗಳಲ್ಲಿ ಪ್ರಾಶಸ್ತ್ಯ ಪಡೆಯುವುದು ಅದರ ಕುಟುಂಬದ ಹೊರಗಿನ ಸಾಧನೆ, ಸಂಬಂಧ, ವಿದ್ಯಮಾನಗಳು.

ಸುಮಾರು ನಾಲ್ಕುನೂರು ಪುಟಗಳಷ್ಟು ವ್ಯಾಪ್ತಿಯಲ್ಲಿ ತೆರೆದುಕೊಂಡ ಮೂರ್ತಿರಾವ್ ಅವರ ಸ್ಮೃತಿಗಳಲ್ಲಿ ಅವರ ಮಡದಿ ಮತ್ತು ಮಕ್ಕಳ ಕುರಿತ ವಿಚಾರಗಳು ನಾಲ್ಕೈದು ಪುಟಗಳಿಗೆ ಸೀಮಿತವಾಗಿವೆ! ಸಿದ್ಧಲಿಂಗಯ್ಯ ಅವರ ಊರುಕೇರಿ ಭಾಗ ಒಂದರಲ್ಲಿ ಅಪ್ಪ-ಅಮ್ಮರ ಕುರಿತ ಸ್ಮೃತಿಗಳೂ ಹತ್ತು ಪುಟಗಳನ್ನು ಮೀರುವುದಿಲ್ಲ. ಈ ಚರ್ಚೆಯನ್ನು ಇನ್ನಷ್ಟು ಕೃತಿಗಳ ಮೂಲಕ ದೃಢೀಕರಿಸಲು ಸಾಧ್ಯವಿರಲಿ ಈ ಭಿನ್ನತೆ ಯಾಕೆ ಎಂಬ ಪ್ರಶ್ನೆ ಏಳುವುದು ಸಹಜ, ಎಲ್ಲರೂ ಒಂದೇ ರೀತಿ ಬರೆಯಬೇಕಿಲ್ಲ ಎಂಬುದು ನಾವೆಲ್ಲರೂ ಒಪ್ಪುವ ಮಾತೇ ಆದರೂ ಈ ಭಿನ್ನತೆಗೆ ಕಾರಣ ಏನು ಎಂಬುದರ ಹುಡುಕಾಟವೂ ಮುಖ್ಯ ಎನ್ನಬೇಕು. ಸಮಾಜೀಕರಣ ಸ್ತ್ರೀ-ಪುರುಷರನ್ನು ರೂಪಿಸುವುದಕ್ಕೆ ಇದಕ್ಕಿಂತ ಉತ್ತಮ ನಿದರ್ಶನ ಬೇರೆ ಬೇಕಿಲ್ಲ.

“ಆತ್ಮಕತೆಯನ್ನು ಯಾವಾಗ ಬರೆಯಬೇಕು? ಎಂಬ ಪ್ರಶ್ನೆಯೂ ಆಗಾಗ ಏಳುವುದಿದೆ ಸಾಮಾನ್ಯವಾಗಿ ಬದುಕಿನ ಉತ್ತರಾರ್ಧದಲ್ಲಿ ಆತ್ಮಕತೆ ಬರೆದವರೇ ಹೆಚ್ಚು. ಯಾವುದಕ್ಕೂ ಬದುಕು ಮತ್ತು ಮನಸ್ಸು ಪಕ್ವವಾದಾಗಲೇ ಆತ್ಮಕತೆ ಹೆಚ್ಚು ಗಟ್ಟಿಯಾಗುತ್ತದೆ ಎಂಬುದು ಸಾಮಾನ್ಯ ತಿಳುವಳಿಕೆ. ವಾಸಂತಿಬಾಯಿ, ಅನುಪಮಾ ನಿರಂಜನ, ಶಾರದಾಹೆಮ್ಮಿಗೆ, ಯಶವಂತಿ ಸುವರ್ಣ, ಪರಮೇಶ್ವರಿ ಲೋಕೇಶ್ವರ ಮುಂತಾದವರು ಹೀಗೆ ತಮ್ಮ ಇಳಿಗಾಲದಲ್ಲಿ ಆತ್ಮಕತೆ ಬರೆದಿರುವುದನ್ನು ನೋಡಬಹುದು. ಇದಕ್ಕೆ ಒಂದಿಷ್ಟು ಬಿಡುವು. ತಾವು ಹೇಳಬೇಕು ಎಂದು-ಕೊಂಡದ್ದನ್ನು ಹೇಳುವ ಧೈರ್ಯ ತಮ್ಮದೇ ಅನುಭವಗಳನ್ನು ನಿಕಷಕ್ಕೆ ಒಡ್ಡುವ ಸ್ಥೈರ್ಯ ಇತ್ಯಾದಿಗಳು ಆ ವೇಳೆಗೆ ದೊರೆಯುವುದು ಒಂದು ಕಾರಣವೂ ಆಗಿರಬಹುದು. ಜೊತೆಗೆ ಸಮಾಜದಲ್ಲಿ ಗುರುತಿಸಿಕೊಂಡ ವ್ಯಕ್ತಿಗಳಾಗಿದ್ದರೆ, ಅವರ ಮೇಲೆ ಸ್ನೇಹಿತ ವಲಯದ ಒತ್ತಾಸೆಯೂ ಇಂಥ ಬರವಣಿಗೆಗೆ ಪ್ರಚೋದನೆ ನೀಡಬಹುದು. ದು. ಸರಸ್ವತಿ, ಶೈಲಜ ನಾಗರಘಟ್ಟ ಮುಂತಾದ ಕೆಲವರು ತಮ್ಮ ನಡುವಯಸ್ಸಿನಲ್ಲೇ ಆತ್ಮಕತೆ ಬರವಣಿಗೆಯತ್ತ ಒಲಿದಿರುವುದಕ್ಕೆ ಬೇರೆ ಅಂಶಗಳು

ಕಾರಣವಾಗಿರುವಂತಿದೆ. ಇದರ ಜೊತೆಗೇ ಗಮನಿಸಬೇಕಾದ ಒಂದು ಸಂಗತಿ ಎಂದರೆ, ಪೂರ್ಣಪ್ರಮಾಣದ ಆತ್ಮಕತೆಗಳನ್ನು ಬರೆದವರು ಕನ್ನಡದಲ್ಲಿ ಕಡಿಮೆ."[೧]

ಸಾರಾ ಅಬೂಬಕ್ಕರ್ ಅವರ ಆತ್ಮಕತೆ ಬಾಲ್ಯ ಕಾಲದ ಚಿತ್ರಣದಲ್ಲೇ ವಿರಮಿಸುತ್ತದೆ. ಶೈಲಜಾ ಅವರು ಈಗೊಮ್ಮೆ ಆಗೊಮ್ಮೆ ಕಾಡುವ ನೆನಪುಗಳ ದಾಖಲಾತಿ ಮಾತ್ರ. ಶಶಿಕಲಾ ಅವರದೂ ಒಂದು ನಿರ್ದಿಷ್ಟ ಘಟನೆಯ ಸುತ್ತ ಹೆಣೆದುಕೊಂಡದ್ದು. ಈ ರೀತಿ ಸೂಕ್ಷ್ಮವಾಗಿ ಗಮನಿಸುತ್ತಾ ಹೋದರೆ ಕನ್ನಡದಲ್ಲಿ ಮಹಿಳಾ ಆತ್ಮಕಥೆಗಳು ಸಂಖ್ಯೆ ಮತ್ತು ಸತ್ವದಲ್ಲಿ ಸೊರಗಿವೆ.

ಆತ್ಮಕಥೆಯಲ್ಲಿ ಏನನ್ನು ಬರೆಯಬೇಕು? ಎಷ್ಟನ್ನು ಬರೆಯಬೇಕು? ಎಲ್ಲಿಂದ ಆರಂಭ? ಎಲ್ಲಿಗೆ ನಿಲುಗಡೆ? – ಇದು ಪ್ರತಿಯೋರ್ವರನ್ನೂ ಕಾಡುವ ಸಂಗತಿ. ಆತ್ಮಪ್ರಶಂಸೆಯೂ ಆಗದೆ ಆತ್ಮನಿಂದನೆಗೂ ಇಳಿಯದೆ, ಸಹಜೀವಿಗಳ ತೇಜೋವಧೆಗೂ ಬಳಸದೆ ತಮ್ಮ ಬದುಕನ್ನು ರೂಪಿಸುವುದು ಹೇಗೆ? ಇದು ಒಂದು ಬಗೆಯ ಸವಾಲು– ಇದಕ್ಕಾಗಿ ನೆನಪುಗಳ ಆಯ್ಕೆಯ ಮತ್ತು ನಿವಾರಣೆಗಳ ಕುರಿತು ಪ್ರತಿಯೊಬ್ಬರದೂ ಒಂದೊಂದು ನಿಲುವು ಇರುತ್ತದೆ. ಏನನ್ನು ಹೇಳಬೇಕು, ಎಷ್ಟನ್ನು ಹೇಳಬೇಕು ಎಂಬುದು ಬರಹಗಾರರಿಗೆ ಬಿಟ್ಟ ವಿಷಯ. ಎಷ್ಟೋ ಬಾರಿ ಓದುಗರು ಆತ್ಮಕತೆಗೂ ಆತ್ಮಚರಿತ್ರೆಗೂ ವ್ಯತ್ಯಾಸ ಮಾಡದೆ, ಅವರು ಬರೆದಿಲ್ಲ, ಇದು ಬರೆದಿಲ್ಲ ಹೇಳಿಕೊಂಡಿಲ್ಲ ಎಂದು ಟೀಕಿಸುವುದೂ ಇದೆ.

ಯಾರು ಎಲ್ಲವನ್ನೂ ಹೇಳಿಕೊಳ್ಳುವುದಿಲ್ಲ; ಹೇಳಿಕೊಳ್ಳಬೇಕೆಂದು ನಿರೀಕ್ಷಿಸುವುದೋ, ಆದೇಶಿಸುವುದೋ ಸಾಧ್ಯವೂ ಇಲ್ಲ, ಬರೆಯುವ ಮತ್ತು ಓದುಗ ಇಬ್ಬರಿಗೂ ಇದರಿಂದ ಯಾವ ಉದ್ದೇಶ ಸಾಧಿತವಾಗಬೇಕಿದೆ ಎಂಬ ಅಂಶ ಸ್ಪಷ್ಟವಾಗಿದ್ದರೆ, ಅಂತಹ ಬರಹ ಅಥವಾ ಓದು ಸಾರ್ಥಕವಾಗುತ್ತದೆ. ನಿದರ್ಶನಕ್ಕೆ ಕಮಲಾಸುರಯ್ಯಾ ಅವರಿಗೆ ಆತ್ಮಕತೆ ಬರವಣಿಗೆ ಎಂಬುದು ಕತೆ, ಕವಿತೆಗಳ ಬರಹಗಳ ಏಕತಾನತೆಯನ್ನು ಆಯ್ಕೆ ಎನಿಸಿದರೆ, ಶೈಲಜಾ ನಾಗರಘಟ್ಟ ಅವರಿಗೆ ಒಂಟಿತನದ ಹಿಂಸೆಯಲ್ಲಿ 'ಸಾವಿನಿಂದ ಪಾರಾಗಲೂ ನೆನಪುಗಳನ್ನು ದಾಖಲಿಸುವ ಮಾರ್ಗವೆನಿಸಿದೆ. ವೀಣಾಧರಿಯಂಥವರಿಗೆ ಎಚ್‌ಐವಿ ಮತ್ತು ಏಡ್ಸ್ ಬಗ್ಗೆ, ಎಚ್.ಐ.ವಿ ಬಾದಿತರ ಬಗ್ಗೆ ಜನರ ಮನೋಭಾವವನ್ನು ತಿದ್ದುವುದು ಅವರ ಆತ್ಮಕತೆಯ ಬರವಣಿಗೆಯ ಮುಖ್ಯ ಉದ್ದೇಶವಾಗಿದೆ. "ನನ್ನ ಬದುಕು, ಜೀವನಶೈಲಿ, ಆಹಾರ ಚಿಕಿತ್ಸಾಕ್ರಮ, ಎಚ್.ಐ.ವಿ

---

೧. (ಮಹಿಳಾ ಆತ್ಮಕಥೆಗಳು : ಅನುಸಂಧಾನ– ಸಬೀಹಾ ಭೂಮಿಗೌಡ(ಪ್ರಾಸ್ತಾವಿಕ ಮಾತು)) ಪು. ೫.

ಮಾತ್ರವಲ್ಲದೇ ಬೇರೆ ಬೇರೆ ಕಾಯಿಲೆಗಳಿಂದ ಬಳಲುವವರಿಗೆ, ಹತಾಶೆಗೊಂಡವರಿಗೆ ಹೊಸ ಜೀವ ನೀಡಿತು ಎಂಬ ಆಶಯದೊಂದಿಗೆ, ನಾನು ಬರೆಯಬೇಕು ಎಂಬ ಒತ್ತಾಯ, ಒತ್ತಡಕ್ಕೆ ಸಿಲುಕಿ"[೧] ಆತ್ಮಕತೆ ಬರೆದಿದ್ದೇನೆ ಎಂದು ವೀಣಾಧರಿ ಹೇಳಿದ್ದಾರೆ. ಅವರ ಪ್ರಯತ್ನ ಅಕ್ಷರಶಃ ನಿಜವಾಗಿದೆ.

ಪಂಜಾಬಿ ಲೇಖಕಿ ಅಮೃತಾಪ್ರೀತಂ ಅವರು ಆತ್ಮಕತೆ ಬರೆಯಲು ನಿರ್ಧರಿಸಿದ್ದು ಇನ್ನೊಂದು ವಿಶಿಷ್ಟ ಸನ್ನಿವೇಶದಲ್ಲಿ ಖುಷ್‌ವಂತ್ ಸಿಂಗ್ ಜೊತೆಗೆ ಆತ್ಮಕತೆ ಬರೆಯುವ ತಮ್ಮ ಆಲೋಚನೆಯನ್ನು ಹಂಚಿಕೊಳ್ಳುತ್ತಿದ್ದಾಗ "ನಿನ್ನ ಜೀವನದಲ್ಲಿ ಅಂಥಾದ್ದೇನಿದೆ? ಒಂದೆರಡು ಘಟನೆಗಳಷ್ಟೇ ಅಲ್ಲವೇ? ಬರೆಯತೊಡಗಿದರೆ ರಸೀದಿ ಟಿಕೇಟಿನ ಬೆನ್ನ ಮೇಲೆ ಬರೆಯಬಹುದು" ಎಂಬುದಾಗಿ ಖುಷ್‌ವಂತ್‌ಸಿಂಗ್ ನೀಡಿದ ಲಘುಧಾಟಿಯ ಪ್ರತಿಕ್ರಿಯೆಯೇ ಅವರ ಬರವಣಿಗೆಗೆ ಮುಖ್ಯ ತಳಹದಿಯಾಯಿತು. ಇನ್ನೋರ್ವ ಪಂಜಾಬಿ ಲೇಖಕಿ ಅಜಿತ್‌ಕಾರ್ "ನೋವು..... ನೋವೇ ಜೀವನದ ಪರಮ ಸತ್ಯ. ನೋವು ಮತ್ತು ಒಂಟಿತನ.... ಈ ನೋವನ್ನಾಗಲೀ, ಒಂಟಿತನವನ್ನಾಗಲೀ ಯಾರೊಂದಿಗೂ ಹಂಚಿಕೊಳ್ಳಲಾಗುವುದಿಲ್ಲ" ಎಂದು ಹೇಳುತ್ತಲೇ ಬರೆದ ಅಲೆಮಾರಿಯು ಓದಿದ ಎಲ್ಲರ ಭಾವಕೋಶದೊಳಗೂ ದಟ್ಟ ಪ್ರಭಾವವನ್ನು ಬೀರುತ್ತವೆ.

ಗೋದಾವರಿ ಪರುಳೇಕರ್, ಕಿರಣ್ ಬೇಡಿ ಮುಂತಾದವರ ಆತ್ಮಕಥೆಗಳ ಓದು ಹೋರಾಟದ ಬದುಕಿನ ಇನ್ನೊಂದು ಮಗ್ಗುಲನ್ನು ನಮ್ಮೆದುರು ತೆರೆದಿಡುತ್ತದೆ. ಆತ್ಮಕತೆ ಬರೆಯುವವರೆಗೂ ತಾವು ಹಾದು ಬಂದ ಸುಖದ ದಿನಗಳ ಜೊತೆ, ಎದುರಾದ ಇಕ್ಕಟ್ಟುಗಳನ್ನು ನಿರ್ವಹಿಸಿದ ಬಗೆ, ಮೀರದ ಬಗೆಯನ್ನು ತೆರೆದಿಟ್ಟಲ್ಲಿ ಅಂಥ ಆತ್ಮಕತೆಗಳ ಓದು, ನಮಗೆ ಒಂದು ಬಗೆಯ ಧೈರ್ಯ, ಸಮಸ್ಯೆಯನ್ನು ಎದುರಿಸುವ ಗಟ್ಟಿತನ, ವೈಯಕ್ತಿಕ ಮಿತಿಗಳನ್ನು ಮೀರುವ ಶಕ್ತಿ ಮತ್ತು ಸಾಂಘಿಕ ಬದುಕಿನ ಹರಹು ಮತ್ತು ಸುಖಗಳನ್ನು ತಿಳಿಸಿಕೊಡುತ್ತದೆ. ಒಬ್ಬರ ಬದುಕು ಇನ್ನೊಬ್ಬರಿಗೆ ಮಾರ್ಗದರ್ಶಕ-ವಾಗಬಲ್ಲದು.

ಮಹಿಳೆ ತನ್ನ ಜೀವನದಲ್ಲಿ ಕಂಡುಂಡ ಅನುಭವಗಳನ್ನು ನಿಸ್ಸಂಕೋಚವಾಗಿ, ನಿರ್ಭೀತವಾಗಿ ಹೇಳಿಕೊಳ್ಳುವ ಗಟ್ಟಿತನ ಬೆಳೆಸಿಕೊಳ್ಳಬೇಕು. ನಿರ್ಭಿಡೆಯಿಂದ ಎಲ್ಲವನ್ನೂ ಹೇಳಿಕೊಳ್ಳುವ ಧಾರ್ಷ್ಟ್ಯ. ಗಟ್ಟಿತನ ಮಹಿಳೆಯರಿಗೆ ಬಂದಾಗ ಹೆಚ್ಚಿನ ಪ್ರಮಾಣದಲ್ಲಿ ಆತ್ಮಕಥೆಗಳು ಬರುತ್ತವೆ. ಡಾ. ಅನುಪಮಾ ನಿರಂಜನ, ವಾಸಂತಿ ಬಾಯಿ ಪಡುಕೋಣೆ, ದು.ಸರಸ್ವತಿ, ಸಾ.ರಾ. ಅಬೂಬಕ್ಕರ್, ಶಾರದ ಹೆಮ್ಮಿಗೆ ಇವರ

---

೧. ಮಹಿಳಾ ಆತ್ಮಕಥೆಗಳು: ಅನುಸಂಧಾನ, ಪು. ೬.

ಆತ್ಮಕಥೆಗಳಲ್ಲಿ ಇಂತಹ ಧಾರ್ಷ್ಟ್ಯ, ಗಟ್ಟಿತನ ತೋರಿ ನಿರ್ಭಿಡೆಯಿಂದ ಎಲ್ಲವನ್ನೂ ಹೇಳಿದ್ದಾರೆ.

ಮಹಿಳೆ ತಾನು ಕಂಡ ಕನಸಿನ ಬದುಕನ್ನು ತಮ್ಮದಾಗಿಸಿಕೊಳ್ಳಲು ಎಷ್ಟೊಂದು ಹೆಣಗಾಡಬೇಕಾಗುತ್ತದೆ. ತ್ಯಾಗ ಮಾಡಬೇಕಾಗುತ್ತದೆ ಅಥವಾ ಹಲವು ವಿಧದಲ್ಲಿ ಹೆಣಗಾಡಿದರೂ ತಮ್ಮ ಕನಸಿನ ಬದುಕು ಕೈಗೆಟುಕದಿರುವಾಗ ಅವಳ ಬದುಕು ಯಾವ ಹಾದಿ ಹಿಡಿಯಬಹುದು, ಇವೇ ಮುಂತಾದ ವಿಷಯಗಳನ್ನು ಕುರಿತು ಪ್ರಾಮಾಣಿಕವಾಗಿ ಮಹಿಳೆಯರು ಆತ್ಮಕಥನವನ್ನು ಬರೆದರೆ ಅದು ಮಹಿಳಾ ಲೋಕಕ್ಕೆ ಉತ್ತಮ ಆಸ್ತಿಯಾಗುತ್ತದೆ.

ಕನ್ನಡದಲ್ಲಿ ಇಲ್ಲಿಯವರೆಗೆ ಬಂದ ಮಹಿಳಾ ಆತ್ಮಕಥನಗಳಲ್ಲಿ ಸ್ವತಂತ್ರರೂಪ ಪಡೆದವುಗಳು, ಪತ್ರಿಕೆಗಳಲ್ಲಿ ಮಾತ್ರ ಧಾರಾವಾಹಿಯಾಗಿ ಪ್ರಕಟವಾದವುಗಳು, ಲೇಖನ ರೂಪದಲ್ಲಿ ಪ್ರಕಟವಾದವುಗಳು, ಹೀಗೆ ಭಿನ್ನರೀತಿಯಲ್ಲಿದ್ದ ಕಾರಣ ಈ ಕೆಳಗಿನಂತೆ ವಿಂಗಡಿಸಬಹುದಾಗಿದೆ.

೧) **ಸ್ವತಂತ್ರ ರೂಪದ ಆತ್ಮಕಥನಗಳು:** ೧೯೭೭ರಲ್ಲಿ ಪ್ರಕಟವಾದ ವಾಸಂತಿ ಪಡುಕೋಣೆಯವರ 'ಜೀವನ ಹೋರಾಟ' ಕನ್ನಡದ ಮೊದಲ ಮಹಿಳಾ ಆತ್ಮಕಥೆ. ಬಾಲ್ಯವಿವಾಹವಾಗಿ ಗಂಡನ ಅನಾದರಕ್ಕೊಳಗಾಗಿ ನಿಂತು ಹೋದ ವಿದ್ಯಾಭ್ಯಾಸವನ್ನು ಮತ್ತೆ ಮುಂದುವರೆಸಿ ಕೆಲಸಕ್ಕೆ ಸೇರಿ ಮಕ್ಕಳನ್ನು ಬೆಳೆಸಿದ ವಾಸಂತಿಯವರು ಜೀವನದಲ್ಲಿ ನಡೆಸಿದ ಹೋರಾಟ ಕಷ್ಟತನವಾದುದು. ಜೀವನದಲ್ಲಿ ಕಂಡುಂಡ ನೋವು, ಪದೇ ಪದೇ ಸಾವನ್ನು ಕಂಡದ್ದು, ಮಗ ಗುರುದತ್ತ ಹಿಂದಿ ಚಲನಚಿತ್ರದ ಖ್ಯಾತ ನಟ, ನಿರ್ದೇಶಕನಾಗಲು ಬೆನ್ನೆಲುಬಾಗಿ ನಿಂತದ್ದು ಎಲ್ಲವನ್ನೂ ಎಳೆ ಎಳೆಯಾಗಿ ಚಿತ್ರಿಸಿದ್ದಾರೆ.

೧೯೮೫ರಲ್ಲಿ ಪ್ರಕಟವಾದ ಡಾ.ಅನುಪಮಾ ನಿರಂಜನರವರ 'ನೆನಪು ಸಿಹಿಕಹಿ' ಮಹಿಳೆಯರ ಆತ್ಮಕಥನಗಳಲ್ಲೇ ವಿಶಿಷ್ಟ ಸ್ಥಾನ ಪಡೆಯುತ್ತದೆ. ವೈದ್ಯೆಯಾಗಿ, ಲೇಖಕಿಯಾಗಿ, ಪತಿಯಾಗಿ, ಮಾತೆಯಾಗಿ, ಜೀವನದಲ್ಲಿ ಕಂಡ ನೋವು ನಲಿವುಗಳನ್ನು, ವಾಸ್ತವ ಜೀವನದ ಏಳುಬೀಳುಗಳ ಪ್ರಾಮಾಣಿಕ ಘಟನೆಗಳನ್ನು ನೀಡಿದ್ದಾರೆ. ಒಬ್ಬ ಮಹಿಳೆ ಕಷ್ಟಮಯ ಜೀವನದಲ್ಲಿಯೂ ಸಹ ಏನನ್ನೆಲ್ಲಾ ಸಾಧಿಸಬಹುದೆಂದು ತೋರಿಸಿಕೊಟ್ಟಿದ್ದಾರೆ.

ಶಾರದಾ ಹೆಮ್ಮಿಗೆಯವರ 'ಬದುಕು ಕೊಟ್ಟಿದ್ದು ಕಲಿಸಿದ್ದು' (೧೯೯೪), ಪಾರ್ವತಮ್ಮ ಮಹಲಿಂಗಶೆಟ್ಟರ 'ಹೆಣ್ಣಿನ ದೃಷ್ಟಿಯಲ್ಲಿ ಈ ಶತಮಾನ' (೧೯೯೮), ರೂಪ

ಕುಲಕರ್ಣಿಯವರ 'ಮನದಾಳದ ಮಾತು', ಶಾರದಾ ಬೈಯಣ್ಣನವರ 'ಪಯಣ' (೨೦೦೫), ಈ ನಾಲ್ಕು ಆತ್ಮಕಥನಗಳು ತಮ್ಮದೇ ಆದ ಕಾರಣಗಳಿಂದ ಗಮನಾರ್ಹವಾಗಿರುವ ಸ್ವತಂತ್ರ ರೂಪದ ಆತ್ಮಕತೆಗಳಾಗಿವೆ.

ನಿರೂಪಕರ ಮೂಲಕ ರಚನೆಗೊಂಡ ಆತ್ಮಕಥನಗಳು:

ಮರಿಯಮ್ಮನ ಹಳ್ಳಿರಂಗಸಿರಿ (೧೯೯೯)

ಈ ಆತ್ಮಕಥೆಯು ರಂಗಕಲಾವಿದೆ ಕೆ.ನಾಗರತ್ನಮ್ಮನವರ ಆತ್ಮಚರಿತ್ರೆಯಾಗಿದೆ. ಗುಡಿಹಳ್ಳಿ ನಾಗರಾಜರವರು ಈ ಕೃತಿಯ ನಿರೂಪಕರು. 'ಸುಧಾ'ದಲ್ಲಿ ಧಾರವಾಹಿಯಾಗಿ ಪ್ರಕಟವಾದ ಆತ್ಮಚರಿತ್ರೆಯನ್ನು, ಹಂಪಿಯ ಕನ್ನಡ ವಿಶ್ವವಿದ್ಯಾಲಯ ಪ್ರಸಾರಂಗವು ಪುಸ್ತಕ ರೂಪದಲ್ಲಿ ಪ್ರಕಟಿಸಿದೆ. ಕೆ.ನಾಗರತ್ನವರವರು ನಾಟಕಗಳಲ್ಲಿ ಅಭಿನಯಿಸುವ ಪ್ರಖ್ಯಾತ ವೃತಿ ಕಲಾವಿದರಾಗಿದ್ದು, ಅವರ ಆತ್ಮಚರಿತ್ರೆ ಅವರ ಬದುಕನ್ನು ಮಾತ್ರವಲ್ಲದೇ ಎಲ್ಲಾ ಕಲಾವಿದರ ಬದುಕನ್ನು ತೆರೆದಿಡುತ್ತದೆ. ಇದು ಎಲ್ಲ ರಂಗಕಲಾವಿದೆಯರು ಬದುಕಿನ ಚಿತ್ರಣವನ್ನು ಪ್ರತಿನಿಧಿಯಾಗಿ ನಮ್ಮನ್ನು ಸ್ಪಂದಿಸುತ್ತದೆ.

ನನ್ನ ಬದುಕಿನ ಹಾಡು (೨೦೦೦)

ಡಾ. ಗಂಗೂಬಾಯಿ ಹಾನಗಲ್ಲಿನವರ ಆತ್ಮಕಥನವಾದ ಈ ಕೃತಿಯನ್ನು ಎನ್.ಕೆ.ಕುಲಕರ್ಣಿಯವರು ನಿರೂಪಿಸಿದ್ದಾರೆ ಸಂಗೀತ ಸಾಧಕರ ಜೀವನವನ್ನು ಅನಾವರಣಗೊಳಿಸುವ ಕೃತಿ ಇದಾಗಿದೆ.

'ತೆರೆಸರಿದಾಗ' ಮಾಲತಿಶ್ರೀ ಮೈಸೂರು ಅವರ ಆತ್ಮಕಥನವಾಗಿದೆ, ಇದನ್ನು ಗುಡ್ಡಿಹಳ್ಳಿ ನಾಗರಾಜರವರು ನಿರೂಪಕರಾಗಿ ರಚಿಸಿದ್ದಾರೆ. 'ಸಿರಿಯನಿತ್ತಡೆ ಒಲ್ಲೆ' ಮಾಜಿ ಮುಖ್ಯಮಂತ್ರಿ ದಿ.ಎಸ್.ಆರ್.ಬೊಮ್ಮಾಯಿ ಅವರ ಧರ್ಮಪತ್ನಿ ಶ್ರೀಮತಿ ಗಂಗಮ್ಮ ಬೊಮ್ಮಾಯಿ ಅವರ ಆತ್ಮಕಥನವಾಗಿದೆ. ಇದನ್ನು ಚಂದ್ರಶೇಖರ ವಸ್ತ್ರದರವರು ನಿರೂಪಿಸಿರುವರು.

೩) ಸಂಪುಟಗಳ ರೂಪದಲ್ಲಿ ಬಂದ ಕೃತಿಯಲ್ಲಿಯ ಆತ್ಮಕಥನಗಳ ಲೆಖನಗಳು

ಆತ್ಮಕಥನಗಳು ರಚನೆಯಾಗುವುದಕ್ಕೆ ವೈಯಕ್ತಿಕ ನೆಲೆಯ ಒತ್ತಾಸೆಗಳು ಕೆಲಸ ಮಾಡಿರುವಂತೆ, ಸಂಘಟನಾತ್ಮಕ ನೆಲೆಯ ಒತ್ತಾಸೆಗಳೂ ಇವೆ. ಅಖಿಲ ಕರ್ನಾಟಕ ಲೇಖಕಿಯರ ಸಂಘ, ಈ ದಿಕ್ಕಿನಲ್ಲಿ ಮಾಡಿರುವ ಕೆಲಸ ಅಪೂರ್ವವಾದುದು. ಲೇಖಲೋಕದ ನಾಲ್ಕು ಸಂಪುಟಗಳು ಮಹಿಳಾ ಆತ್ಮಕಥನದ ಚರಿತ್ರೆಗೆ ವಿಶಿಷ್ಟ ಕೊಡುಗೆಯನ್ನು ನೀಡಿವೆ. ನಾಗಮಣಿ ಎಸ್.ರಾವ್ ಅವರು ಆರಂಭಿಸಿದ ಈ

ಯೋಜನೆಯನ್ನು ಕೆ.ಉಷಾ.ಪಿ.ರೈ ರವರು ಮುಂದುವರೆಸಿಕೊಂಡು ಬಂದರು. ಇಂದು ಇವರ ಕೆಲಸವನ್ನು ಸಂಧ್ಯಾರೆಡ್ಡಿ ಅವರು 'ಎಪ್ಪತ್ತರ ವಯಸ್ಸು ಇಪ್ಪತ್ತರ ಮನಸ್ಸು' ಎಂಬ ಸಂಪುಟಗಳಲ್ಲಿ ಮುಂದುವರೆಸಿಕೊಂಡು ಬಂದಿದ್ದಾರೆ.

ಲೇಖಲೋಕ ಸಂಪುಟ.೧: ೧೯೯೮ರಲ್ಲಿ ಪ್ರಕಟವಾದ ಈ ಸಂಪುಟದ ಸಂಪಾದಕಿ ಡಾ. ವಿಜಯಾದಬ್ಬೆ, ಈ ಸಂಪುಟದಲ್ಲಿ ಹೆಚ್.ಎಸ್.ಪಾರ್ವತಿ, ಶೈಲಜಾ ಉಡಪಣ, ಸ.ಉಷಾ, ಹೆಚ್.ಎಲ್.ಪುಷ್ಪಾ, ನೇಮಿಚಂದ್ರ, ಸಾರಾ.ಅಬೂಬಕರ್, ಮಾಲತಿಶೆಟ್ಟಿ, ಬಿ.ಟಿ.ಲಲಿತಾನಾಯಕ್, ಶಶಿಕಲಾವೀರಯ್ಯ ಸ್ವಾಮಿ ಹೀಗೆ ಒಂಭತ್ತು ಮಹಿಳೆಯರು ತಮ್ಮ ಜೀವನದಲ್ಲಿ ನಡೆದ ಬಹುಮುಖ್ಯ ಘಟನೆಗಳನ್ನು ಅನುಭವಗಳನ್ನು ಪ್ರಸ್ತಾಪಿಸಿದ್ದಾರೆ.

ಲೇಖಲೋಕ ಸಂಪುಟ.೨: ೧೯೯೯ರಲ್ಲಿ ಪ್ರಕಟವಾದ ಈ ಸಂಪುಟದ ಸಂಪಾದಕಿ ಎಸ್.ಆರ್.ನಾಗಮಣಿ, ಸುಶೀಲಾ ಕೊಪ್ಪರ, ಟಿ.ಸುನಂದಮ್ಮ, ಸರೋಜ ನಾರಾಯಣರಾವ್, ನೀಳಾದೇವಿ, ಲೀಲಾದೇವಿ ಆರ್.ಪ್ರಸಾದ್, ಪ್ರೇಮಾಭಟ್, ವೈದೇಹಿ, ಡಾ. ವೀಣಾ ಶಾಂತೇಶ್ವರ್, ಡಾ. ಆರ್ ಸಂಧ್ಯಾರೆಡ್ಡಿಯವರ ಆತ್ಮಕಥನಗಳ ಲೇಖನಗಳು ಈ ಸಂಪುಟದಲ್ಲಿವೆ.

ಲೇಖಲೋಕ ಸಂಪು.೩: ೨೦೦೧ರಲ್ಲಿ ಪ್ರಕಟವಾದ ಈ ಸಂಪುಟದ ಸಂಪಾದಕಿ ಕೆ.ಉಷಾ.ಪಿ. ರೈ ಮತ್ತು ಡಾ. ಕೆ.ಆರ್. ಸಂಧ್ಯಾರೆಡ್ಡಿಯವರು, ಮಲ್ಲಿಕಾ ಕಡಿದಾಳ, ಎಂ.ಪಂಕಜ, ಡಾ.ಸುನೀತಾ ಮಹಾಬಲಶೆಟ್ಟಿ, ವಿಶಾಲಾಕ್ಷಿ ದಕ್ಷಿಣಮೂರ್ತಿ, ಡಾ. ಲೀಲಾವತಿ ದೇವದಾಸ, ಹೇಮಪಟ್ಟಣಶೆಟ್ಟಿ ಮೊದಲಾದ ಬರಹಗಳಿವೆ.

ಲೇಖಲೋಕ ಸಂಪುಟ.೪: ಶಾಂತಾದೇವಿ ಮಾಳವಾಡ, ಪದ್ಮಾಶಣ್ಯೆ, ಭಾಗೀರಥಿ ಹೆಗಡೆ, ಕುಲಶೇಖರಿ, ಪದ್ಮಾ ಗುರುರಾಜ್, ತುಳಸಿ ವೇಣುಗೋಪಾಲ್, ಗಂಗಾ ಪಾದೇಕಲ್ಲು, ವಸುಮತಿ ಉಡುಪ, ಡಾ. ಸರೋಜಿನಿ ಚವಲಾರ ಮೊದಲಾದವರ ಮೌಲಿಕ ಆತ್ಮಕಥನದ ಲೇಖನಗಳಿವೆ.

ಮಹಿಳಾ ಆತ್ಮಚರಿತ್ರಾ ಲೋಕಕ್ಕೆ ಲೋಕದ ಸಂಪುಟಗಳು ಅಪೂರ್ವವಾದ ಕೊಡುಗೆಯನ್ನು ನೀಡಿವೆ. ಇಂತಹ ಸಂಘಟನೆಯ ಬೆಂಬಲ ಇಲ್ಲದೆ ಹೋಗಿದ್ದಲ್ಲಿ ಬಹುಶಃ ಇಷ್ಟು ಮಹಿಳೆಯರು ತಮ್ಮ ಆತ್ಮಕಥನದ ತುಣುಕುಗಳನ್ನು ಹಂಚಿಕೊಳ್ಳಲು ಮನಸ್ಸು ಮಾಡುತ್ತಿರಲಿಲ್ಲ.

೪) ಬಿಡಿಯಾಗಿ ಪ್ರಕಟಗೊಂಡ ಆತ್ಮಚರಿತ್ರೆ ಲೇಖನಗಳು

ಶಾಂತಾದೇವಿ ಮಾಳವಾಡರ 'ನೆನಹು ನವಿಲುಗರಿ ಬಿಚ್ಚಿದಾಗ' ಲೇಖನ ಅಭಿನಂದನ ಗ್ರಂಥದಲ್ಲಿ ಕಾಣಿಸಿಕೊಂಡ ಆತ್ಮಕಥೆಗಳಲ್ಲಿ ಪ್ರಮುಖವಾದದ್ದು. ಅಭಿನಂದನ ಗ್ರಂಥ 'ಪ್ರಶಾಂತ'ದಲ್ಲಿ ಪ್ರಕಟವಾದ ಈ ಲೇಖನ ಬಿಡಿಲೇಖನವಾದರೂ ಮಹಿಳೆಯರ ಆತ್ಮಚರಿತ್ರೆಯ ಪ್ರಥಮ ಪ್ರಯೋಗವಾಗಿದೆ.

'ಸ್ನೇಹಸಿಂಧು' (೧೯೯೬)ಇದು ಚಿ.ನ.ಮಂಗಳಾ ಅವರು ಬರೆದ ತಮ್ಮ ಜೀವನದ ಪ್ರಮುಖ ಅಂಶಗಳ ದಾಖಲೆಯಾಗಿದೆ.

ಒಟ್ಟಾರೆ ಮಹಿಳಾ ಆತ್ಮಕಥೆಗಳನ್ನು ನೋಡಿದಾಗ ಕಲಾವಿದೆಯರು ಲೇಖಕಿಯರು, ಹೋರಾಟಗಾರ್ತಿಯರು, ಗೃಹಿಣಿಯರು ಹೀಗೆ ವಿಭಿನ್ನ ಹಿನ್ನೆಲೆ ಮತ್ತು ರಂಗಭೂಮಿಗಳಲ್ಲಿ ಕೆಲಸ ಮಾಡಿದವರು ಕೃತಿ ರಚಿಸಿರುವುದನ್ನು ನೋಡಬಹುದು.

ಅಧ್ಯಾಯ – ೪

ಮಹಿಳಾ ಆತ್ಮಕಥೆಗಳಲ್ಲಿ ಸಾಮಾಜಿಕ ನೆಲೆ

೧. ಬಾಲ್ಯ ಜೀವನ: ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿಯೂ ಬಾಲ್ಯದಿನಗಳು ಅತ್ಯಂತ ಮಹತ್ವಪೂರ್ಣವಾದವು. ಬಾಲ್ಯವಸ್ಥೆಯಲ್ಲಿನ ಬದುಕಿನ ಅನುಭವಗಳು ವ್ಯಕ್ತಿಯ ಜೀವಿತಾವಧಿ ಯವರೆಗೂ ಇರುತ್ತವೆ. ಬಾಲ್ಯದಲ್ಲಿನ ಆಟಪಾಠಗಳು ಸ್ನೇಹಿತರೊಂದಿಗಿನ ಒಡನಾಟ, ತಂದೆ–ತಾಯಿ ಕುಟುಂಬದವರು ತೋರುವ ಪ್ರೀತಿ, ವಾತ್ಸಲ್ಯಗಳೂ ಜೀವನದುದ್ದಕ್ಕೂ ಸದಾ ಹಸಿರಾಗಿರುತ್ತವೆ. ಒಟ್ಟು ವ್ಯಕ್ತಿಯ ಬಾಲ್ಯದ ದಿನಗಳು ಒಂದೇ ರೀತಿಯಾಗಿರದೆ ಪ್ರತಿಯೊಬ್ಬರು ಕೂಡ ಒಂದೊಂದು ರೀತಿಯ ಅನುಭವವನ್ನು ಪಡೆಯುತ್ತಾರೆ. ಕೆಲವು ಕುಟುಂಬಗಳು ಬಡತನದ ರೇಖೆಯಲ್ಲಿದ್ದಾಗ ಅಂತಹ ಮಕ್ಕಳು ಬಾಲ್ಯದಿಂದಲೂ ಕಷ್ಟಕರವಾದ ಜೀವನವನ್ನು ನಡೆಸುತ್ತಾ ಶಿಕ್ಷಣವನ್ನು ಪಡೆದು ಬದುಕಿನ ನಿರ್ವಹಣೆಯ ಜವಾಬ್ದಾರಿಯನ್ನು ಅರಿಯುತ್ತಾರೆ.

ಹೀಗೆ ಅನುಪಮಾನಿರಂಜನ, ಶಾರದಾ ಹೆಮ್ಮಿಗೆ, ವಾಸಂತಿ ಪಡುಕೋಣೆ, ಸಾ.ರಾ. ಅವರ ಬಾಲ್ಯದ ದಿನಗಳು ವಿಭಿನ್ನವಾಗಿದ್ದು ಆಸಕ್ತಿಮೂಡಿಸುತ್ತವೆ.

ಡಾ.ಅನುಪಮಾ ನಿರಂಜನ, ಹೊಸಗನ್ನಡ ಸಾಹಿತ್ಯದ ಪ್ರಮುಖ ಲೇಖಕಿ, ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಗ್ರಾಮದಲ್ಲಿ ನೇಕಾರರ ಕುಟುಂಬಕ್ಕೆ ಸೇರಿದ ಶಿವರಾಮಯ್ಯ ಮತ್ತು ಲಕ್ಷ್ಮೀದೇವಮ್ಮ ದಂಪತಿಗಳ ಮೊದಲ ಮಗಳಾಗಿ ಜನಿಸಿದ ವೆಂಕಟಲಕ್ಷ್ಮಿ ಎನ್ನುವ ಬಾಲಕಿ ಅನುಮಪಮಾ ಆಗಿ ರೂಪಾಂತರ ಹೊಂದಿದ್ದು ಒಂದು ರೋಚಕ ವಾಸ್ತವಿಕ ಕಾದಂಬರಿಯಂತಿದೆ. ೧೯೩೪ರಲ್ಲಿ ಜನಿಸಿದ ವೆಂಕಟಲಕ್ಷ್ಮಿಯ ಬಾಲ್ಯ ರೂಪುಗೊಂಡದ್ದು ಎರಡನೆಯ ಮಹಾಯುದ್ಧ ನಡೆಯುತ್ತಿದ್ದ ಸಮಯದಲ್ಲಿ ಅನುಪಮಾ ಅವರಿಗೆ ಮನೆಯಲ್ಲಿ ಅವರ ಅಜ್ಜಿ ಮತ್ತು ಮುತ್ತಜ್ಜಿಯವರ ಹೆಸರು ಸೇರಿಸಿ ಇಟ್ಟ ಹೆಸರು ವೆಂಕಟಲಕ್ಷ್ಮಿ ತಂದೆ ಸರ್ಕಾರಿ ನೌಕರರಾಗಿದ್ದು, ಸ್ಕೂಲ್ ಇನ್ಸ್‌ಪೆಕ್ಟರ್ ಆಗಿದ್ದ ಕಾರಣ ದಕ್ಷಿಣ ಕರ್ನಾಟಕದ ಬೇರೆ ಬೇರೆ ಊರುಗಳಿಗೆ ವರ್ಗವಾಗಿತ್ತು. ಹೀಗಾಗಿ ವೆಂಕಟ ಲಕ್ಷ್ಮಿಯ ಬಾಲ್ಯದ ಶಾಲಾಜೀವನ ಹಲವು ಊರುಗಳಿಗೆ ಹಂಚಿಹೋಯಿತು. ಹಳೆಯ ಸ್ನೇಹಿತರಿಂದ ಹೊಸ ಸ್ನೇಹಿತರೆಡೆಗೆ, ಒಂದು ಶಾಲೆಯಿಂದ ಮತ್ತೊಂದು ಶಾಲೆಗೆ, ಒಂದು ಮನೆಯಿಂದ ಮತ್ತೊಂದು ಮನೆಗೆ ಹೋಗುತ್ತಾ ವೆಂಕಟಲಕ್ಷ್ಮಿ ಬೆಳೆದಳು. ತಂದೆ ವಿದ್ಯಾಕಾಂಕ್ಷಿಯಾಗಿದ್ದರೂ, ವಿದ್ಯಾ ಇಲಾಖೆಯಲ್ಲಿ ಕೆಲಸಮಾಡುತ್ತಿದ್ದರು, ಮಕ್ಕಳ ಮಾನಸಿಕ ಸ್ಥಿತಿಯ ಬಗ್ಗೆ ಸಂಶೋಧನೆ ಮಾಡುತ್ತಿದ್ದರೂ ಮಕ್ಕಳೊಡನೆ ಅಷ್ಟು ಸಲಿಗೆಯಿರಲಿಲ್ಲ. ವಿಶೇಷ ಗಮನವೂ ಇರಲಿಲ್ಲ.

ತನ್ನ ಏಳು ಮಕ್ಕಳ ಮುಖದ ಗುರುತುಗಳು ಅವರು ಓದುತ್ತಿದ್ದ ತರಗತಿಗಳು ಕೂಡ ಸರಿಯಾಗಿ ತಿಳಿದಿರಲಿಲ್ಲ. ಆದರೂ ಜಯಪ್ರಕಾಶ್ ನಾರಾಯಣರ ಭಾಷಣಕ್ಕೆ ಮಗಳನ್ನು ಕರೆದುಕೊಂಡು ಹೋದದ್ದು ಲೇಖಕರಾದ ಮಾಸ್ತಿಯವರಿಗೆ ಮಗಳನ್ನು ಪರಿಚಯಿಸಿದ್ದು ಇವೆಲ್ಲವೂ ಮಗಳ ಬಗೆಗಿನ ತಂದೆಯ ಕಾಳಜಿಯನ್ನು ಹೇಳುತ್ತದೆ.

ಅನುಪಮಾರವರ ತಾತಂದಿರು ವಿದ್ಯಾವಂತರಾಗಿದ್ದು, ಅವರ ಜೀವನ ವ್ಯಕ್ತಿತ್ವದ ಬಗ್ಗೆ ತಮ್ಮ ಆತ್ಮಕಥೆಯಲ್ಲಿ ಹೇಳಿದ್ದಾರೆ. "ಇವರ ತಂದೆ ನೇಕಾರರ ಕುಟುಂಬದಲ್ಲಿ ಜನಿಸಿದರೂ ಸುಶಿಕ್ಷಿತರಾಗಿದ್ದರು. ಅಲ್ಲದೇ ಅವರ ಹಿರಿಯರನೇಕರು ತಮ್ಮ ನೇಕಾರ ವೃತ್ತಿಯನ್ನು ಬಿಟ್ಟು ವಿದ್ಯಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರು. ರಾಮಣ್ಣ, ದೊಡ್ಡ ಸುಬ್ಬರಾಯಪ್ಪ, ಕೊಂಗಾಡಿಯಪ್ಪ, ಡಿ.ಸಿ. ಸುಬ್ಬರಾಯಪ್ಪ, ಡಾ. ಡಿ.ಎನ್.ಪುಟ್ಟಯ್ಯ ಮುಂತಾದವರು ಸಮಾಜಕ್ಕೆ ವಿಶಿಷ್ಟ ಸೇವೆ ಸಲ್ಲಿಸಿದ ಅನುಪಮಾರ ಹಿರಿಯರಲ್ಲಿ ಕೆಲವರು ಕೊಂಗಾಡಿಯಪ್ಪ ಸ್ಕೌಟ್ ಕಮಿಷನರ್ ಆಗಿದ್ದು, ದೊಡ್ಡ ಬಳ್ಳಾಪುರದಿಂದ ಬೆಂಗಳೂರಿಗೆ ನಡದೇ ಹೋಗುತ್ತಿದ್ದರಂತೆ, ಅವರು ಚಪ್ಪಲಿಗಳನ್ನೇ ಹಾಕುತ್ತಿರಲಿಲ್ಲ-ವೆನ್ನುವುದನ್ನು ಅನುಪಮಾ ತಮ್ಮ "ನೆನಪು; ಸಿಹಿಕಹಿ"ಯಲ್ಲಿ ಸ್ಮರಿಸಿದ್ದಾರೆ. ದೊಡ್ಡ-ಬಳ್ಳಾಪುರದಲ್ಲಿರುವ ಸಾಲುಮರಗಳು, ಆ ಕಾಲದಲ್ಲಿ ಕೊಂಗಾಡಿಯಪ್ಪ ಹಾಕಿಸಿದ್ದುಂಟು ಆ ಊರಿನವರು ಇಂದಿಗೂ ನೆನೆಯುತ್ತಾರೆ. ಇಂಥ ನಿಸ್ವಾರ್ಥಿಗೆ ಮೈಸೂರು ಮಹಾರಾಜರು "ಲೋಕಸೇವಾನಿರತ" ಎಂಬ ಬಿರುದನ್ನು ಕೊಟ್ಟಿದ್ದರು. ಅಲ್ಲದೆ ಇವರು ಬಡಮಕ್ಕಳಿಗೆ ಉಚಿತವಾದ ವಿದ್ಯಾಭ್ಯಾಸವನ್ನು ನೀಡುತ್ತಿದ್ದರು."[೧] ಕುವೆಂಪು ತಮ್ಮ "ನೆನಪಿನ ದೋಣಿ"ಯಲ್ಲಿ ಕೊಂಗಾಡಿಯಪ್ಪನವರ ಮನೆ, ಸಗಣಿ, ಗಂಜಲಗಳ ವಾಸನೆಯಿಂದ ಕೂಡಿತ್ತು ಎಂಬುದಾಗಿ ಬರೆದಿದ್ದಾರೆ ಎಂದು ನೆನಪಿಸಿ ಹಬ್ಬಹರಿದಿನ-ಗಳಲ್ಲಿ ನೆಲವನ್ನೆಲ್ಲಾ ಸಾರಿಸಿದ ಸಂದರ್ಭದಲ್ಲಿ ಅವರು ಬಂದಿರಬಹುದೆಂದು ಸಮರ್ಥಿಸಿಕೊಳ್ಳುತ್ತಾರೆ.

ಬಿ.ಎಂ.ಶ್ರೀ. ವಿ.ಸಿ.ಎಂ.ಆರ್.ಶ್ರೀ ಮುಂತಾದವರು ಕೊಂಗಾಡಿಯಪ್ಪನವರ ಮನೆಗೆ ಬಂದಿದ್ದರು ಎಂದು ಹೇಳಿ ಲೇಖಕಿ ಮನೆತನದ ಹಿರಿಮೆ ತೋರಿಸಿದ್ದಾರೆ. ಕೊಂಗಾಡಿಯಪ್ಪನವರನ್ನು ಪರಿಚಯಿಸುವ ಮೂಲಕ ಅಂದಿನ ದೊಡ್ಡ ಬಳ್ಳಾಪುರದ ಸಾಮಾಜಿಕ ಚಿತ್ರಣ ನೀಡಿದ್ದಾರೆ.

"ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಅನುಪಮಾರಿಗೆ ೧೦-೧೧ ವರ್ಷವಾಗಿರುತ್ತದೆ. ಅಂದಿನ ರೇಷನ್ ವ್ಯವಸ್ಥೆಯಲ್ಲಿ ಅದನ್ನು ಪಡೆಯಲು

---

೧. ನೆನಪು: ಸಿಹಿಕಹಿ, ಡಾ.ಅನುಪಮಾ ನಿರಂಜನ, ಪು. ೩೩.

ಕ್ಯೂನಿಲ್ಲುವುದು, ಹಸಿದ ಹೊಟ್ಟೆಗೆ ತಾಯಿ ಕೊಡುವ ನಿರ್ಲಕ್ಷ್ಯ, ಸಂಬಳ ಕೊಟ್ಟರೆ ಆಯಿತು ಎನ್ನುವ ಮನೋಭಾವ, ತಾಯಿಪಡುತ್ತಿದ್ದ ಕಷ್ಟ, ತನಗೆ ಬಣ್ಣದ ಜರಿ ಬಟ್ಟೆ ಆಸೆ ತಂದೆ ತಾಯಿಗೆ ಈಡೇರಿಸಲಾಗದ ಸ್ಥಿತಿ, ಚೀಟಿ ಲಂಗದಲ್ಲಿಯೇ ಬಾಲ್ಯ ಕಳೆದುದ್ದನ್ನು ನೆನಪಿಸುತ್ತಾರೆ."[೧] ಇದು ಅಂದಿನ ಮಧ್ಯಮವರ್ಗದ ಕುಟುಂಬದ ಚಿತ್ರಣವಾಗಿದೆ. ಇಲ್ಲಿಯ ಬಹಳಷ್ಟು ವಿಷಯಗಳು ಅಂದಿನ ಸಾರ್ವತ್ರಿಕ ವ್ಯವಸ್ಥೆಯೇ ಆಗಿತ್ತು ಎನ್ನಬಹುದು.

ವೆಂಕಟಲಕ್ಷ್ಮಿಗೆ ಚಿಕ್ಕಂದಿನಲ್ಲಯೇ ಕಥೆ ಬರೆಯುವ ಆಸಕ್ತಿ ಇತ್ತು. ಅದಲ್ಲದೆ ಹೈಸ್ಕೂಲಿಗೆ ಬರುವ ವೇಳೆಗೆ ಸಾಕಷ್ಟು ಕಥೆ ಕಾದಂಬರಿಗಳನ್ನು ಓದುಕೊಂಡಿದ್ದರು. ಯಾವಾಗಲೂ ಬರೆಯುತ್ತಿದ್ದನ್ನು ಕಂಡು ತಂದೆ "ಏನು ಬರೀತಿದೀ ವೆಂಕೂ?" "ಕಥೆ" 'ಅದನ್ನು ಬರೆದು ಸಮಯ ಯಾಕೆ ವ್ಯರ್ಥಮಾಡಿಕೋತೀಯಾ?"[೨] ಎಂದು ಹೇಳಿದರೂ ಅನುಪಮಾ ಕಥೆ ಬರೆಯುವುದನ್ನು ನಿಲ್ಲಿಸಲಿಲ್ಲ. ಮನೆಯಲ್ಲಿ ಸಾಹಿತ್ಯದೆಡೆಗೆ ಯಾರು ಆಸಕ್ತಿ ತೋರದಿದ್ದರೂ, ಬರೆಯುವುದೂ ಬೇಡ ಎಂದರೂ ಅವರ ಮಾತಿಗೆ ಕಿವಿಗೊಡದೆ ಬರೆಯಲು ಪ್ರಾರಂಭಿಸಿದ್ದು ಸಾಹಿತ್ಯದಲ್ಲಿ ಸಾಧನೆಗೈಯ್ಯಲು ಅನುಪಮಾರಿಗೆ ಸಾಧ್ಯವಾಯಿತು.

ಹೀಗೆ ಅನುಪಮಾರ ತಂದೆ, ತಾತಂದಿರ ವಿಧ್ಯೆ, ಜ್ಞಾನ, ಶಿಸ್ತು ಮತ್ತು ಸೇವಾ ಮನೋಭಾವ ಮುಂದೆ ಈ ಹುಡುಗಿಯ ಜೀವನದಲ್ಲಿ ಗಾಢ ಪ್ರಭಾವ ಬೀರಿರುವುದನ್ನು ಕಾಣಬಹುದಾಗಿದೆ. ಅನುಪಮಾರ ತಾಯಿಯ ತಂದೆ ನರಸಪ್ಪ, ಮನೆಯ ಮುಂದೆ ಗೋಣಿಚೀಲ ಹಾಕಿಕೊಂಡು ಕುಳಿತು ಪುಟ್ಟ ವೆಂಕಟಲಕ್ಷ್ಮಿಯನ್ನು ಕೂಡಿಸಿಕೊಂಡು ಕಥೆಗಳನ್ನು ಹೇಳುತ್ತಿದ್ದರಂತೆ, ಈ ಹುಡುಗಿಯ ಸೋದರ ಮಾವಂದಿರು ಮನೆಯೊಳಗೆ ಮಗ್ಗಗಳಲ್ಲಿ ಸೀರೆಗಳನ್ನು ನೇಯುತ್ತಿದ್ದರಂತೆ. ತಾತನಿಂದ ಕತೆಗಳನ್ನು ಕೇಳುತ್ತಾ ತನ್ನ ಮನಸ್ಸಿನ ಮಗ್ಗದಲ್ಲಿ ಅದೆಷ್ಟು ಕಥೆಗಳ ಹಂದರಗಳನ್ನು ನೇಯ್ದಿದ್ದಳೋ ಏನೋ ಹುಡುಗಿ. ತಮ್ಮ ತಂದೆ-ತಾಯಿಗಳ ವಿಭಿನ್ನ ಸಂಸ್ಕೃತಿಗಳು, ತಮ್ಮ ವ್ಯಕ್ತಿತ್ವದ ಮೇಲೆ ಮೂಡಿಸಿದ ಪರಿಣಾಮವನ್ನು ಅನುಪಮಾ ಹೀಗೆ ದಾಖಲಿಸುತ್ತಾರೆ. "ನನ್ನ ತಾಯಿಯ ಕಡೆಯಿಂದ ಕಷ್ಟ ಸಹಿಷ್ಣುತೆಯನ್ನು, ಒರಟುತನವನ್ನೂ, ತಂದೆಯ ಕಡೆಯಿಂದ ವಿದ್ಯಾಭಿಲಾಷೆಯನ್ನು, ಶಿಸ್ತು ಪ್ರಾಮಾಣಿಕತೆಗಳನ್ನು ನಾನು ಬಳುವಳಿಯಾಗಿ ಪಡೆದೆ"[೩] ಎಂದು ತಮ್ಮ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ. ಹೀಗೆ ಬಡತನ, ಮನೆಗೆಲಸ, ಜಾತಿ

---

೧. ನೆನಪು; ಸಿಹಿಕಹಿ, ಡಾ.ಅನುಪಮಾ ನಿರಂಜನ, ಪು. ೩೩.

೨. ಅದೇ, ಪು. ೨೩

೩. ಅದೇ, ಪು. ೨೫.

ಸಂಪ್ರದಾಯ ಇಕ್ಕಟ್ಟುಗಳ ಮಧ್ಯದಲ್ಲೂ ಬಾಲ್ಯದಿಂದಲೇ ಕಥೆಯನ್ನು ಬರೆಯಲಾರಂಭಿಸಿದ ವೆಂಕಟಲಕ್ಷ್ಮಿಯ ಕನಸುಗಳು ನನಸಾಗತೊಡಗಿದವು.

೧೯೦೮ರ ಏಪ್ರಿಲ್ ೨೫ರಂದು ಬರ್ಮಾದ ಮಿತಿಲದಲ್ಲಿ ವಾಸಂತಿ ಪಡುಕೋಣೆ ಹುಟ್ಟಿದರು. ಅಣ್ಣಾಜಿರಾವ್ ಮತ್ತು ರಾಧಾಬಾಯಿ ದಂಪತಿಗಳ ಆರನೇ ಮಗುವಾಗಿ ಜನಿಸಿದ ವಾಸಂತಿಗೆ ಹುಟ್ಟಿದಾಗ ಇಟ್ಟ ಹೆಸರು 'ಶಾಂತಿ' ಎಂದು ತಂದೆ ತಾಯಿಗೆ ಅನೋನ್ಯವಿಲ್ಲದ ಕಾರಣದಿಂದಾಗಿ ಪರಸ್ಪರ ಅರ್ಥವಂತಿಕೆಯಿಲ್ಲದ ದಾಂಪತ್ಯದಿಂದಾಗಿ ಚಪ್ಪರದ ನೆರಳು ಕಾಣದೆ ಪರದೇಶಿಗಳಂತೆ ಸಂಬಂಧಿಕರ ಮನೆಯಲ್ಲಿ ಏಳು ಜನ ಮಕ್ಕಳು ಉಳಿಯಬೇಕಾಗುತ್ತದೆ. ತಂದೆ-ತಾಯಿಗಳ ತಪ್ಪು ತಿಳುವಳಿಕೆ ಮಕ್ಕಳನ್ನು ಕಷ್ಟಕ್ಕೆ ನೂಕುತ್ತದೆ. ತಂದೆ-ತಾಯಿಗಳ ವಿರಸದ ಹಿನ್ನೆಲೆಯಲ್ಲಿ ಕೌಟುಂಬಿಕ ಸಂಬಂಧಗಳು ಹದಗೆಟ್ಟು ವಾಸಂತಿಯವರ ಬಾಲ್ಯಜೀವನ ಮುಳ್ಳಿನ ಹಾಸಿಗೆಯಂತಾಯಿತು. ಅಣ್ಣಾಜಿ ಅವರ ಬದುಕಿನ ದುರಂತವೆಂದರೆ ತಮ್ಮದಲ್ಲದ ತಪ್ಪಿಗೆ ಆರು ತಿಂಗಳು ಸೆರೆಮನೆವಾಸ ಅನುಭವಿಸಿದ್ದು, ತಂದೆಯನ್ನು ಪೊಲೀಸರು ಎಳೆದುಕೊಂಡು ಹೋದಾಗ ಬಾಲಕಿ ವಾಸಂತಿ ಮುಗ್ಧತೆಯಿಂದ ಪ್ರಶ್ನಿಸುತ್ತಾರೆ.

"ಅಣ್ಣಾ ಪೊಲೀಸರು ಏಕೆ ಅಪ್ಪನನ್ನು ಕರೆದುಕೊಂಡು ಹೋದರು? ಎಂದಳು ಶಾಂತಿ. 'ಶಾಂತೂ ಅವರ ಮೇಲೆ ಅವರ ಜೊತೆ ಕೆಲಸ ಮಾಡುವವರು ತಪ್ಪು ದಾವೆ ಹೂಡಿ ಅವರನ್ನು ಜೈಲಿಗೆ ಹೋಗುವಂತೆ ಮಾಡಿದರು" ಎಂದ ಗೋಪಾಲ. "ವೈಕುಂಠ ಮಾವ ಒಳ್ಳೆಯರಲ್ಲವೇ? ಏತಕ್ಕೆ ಅಪ್ಪನ ಮೇಲೆ ಸುಳ್ಳುದಾವೆ ಮಾಡಿದರು? ಅಣ್ಣಾ, ಅಪ್ಪಾ ಬಂದ ನಂತರ ನಾವೆಲ್ಲರೂ ಹಿಂದಿನಂತೆಯೇ ಒಂದೆ ಕಡೆ ಇರುವೆವಲ್ಲವೆ"[೧]

ಬಾಲಕಿ ವಾಸಂತಿ ಕೇಳಿದ ಪ್ರಶ್ನೆ ನಿಜವೆಂಬಂತೆ ಮುಂದೆ ನಾಲ್ಕು ತಿಂಗಳು ಸೆರೆಮನೆವಾಸ ಅನುಭವಿಸಿ ಹೊರಬಂದರು. ಮನೆಗೆ ಬಾರದೆ ಹೋದರು ಇತ್ತ ಅವರ ಮನೆಯ ಪರಿಸ್ಥಿತಿಯೇ ಬದಲಾಯಿಸಿತು. ಅಣ್ಣಾ ಗೋಪಾಲನು ಮನೆ ಅಡವಾಗಿದ್ದುದರಿಂದ ಶಾಂತಿ, ಮೀನಾಕ್ಷಿ ತಾಯಿಯನ್ನು ಉಡುಪಿಗೆ ಕಳುಹಿಸಿ ಬೊಂಬಾಯಿಗೆ ಹೊರಟನು. ತಾಯಿ ರಮಾಬಾಯಿ ತಂದೆಯೊಡನೆ ಪತ್ರವ್ಯವಹಾರ-ವನ್ನು ಇಟ್ಟುಕೊಂಡಿರಲಿಲ್ಲ ಯಾವಾಗಲೂ ಅವರನ್ನು ದೂಷಿಸುತ್ತಿದ್ದರು ಎಂದು ಹೇಳುವ ವಾಸಂತಿ ಅದರ ಪರಿಣಾಮವನ್ನು ಅನುಭವಿಸಿದ್ದಾರೆ. ಏಕೆಂದರೆ ಶಾಂತಿಗೆ

೧. ಜೀವನ ಹೋರಾಟ: ವಾಸಂತಿ ಪಡುಕೋಣೆ, ಪು. ೨೬.

ತಂದೆಯೆಂದರೆ ಬಹಳ ಪ್ರೀತಿ. ಆದರೆ ತಾಯಿ ತಂದೆಯೊಡನೆ ಮಾತನಾಡಲು ಬಿಡುತ್ತಿರಲಿಲ್ಲ.

ತಪ್ಪು ಮಾಡುವುದು ಸಹಜ ಆದರೆ ತನ್ನ ತಪ್ಪನ್ನು ತಿದ್ದಿ ನಡೆಯುವುದು ದೊಡ್ಡತನ ತಪ್ಪನ್ನು ಮಾಡದೇ ಶಿಕ್ಷೆಯನ್ನನುಭವಿಸಿ ತನ್ನ ಮಕ್ಕಳ ಹೆಂಡತಿಯ ಪ್ರೀತಿಗಾಗಿ ಬಂದರೂ ಅದನ್ನು ಒಪ್ಪದೆ ರಮಾಬಾಯಿ ನಿರಾಕರಿಸುತ್ತಾರೆ. ತಂದೆ-ತಾಯಿ ಇಬ್ಬರೂ ಮಾಡಿದ ತಪ್ಪಿಗಾಗಿ ಇಲ್ಲಿ ಮಕ್ಕಳು ಶಿಕ್ಷೆಯನ್ನನುಭವಿಸುತ್ತಾರೆ.

ಬಡತನದ ಕಾರಣದಿಂದಾಗಿ ಶಾಂತಿಯ ಅಣ್ಣಂದಿರಾದ ವಿಠಲ ಮತ್ತು ರಮಾಕಾಂತ ಕೂಡ ರಾಧಾಬಾಯಿಯ ಅಕ್ಕನ ಮನೆಯಲ್ಲಿದ್ದರು. ಅವರಿಗೆ ತಂದೆತಾಯಿಯ ಮೇಲೆ ಸ್ವಲ್ಪವೂ ಪ್ರೀತಿ ಇರದಂತೆ ದೊಡ್ಡ ತಾಯಿ ಮಾಡಿದ್ದರು. ತಂದೆ ಜೈಲಿಗೆ ಹೋದ ನೋವು ಅವರಲ್ಲಿ ಇರಲಿಲ್ಲ ಎಂದು ನೊಂದು ಹೇಳುತ್ತಾರೆ.

"ಅಣ್ಣಾ ನಿನಗೆ ನಮ್ಮಪ್ಪನ ನೆನಪಾಗುವುದಿಲ್ಲವೇ?" ಎಂದೆ ನಾನು. ಆತ ಹೂಂ ಅಪ್ಪ. ಅವರ ನೆನಪಾಗದಿರುವುದೇ ಒಳ್ಳೆಯದು. ಜೈಲಿಗೆ ಹೋದವರನ್ನು ನನ್ನ ತಂದೆ ಎನ್ನಲು ನಾಚಿಕೆಯಾಗುತ್ತದೆ ಎಂದನು"[೧] ಇದರಿಂದ ತಂದೆಯ ಮೇಲೆ ಬಹಳ ಪ್ರೀತಿಯನ್ನು ಹೊಂದಿದ ಶಾಂತಿಯ ಮನಸ್ಸು ನೊಂದುಕೊಳ್ಳುತ್ತದೆ. ತಂದೆ ವಾಸಂತಿಯನ್ನು ನೋಡಲು ಬಂದಾಗ ತಾಯಿಯ ಅಸಹನೆ ಚುಚ್ಚು ಮಾತಿನಿಂದ ಮತ್ತೆ ಮನೆಬಿಟ್ಟು ಹೋದದ್ದು ಇಂತಹ ಸಾಕಷ್ಟು ಬಿಕ್ಕಟ್ಟಿನ ಸಂದರ್ಭಗಳು ಮನೋವೇದನೆಯ ಘಟನೆಗಳು ಲೇಖಕಿಯನ್ನು ಪದೇ ಪದೇ ಎದುರುಗೊಂಡಿದೆ. ತಾಯಿಯ ಮುಂಗೋಪತನ ಅವರನ್ನು ಸಾಕಷ್ಟು ನೋಯಿಸಿದೆ.

ವಾಸಂತಿಯವರ ತಂದೆ ತಾಯಿಯಲ್ಲಿ ಪರಸ್ಪರ ಅನ್ಯೋನ್ಯತೆ ಇಲ್ಲದಿದ್ದುದು. ತಂದೆ ಕುಟುಂಬದ ಜವಾಬ್ದಾರಿ ವಹಿಸದರುವುದರಿಂದ ಸ್ವತಂತ್ರ ಅಸ್ತಿತ್ವವಿಲ್ಲದಂತಾಗಿ, ಆರ್ಥಿಕ ಅನುಕೂಲವಿಲ್ಲದೆ ಬಾಲ್ಯದಲ್ಲಿಯೇ ವಾಸಂತಿ ಸಾಕಷ್ಟು ನೋವನ್ನೆ ಅನುಭವಿಸಬೇಕಾಯಿತು. ಸಾಮಾನ್ಯವಾಗಿ ಪ್ರತಿಯೊಂದಕ್ಕೂ ಬೇರೆಯವರನ್ನು ಅವಲಂಬಿಸಿದಾಗ ಅವರು ಸಂಕೀರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಸಿದ್ಧವಾಗಿರುವುದಿಲ್ಲ. ಅಂತೆಯೇ ವಾಸಂತಿಯ ಬದುಕು ಇತರರನ್ನು ಅವಲಂಬಿಸಿ ಸಾಕಷ್ಟು ನೋವು ಕಂಡಿತು.

ತಾಯಿಯದ್ದಾದರೋ ಎಂಥ ಹಠಸ್ವಭಾವ ಕೈಯಲ್ಲಿ ಕಾಸಿಲ್ಲ ನಿಲ್ಲು-ವುದಕ್ಕೊಂದು ನೆಲೆಯಿಲ್ಲ ಬಂಧುಮಿತ್ರರ ನೆರವೂ ಇಲ್ಲ, ಇಂತಹ ಸಂದರ್ಭದಲ್ಲಿ ತನ್ನ

೧. ಜೀವನ ಹೋರಾಟ; ವಾಸಂತಿ ಪಡುಕೋಣೆ, ಪು. ೨೧.

ಮಕ್ಕಳಿಗಾಗಿಯಾದರೂ ತಾನು ಪರಿಸ್ಥಿತಿಯೊಂದಿಗೆ ರಾಜಿಮಾಡಿಕೊಳ್ಳಬೇಕೆಂಬ ಅರಿವು ಆಕೆಯಲ್ಲುಂಟಾಗಲಿಲ್ಲ.

'ಅಪ್ಪ ಅಮ್ಮನ ಜಗಳದಲ್ಲಿ ಕೂಸು ಬಡವಾಯಿತು' ಎನ್ನುವ ಗಾದೆ ಮಾತು ವಾಸಂತಿ ಪಡುಕೋಣೆಯವರ ಜೀವನಕ್ಕೆ ಬಹಳ ಹೊಂದುತ್ತದೆ. ವಾಸಂತಿಯವರ ತಂದೆ ಅಣ್ಣಾಜಿರಾವ್ ಮತ್ತು ರಾಧಾಬಾಯಿಯವರಲ್ಲಿ ಹೊಂದಾಣಿಕೆ ಇರುತ್ತಿದ್ದರೆ, ಅವರಿಬ್ಬರೇ ಕೂಡಿ ಬಾಳಿದ್ದರೆ ವಾಸಂತಿಯವರ ಜೀವನ ಚಿತ್ರಣ ಬೇರೆಯೇ ಆಗಿರುತ್ತಿತ್ತೇನೊ? ಆದ್ದರಿಂದ ವಾಸಂತಿ ಪಡುಕೋಣೆಯವರು ಬಾಲ್ಯದಲ್ಲಿ ಬರಿ ಕಹಿಯನ್ನಷ್ಟೆ ಉಂಡರು.

ವಾಸಂತಿ ಅವರು ಬಾಲ್ಯದಲ್ಲಿ ಅಲೆಮಾರಿ ಜೀವನವನ್ನೇ ನಡೆಸುವುದು ಮಾತ್ರವಲ್ಲದೇ ವಿವಾಹದ ನಂತರ ಪತಿಯಿಂದಾಗಿಯೂ ಅವರಿವರ ಮನೆಯಲ್ಲಿ ನೆಲೆಸಬೇಕಾಗಿ ಬಂತು. ಇಂತಹ ಸಂದರ್ಭದಲ್ಲಿ ಅವರಿವರ ಚುಚ್ಚು ಮಾತುಗಳು ಹೀಯಾಳಿಕೆ ಎಲ್ಲವನ್ನೇ ಅನುಭವಿಸಬೇಕಾಯಿತು. ಜೊತೆಗೆ ಓದಲು ಯಾವುದೇ ಉತ್ತೇಜಕ ವಾತಾವರಣವಿರಲಿಲ್ಲ. ಲೇಖಕಿಯೇ ಹೇಳುವಂತೆ "ನಾನು ಚಿಕ್ಕವರಿದ್ದಾಗ ನಮಗೆ ಸರಿಯಾದ ಶಿಕ್ಷಣ ದೊರೆಯಲ್ಲಿಲ್ಲ. ಮಾರ್ಗದರ್ಶನ ಸಿಗಲಿಲ್ಲ ಏನಾದರೂ ಮಾಡುವ ಎಂದು ಹೊರಟರೆ ಅಡ್ಡ ಬಂದ ಜನರೇ ಹೆಚ್ಚು. ಆಗ ಯಾರಾದರೂ ನಮ್ಮ ಬೆನ್ನಿಗೆ ನಿಂತು ಉತ್ತೇಜನ ಕೊಟ್ಟಿದ್ದರೆ ನಾವು ಮಾಡಬಹುದಿತ್ತು ಏನನ್ನಾದರೂ ಸಾಧಿಸಬಹುದಾಗಿತ್ತು"[೧] ಎಂದು ತಮ್ಮ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ.

ಶಾರದಾಹೆಮ್ಮಿಗೆಯವರು ಶ್ರೀರಾಮಾನುಜಚಾರ್ಯರ ಪರಂಪರೆಯ ಅಯ್ಯಂಗಾರ್ ಬ್ರಾಹಣರ ವರ್ಗಕ್ಕೆ ಸೇರಿದವರು ಪೂರ್ವಜರು ಕಾಂಚೀಪುರಂ ಕಡೆಯವರು. ನೂರಾರು ವರ್ಷಗಳ ಹಿಂದೆಯೇ ಈ ಹಳ್ಳಿಯಲ್ಲಿ ಬಂದು ನೆಲೆಸಿ ಜಮೀನು ಮಾಡಿಕೊಂಡಿದ್ದರು, ಕಾಲಕ್ರಮೇಣದಲ್ಲಿ ಎಲ್ಲವನ್ನು ಕಳೆದುಕೊಂಡು ಅಸಹಾಯಕ– ರಾದರು. ಲೇಖಕಿ ಏಳು ವರ್ಷದವರಿದ್ದಾಗಲೇ ತಂದೆಯನ್ನು ಕಳೆದುಕೊಂಡರು. ಹೀಗಾಗಿ ತಾಯಿಯೇ ತಂದೆಯ ಸ್ಥಾನವನ್ನು ತುಂಬಿಕೊಡಬೇಕಾಯಿತು. ಅವರು ಬೆಳೆದ ಅಥವಾ ಬಾಲ್ಯವನ್ನು ಕಳೆದ ಕಾವೇರಿ ಕಪಿಲಾ ಸಂಗಮದ ತಿರುಮಕೂಡಲ ನರಸೀಪುರದ ಬಳಿಯ, ವನರಾಜಿಯ ಹೊಳೆಯೇ ಪ್ರಾಣವಾಗಿದ್ದ ಜಗಜೀವನದ ಪ್ರಾಮಾಣಿಕ ದಾಖಲೆ ನೀಡಿದ್ದಾರೆ. ಕಾಡಿನಿಂದ ಆವರಿಸಲ್ಪಟ್ಟು ಭದ್ರಾವತಿಯ

೧. ಜೀವನ ಹೋರಾಟ; ವಾಸಂತಿ ಪಡುಕೋಣೆ, ಪು. ೨೬.

ಪರಿಸರ.... ನರಸಿಂಹರಾಜಪುರ ತರಿಕೆರೆಗಳ ಅರಣ್ಯ ಪ್ರದೇಶದ ರೈಲ್ವೆ ಕಾಲೋನಿಯ ಜನಜೀವನವನ್ನು ಕೊಟ್ಟಿದ್ದಾರೆ.

ತಂದೆಯನ್ನು ಕಳೆದುಕೊಂಡನಂತರ ತವರಿಗೆ ಬಂದ ತಾಯಿಯೇ ಅವಳ ಮೂವರು ಸಹೋದರಿಯರನ್ನು ಸಾಕಿ ಸಲುಹಿದ ಪ್ರಸಂಗ ಬರುತ್ತದೆ. ಅಜ್ಜಿ ಸೋದರಮಾವನೂ ಅಲ್ಪಕಾಲದಲ್ಲಿಯೇ ಇನ್ನಿಲ್ಲವಾಗುತ್ತಾರೆ. ಲೇಖಕಿಯ ಬಾಲ್ಯದ ಸ್ವಾತಂತ್ರ್ಯ ಹೋರಾಟದ ನೆನಪುಗಳಲ್ಲಿ ಆಕೆಯ ಸೋದರಮಾವ ಓದಲು ಮೈಸೂರಿಗೆ ಹೋಗಿ ಉತ್ಕಟ ದೇಶಾಭಿಮಾನಿಯಾಗಿ ಪರಿವರ್ತನೆ ಹೊಂದಿ ಒಂದೆರಡು ಬಾರಿ ಜೈಲಿಗೂ ಹೋಗಿ ಕೊನೆಗೆ ಸನ್ನಿಪಾತ ಜ್ವರದಲ್ಲಿ ಬಳಲಿ ನಿಧನ ಹೊಂದಿದ್ದು ಇದೆ. ಆ ತರುಣ ತನ್ನ ಕಗ್ಗಳ್ಳಿಯಲ್ಲಿ ಹುಟ್ಟಿಸಿದ ರಾಜಕೀಯ ಜಾಗೃತಿ, ಬಾಲಕಿ ಶಾರದೆಯ ಮೇಲೆ ಅಚ್ಚೊತ್ತಿ ನಿಲ್ಲುತ್ತದೆ. ಆಕೆಯ ಚಿಕ್ಕಮ್ಮನ ಗಂಡ ಸುಪ್ರಸಿದ್ಧ ಸಾಹಿತಿ, ಸ್ವಾತಂತ್ರ್ಯಯೋಧ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಸ್ವಂತ ಮಗ ರಾಮಚಂದ್ರ ಪೊಲೀಸರ ಗುಂಡನೇಟಿಗೆ ಬಲಿಯಾಗುತ್ತಾನೆ.

ಲೇಖಕಿಯ ಬಾಲ್ಯದ ಘಟನೆಗಳನ್ನು ಗಮನಿಸಿದಾಗ ಇದು ಇವರೊಬ್ಬರಿಗೆ ಮಾತ್ರ ಮೀಸಲಾಗದೆ ಇಡೀ ಗ್ರಾಮೀಣ ಬದುಕಿನ ಮಕ್ಕಳಿಗೆಲ್ಲಾ ಅನ್ವಯಿಸುತ್ತದೆ. ಸಂಪ್ರದಾಯಸ್ಥ ಮನೆತನ, ಕಿತ್ತು ತಿನ್ನುವ ಬಡತನ ನಿರಾಶದಾಯಕವಾದ ಬದುಕು, ಲೇಖಕರಿಗೆ ಮೂವರು ಸೋದರಿಯರು ಇಂತಹ ಬಡತನದ ಬೇಗೆಯಲ್ಲಿಯೂ ಬದುಕಬೇಕೆಂಬ ಹಟ ಈ ಕಥಾನಕದ ಮುಖ್ಯಸ್ಥಾಯಿಯಾಗಿದೆ. ಶಾರದೆಯೂ ಓದಬೇಕೆಂಬ ಹಂಬಲದಿಂದ ಮೈಸೂರಿಗೆ ಬಂದು ಅಕ್ಕನ ಮನೆಯಲ್ಲಿಟ್ಟು ಮಿಡ್ಲಸ್ಕೂಲು ಸೇರಿದರೂ ಅದು ಮುಂದುವರೆಯಲು ಮನೆಯ ಒತ್ತಡಗಳು ಬಿಡುವಿಲ್ಲ ಹಿರಿಯಕ್ಕ ಸೀತಕ್ಕನನ್ನು ಭದ್ರಾವತಿಗೆ ಕೊಡಲಾಗಿತ್ತು, ಎರಡನೆಯ ಅಕ್ಕ ಗೀತಕ್ಕಳನ್ನು ಮೈಸೂರಿಗೆ ಮದುವೆಮಾಡಿಕೊಟ್ಟರು. ಹೀಗಾಗಿ ಭದ್ರಾವತಿ ಹಾಗೂ ಮೈಸೂರುಗಳಲ್ಲಿ ಲೇಖಕಿಯ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ನಡೆದದ್ದನ್ನು ಸ್ಮರಿಸಿಕೊಂಡಿದ್ದಾರೆ. ಚಿಕ್ಕಳ್ಳಿಯ ಜತೆಗೆ ಭದ್ರಾವತಿ ಮೈಸೂರುಗಳಂತಹ ಪಟ್ಟಣಗಳ ಸಂಬಂಧವೇ ಇಲ್ಲಿದೆ ಮುಂದೆ ಅದು ಬೆಂಗಳೂರಿನವರೆಗೂ ವ್ಯಾಪಿಸುತ್ತದೆ. ಹೀಗಾಗಿ ಶಾರದ ಹೆಮ್ಮಿಗೆಯವರ ಬಡತನವನ್ನು ಚಿಕ್ಕಂದಿನ ಬವಣೆಯನ್ನು ಹೆತ್ತ ತಾಯಿಯ ನಿಷ್ಠುರ ಸ್ವಭಾವದಿಂದಾಗಿ ಶಾರದಾ ಅವರನ್ನು ಕಾಡುವ ಅನಾಥ ಪ್ರಜ್ಞೆಯನ್ನು ವಿದ್ಯೆಯ ಹಸಿವೆಯನ್ನು ಲೇಖಕಿಯು ಬಾಲ್ಯದಲ್ಲೇ ಅನುಭವಿಸಿದ್ದರು.

ಚಂದ್ರಗಿರಿಯ ಚಮನಾಡು ಗ್ರಾಮದಿಂದ ಸಾರಾ ಅವರ ಬಾಲ್ಯದಿನಗಳು ಆರಂಭವಾಗುತ್ತವೆ. ಇವರು ಬೇಸಗೆ ಮತ್ತು ಉಳಿದ ರಜಾದಿನಗಳನ್ನು ತಮ್ಮ ಅಜ್ಜಿಯ ನೆಚ್ಚಿನ ಊರಾದ ಚಂದ್ರಗಿರಿಯಲ್ಲಿ ಕಳೆಯುತ್ತಿದ್ದು, "ವಾರದ ರಜಾ ದಿನಗಳಲ್ಲೂ ನಾನು ಅಜ್ಜಿಯ ಮನೆಗೆ ಹೋಗುತ್ತಿದ್ದೆ ಚಂದ್ರಗಿರಿಯನ್ನು ವಾರಕ್ಕೊಮ್ಮೆ ನೋಡದಿರಲು ಅದರ ತೀರದಲ್ಲಿ ಆಟವಾಡದಿರಲು ನನಗೂ ಸಾಧ್ಯವಾಗುತ್ತಿರಲಿಲ್ಲ ಆದ್ದರಿಂದ ಎಂತಹ ನೆರೆಯಲ್ಲೂ ನಾನು ನನ್ನಜ್ಜನೊಡನೆ ಈ ಚಂದ್ರಗಿರಿಯನ್ನು ದಾಟುತ್ತಿದೆ." ಎಂದು ಲೇಖಕಿಯು ಚಂದ್ರಗಿರಿಯ ಬಗೆಗಿದ್ದ ಪ್ರೀತಿ ಅಭಿಮಾನವನ್ನು ತಮ್ಮ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ.

ಮುಸ್ಲಿಂ ಸಮುದಾಯದ ಜನರು ತಮ್ಮದೇ ಆದ ವಿಚಾರ– ರೂಢಿ ಸಂಪ್ರದಾಯಗಳನ್ನು ಹೊಂದಿದ್ದು ತಮ್ಮದೇ ಆದ ಧಾರ್ಮಿಕ ಚೌಕಟ್ಟಿನೊಳಗೆ ಜೀವನ ನಡೆಸುತ್ತಾರೆ. ಅದನ್ನು ಮೀರಿ ಯಾರು ನಡೆಯುವಂತಿರಲಿಲ್ಲ ಪುರುಷ ಪ್ರಧಾನ ಸಮಾಜದಲ್ಲಿ ಮುಸ್ಲಿಂ ಮಹಿಳೆರಿಗೆ ಯಾವುದೇ ರೀತಿಯ ಸ್ವಾತಂತ್ರ್ಯವಿಲ್ಲದೆ ನಾಲ್ಕು ಗೋಡೆಯೊಳಗೆ ಬಂಧಿಯಾಗಿರುತ್ತಾರೆ. ಅವರಿಗೆ ಸ್ವತಂತ್ರವಾಗಿ ಶಾಲೆಗೆ ಹೋಗುವ, ಓದುವ, ಬರೆಯುವ ಅವಕಾಶ ಇಲ್ಲದಾಗಿದೆ. ಶಿಕ್ಷಣ ಸಿಕ್ಕದ್ದರೂ ಅದು ನಿರ್ದಿಷ್ಟ ಹಂತದವರೆಗೆ ಮಾತ್ರ ಮೀಸಲಾಗಿದ್ದು, ತಮ್ಮ ಕುಟುಂಬದವರು, ಧರ್ಮದವರು ವಿಧಿಸಿರುವ ನಿಯಮಗಳನ್ನು ಅವರು ಪಾಲಿಸಬೇಕಾಗುತ್ತದೆ.

ಇದೇ ರೀತಿ ಸಾರಾ ಅವರು ಬಾಲ್ಯದಲ್ಲಿ ಶಾಲೆಗೆ ಹೊಗಲಾರಂಭಿಸಿದಾಗ ತನ್ನ ತಾಯಿ ಮತ್ತು ಅಜ್ಜಿ ಹಾಗೂ ಧರ್ಮದವರು ವಿರೋಧಿಸುತ್ತಾರೆ. ಆದರೆ ತನ್ನ ತಂದೆ ವಿದ್ಯಾವಂತರಾಗಿದ್ದು ಬಿ.ಎಲ್. ತರಗತಿಯಲ್ಲಿ 'ಮಹಮಡನ್‌ಲಾ'ದಲ್ಲಿ ಇವರು ಮದ್ರಾಸು ವಿಶ್ವವಿದ್ಯಾಲಯದ ಚಿನ್ನದ ಪದಕವನ್ನು ಗಳಿಸಿಕೊಂಡಿದ್ದರು. ಅಲ್ಲದೆ ತನ್ನ ಅಣ್ಣನು ಸಹ ವಿದ್ಯಾವಂತನಾದ್ದರಿಂದ ಸಾರಾ ಅವರ ವಿದ್ಯಾಭ್ಯಾಸಕ್ಕೆ ಇವರು ಸ್ಫೂರ್ತಿನೀಡಿದ್ದರು ಎಂಬುದನ್ನು ತಮ್ಮ ಆತ್ಮಕಥೆಯಲ್ಲಿ ಹೀಗೆ ನಿರೂಪಿಸಿದ್ದಾರೆ.

ಎಸ್. ಎಸ್.ಎಲ್.ಸಿ. ಮಟ್ಟದ ವಿದ್ಯಾಭ್ಯಾಸ ಯಾವ ತೊಂದರೆಯೂ ಇಲ್ಲದೆ ಮುಗಿಸಲು ಸಾಧ್ಯವಾಯಿತು ಅಂದರೆ ಇವರು ನನ್ನ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುತ್ತಿದ್ದ ರೆಂದೆನೂ ಅಲ್ಲ. ಆದರೆ ನಿಷೇಧಿಸಲಿಲ್ಲ! ಆದರೂ ನನ್ನ ತಾಯಿಯೊಡನೆ ಆಗಾಗ ಯಾರಾದರೂ ಬಂದು ನಯವಾಗಿ "ನಿಮ್ಮ ಮಗಳು ತುಂಬಾ ಬೆಳೆದು ಬಿಟ್ಟದ್ದಾಳೆ. ಇನ್ನು ಅವಳನ್ನು ಶಾಲೆಗೆ ಕಳುಹಿಸುವುದು ಸರಿಯಲ್ಲ" ಎಂದು ಚುಚ್ಚುತ್ತಲೇ ಇದ್ದರು ಆಗ ನನ್ನ ತಂದೆ.

“ಹೆಣ್ಣು ಮಕ್ಕಳಿಗೆ ವಿದ್ಯೆ ಕೊಡಕೂಡದೆಂದು ಖುರಾನಿನಲ್ಲಿ ಎಲ್ಲೂ ಹೇಳಿಲ್ಲವಲ್ಲ? ಮುಂದಿನ ಜನಾಂಗವನ್ನು ಪೋಷಿಸಿ ಉತ್ತಮ ಪ್ರಜೆಯಾಗಿ ಮುಂದೆ ತರಬೇಕಾದವಳು ತಾಯಿಯಾದ್ದರಿಂದ ಗಂಡಿಗಿಂತಲೂ ಹೆಣ್ಣಿಗೆ ವಿದ್ಯಾಭ್ಯಾಸದ ಅಗತ್ಯವಿದೆ ಎಂದು ಮಹಮ್ಮದ್ ಪೈಗಂಬರರು ಬೋಧಿಸಿದ್ದಾರೆ. ಆದ್ದರಿಂದ ನನ್ನ ಮಗಳ ವಿದ್ಯಾಭ್ಯಾಸದ ಕುರಿತು ಯಾರೂ ಏನು ಹೇಳಬೇಕಾಗಿಲ್ಲ. ನನಗೆ ಸರಿಕಂಡಂತೆ ಮಾಡುತ್ತೇನೆ”[೧] ಎನ್ನುತ್ತಿದ್ದರು.

ಹೀಗೆ ಸಾರಾ ಅವರ ತಂದೆಯು ಮಗಳ ವಿದ್ಯಾಭ್ಯಾಸದ ಬಗ್ಗೆ ತಮ್ಮ ಧರ್ಮದವರಿಂದ ಎಷ್ಟೇ ವಿರೋಧ ಬಂದರು ತಮ್ಮ ದೃಢನಿರ್ಧಾರವನ್ನು ಬದಲಿಸಲಿಲ್ಲ. ಅಲ್ಲದೆ ತನ್ನ ಹಿರಿಯಣ್ಣನ ನಿರಂತರ ಪ್ರೋತ್ಸಾಹದೆದುರು, ತನ್ನ ತಾಯಿಯೇ ಆಗಲಿ ಇತರ ಯಾರೇ ಆಗಲಿ ಏನೂ ಮಾಡುವಂತಿರಲಿಲ್ಲ.

ಪ್ರಾರಂಭದಲ್ಲಿ ಸಾರಾ ಅವರಿಗೆ ವಿದ್ಯಾಭ್ಯಾಸದಲ್ಲಿ ಅಂತಹ ಪ್ರಗತಿ ತೋರದಿದ್ದರೂ ಕ್ರಮೇಣ ಅವರಿಗೆ ವಿದ್ಯೆಯಲ್ಲಿ ಆಸಕ್ತಿ ಮೂಡಿಸಿದ್ದು ಅವರ ಹಿರಿಯಣ್ಣ. ಇವರು ಮಾಡುತ್ತಿದ್ದ ನಿರಂತರ ಪ್ರೋತ್ಸಾಹದಿಂದ ಇವರು ವಿದ್ಯಾಭ್ಯಾಸದಲ್ಲಿ ಮುಂದುವರೆಯಲು ಸಾಧ್ಯವಾಯಿತು ಎಂಬುದನ್ನು ಹೀಗೆ ಹೇಳಿದ್ದಾರೆ.

“ನೀನು ಚೆನ್ನಾಗಿ ಕಲಿಯಬೇಕು ಉತ್ತಮ ಅಂಕ ಪಡೆಯಬೇಕು, ನನ್ನ ತಂಗಿಯಾಗಿ ಉತ್ತಮ ಆಟಗಾರ್ತಿಯೂ ಆಗಬೇಕು”[೨] ಎಂದು ಅವನು ವಾರಕ್ಕೊಂದು ಪತ್ರ ಬರೆಯುತ್ತಿದ್ದನು. ತಂದೆ ಕೊಟ್ಟ ಪಾಕೆಟ್‌ಮನಿಯಲ್ಲಿ ಉಳಿಸಿದ ಹಣದಿಂದ ಪ್ರತಿವರ್ಷ ಜೂನ್ ತಿಂಗಳಲ್ಲಿ ನನಗೆ ಶಾಲೆಗೆ ಬೇಕಾದ ಪುಸ್ತಕ, ಬಟ್ಟೆ, ಇತರ ಸಾಮಾನುಗಳನ್ನೆಲ್ಲಾ ತಂದುಕೊಟ್ಟು ನಾನು ಶಾಲೆಗೆ ಹೊಗಲು ಪ್ರಾರಂಭಿಸಿದ ಮೇಲೆಯೇ ಮದ್ರಾಸಿಗೆ ಪ್ರಯಾಣ ಮಾಡುತ್ತಿದ್ದನು. ನಾನು ಮೊದಲೇ ಹೊರಟುಬಿಟ್ಟರೆ ಅಮೇಲೆ ತಾಯಿ ನನ್ನನ್ನು ಶಾಲೆಗೆ ಕಳುಹಿಸದೇ ಹೋದರೆ? ಭಯದಿಂದಲೇ ಅವನು ಹೀಗೆ ಮಾಡುತ್ತಿದ್ದನು.

ಸಾ.ರಾ ಅವರ ವಿದ್ಯಾಭ್ಯಾಸಕ್ಕೆ ಬಾಲ್ಯದಿಂದಲೇ ಅನೇಕ ಸಮಸ್ಯೆಗಳು ಎದುರಾದರು ತಂದೆ ಮತ್ತು ಅಣ್ಣನ ಪ್ರೋತ್ಸಾಹದಿಂದ ಅವರು ಶಿಕ್ಷಣವನ್ನು ಪಡೆಯಲು ಸಾಧ್ಯವಾಯಿತು.

---

೧. ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು: ಸಾ.ರಾ. ಅಬೂಬಕ್ಕರ್, ಪು. ೮೬

೨. ಅದೇ, ಪು. ೮೭

೨. ಕುಟುಂಬ ಮತ್ತು ಸಮಾಜ

ಕುಟುಂಬವು ಸಮಾಜದ ಅವಿಭಾಜ್ಯ ಅಂಗವಾಗಿದ್ದು ಇದು ವ್ಯಕ್ತಿಯ ಸಾಧನೆಗೆ ಒತ್ತಾಸೆಯಾಗಿ ನಿಲ್ಲಬಲ್ಲುದು ವ್ಯಕ್ತಿಯ ಬದುಕಿನ ವಿವಿಧ ಹಂತಗಳಲ್ಲಿ ತಾಯಿ ತಂದೆ, ಅಣ್ಣತಮ್ಮಂದಿರು, ಗಂಡಹೆಂಡತಿ, ಮಕ್ಕಳು ಬೀರುವ ಮಕ್ಕಳು ಬೀರುವ ಪ್ರಭಾವ ಕಡಿಮೆಯೇನೂ ಅಲ್ಲ. ವ್ಯಕ್ತಿಯ ಜೀವನವನ್ನು ರೂಪಿಸುವಲ್ಲಿ ಕುಟುಂಬವರ್ಗದವರ ಪಾತ್ರ ಮಹತ್ವದ್ದು. ಕುಟುಂಬದವರ ಮಾರ್ಗದರ್ಶನ ಮತ್ತು ಪ್ರೋತ್ಸಾಹವಿದ್ದರೆ ವ್ಯಕ್ತಿಯ ಜೀವನ ಉಜ್ವಲ ಭವಿಷ್ಯದಿಂದ ಕೂಡಿರುತ್ತದೆ. ಒಬ್ಬ ವ್ಯಕ್ತಿಯ ತನ್ನೆಲ್ಲಾ ಸಾಧನೆಗಳಿಗೆ ಕುಟಂಬದವರ ಪಾತ್ರ ಎಷ್ಟು ಮುಖ್ಯವೋ, ಸಮಾಜವು ಅಷ್ಟೇ ಮುಖ್ಯ ಆದ್ದರಿಂದ ಕುಟುಂಬ ಮತ್ತು ಸಮಾಜ ಎರಡೂ ಪೂರಕ ಶಕ್ತಿಯಾಗಿ ನಿಲ್ಲುತ್ತದೆ.

ಅನುಪಮಾರವರಿಗೆ ಬಾಲ್ಯದಲ್ಲಿಯೇ ಸೃಜನಶೀಲತೆ ಇದ್ದಿತು, ಇಂತಹ ಸೃಜನಶೀಲತೆಯುಳ್ಳ ಅನುಪಮಾರವರನ್ನು ಬೆಳೆಸಿದ್ದು ಅವರ ಬಾಳ ಸಂಗಾತಿಯಾದ ನಿರಂಜನ ಸಾಕಷ್ಟು ಮಹಿಳೆಯರಿಗೆ ಬರೆಯುವ, ಓದುವ ತುಡಿತವಿದ್ದರೂ ಕುಟುಂಬದವರ ಪ್ರೋತ್ಸಾಹವಿಲ್ಲದೆ ಅವರ ಬರವಣಿಗೆಗೆ ಕತ್ತರಿ ಬೀಳಬಹುದು, ಆದರೆ ಅನುಪಮಾರವರು ಸಮರ್ಥ ಲೇಖಕಿಯಾಗಿ, ವೈದ್ಯೆಯಾಗಿ ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಬೆನ್ನೆಲುಬಾಗಿ ನಿಂತವರು ಅವರ ಪತಿ ನಿರಂಜನರು.

ಸಾಮಾನ್ಯವಾಗಿ ಮನೆಯ ಒಳಗೂ ಹೊರಗೂ ದುಡಿಯುವಂಥ ಮಹಿಳೆಯರಿಗೆ ತಾವು ಯಾವ ಕಾರ್ಯವನ್ನು ಪರಿಪೂರ್ಣವಾಗಿ ಸಮರ್ಪಕವಾಗಿ ಮಾಡಲಾರೆವು ಎಂಬ ಕೊರಗಿರುತ್ತದೆ. ಆದರೆ ಅನುಪಮಾರವರಿಗೆ ಅವರ ಪತಿಯು ನೀಡಿದ ಬೆಂಬಲದಿಂದಾಗಿ ಅವರು ವೈದ್ಯೆಯಾಗಿ, ಸಾಹಿತಿಯಾಗಿ, ಗೃಹಿಣಿಯಾಗಿ ಮೂರು ದೋಣಿಗಳ ಪಯಣವನ್ನು ಸುಗಮವಾಗಿ ನಡೆಸಿಕೊಂಡು ದಡಮುಟ್ಟಿದ್ದರು.

"ಅನುಪಮಾರವರಿಗೆ ಬಾಲ್ಯದಲ್ಲಿಯೇ ಬರವಣಿಗೆಯ ತುಡಿತವಿದ್ದಂತೆ ವೈದ್ಯೆಯಾಗಬೇಕೆಂಬ ಆಸೆಯಿತ್ತು. ಹದಿಮೂರು ವರ್ಷದ ಅನುಪಮಾ ತನ್ನ ಬಟ್ಟೆಯಲ್ಲಿ ಕೆಂಪುಕಲೆಯಾದುದ್ದನ್ನು ಕಂಡು ರಕ್ತ ಭೇದಿಯೆಂದು ತಿಳಿದು ತಾಯಿಗೆ ತೋರುತ್ತಾರೆ, ಅದೊಂದು ಸಂತೋಷದ ವಿಷಯವೆಂಬಂತೆ ತಾಯಿನಕ್ಕು, ಇದೊಂದು ಸಹಜ ಸಂಗತಿಯೆಂದು ಎಲ್ಲಾ ಹುಡುಗಿಯರಿಗೂ ಹೀಗಾಗುತ್ತದೆಂದೂ ಹೇಳುತ್ತಾರೆ. ಆ ಸಂದರ್ಭದಲ್ಲಿ ತನ್ನ ಹೆಣ್ತನವನ್ನು ಶಪಿಸದೆ, ಹತಾಶಳಾಗದೆ ಏನಾದ್ರು ಮಾಡಿ ನಾನು ಡಾಕ್ಟರ್ ಆಗಬೇಕು. ಈ ಮುಟ್ಟಾಗೋದನ್ನ ನಿಲ್ಲಿಸಬೇಕು"[೧] ಎಂದು ನಿರ್ಧರಿಸಿದ

೧. ನೆನಪು ಸಿಹಿ ಕಹಿ: ಅನುಪಮಾ ನಿರಂಜನ, ಪು. ೫೨..

ಅನುಪಮಾ ಮುಂದೆ ಖ್ಯಾತ ವೈದ್ಯೆಯಾಗಲು; ಜನರೊಡನೆ ನಿಕಟ ಸಂಪರ್ಕ-ವನ್ನಿರಿಸಿಕೊಳ್ಳಲು ಸಾಧ್ಯವಾಯಿತು.

ಅಂತರ್‌ಜಾತಿಯ ವಿವಾಹವಾದ್ದರಿಂದ ಅನುಪಮಾರವರು ಸಾಕಷ್ಟು ಸಮಸ್ಯೆ-ಗಳನ್ನು ಎದುರಿಸಬೇಕಾಯಿತು. ಆದರೂ ದಿಟ್ಟತನದಿಂದ ವೈದ್ಯವೃತ್ತಿಯನ್ನು ಬಿಡದೆ ಸಾಹಿತಿ ಬಳಗವನ್ನು ಬಿಡದೆ ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅಷ್ಟೇ ಅಲ್ಲದೆ ಗೃಹಕೃತ್ಯಗಳನ್ನು ನಿರ್ವಹಿಸುತ್ತಾ ಮಕ್ಕಳನ್ನು ಸುಸಂಸ್ಕೃತ ವ್ಯಕ್ತಿಗಳನ್ನಾಗಿ ರೂಪಿಸಿತು.

ಎಷ್ಟೋ ಮಹಿಳೆಯರಿಗೆ ಮದುವೆಯಾದ ನಂತರ ಅವರಿಗೆ ಯಾವುದೇ ರೀತಿಯ ಸ್ವಾತಂತ್ರ್ಯವಿರುವುದಿಲ್ಲ ಕೌಟುಂಬಿಕವಾಗಿ ಅವರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾರೆ. ಓದುವ ಬರೆಯುವ ಆಸಕ್ತಿ ಇದ್ದರು ಯಾವುದೇ ರೀತಿಯ ಪ್ರೋತ್ಸಾಹ ಸಿಗುವುದಿಲ್ಲ. ಆದರೆ ಅನುಪಮಾ ನಿರಂಜನರಿಗೆ ವಿವಾಹವಾದ ನಂತರ ಅವರ ಸಾಹಿತ್ಯಕ್ಕೆ ಪರಿಪೂರ್ಣವಾದ ಬೆಂಬಲ ಸಿಗುತ್ತದೆ ಎಂಬುದನ್ನು ಈ ರೀತಿ ಹೇಳಿದ್ದಾರೆ.

"ಕತೆಗಾರರಿಬ್ಬರ ಜೊತೆಗೂಡಿದ ಬದುಕು ಸಾಹಿತ್ಯಮಯವಾಗಿರುತ್ತದೆ ಎಂದು ಭಾವಿಸುವುದುಂಟು ಹಾಗೇನೂ ಆಗಲಿಲ್ಲ. ನಾವೂ ಕೂಡ ಇತರ ಗಂಡಹೆಂಡತಿ-ಯಂತೆಯೇ ಬಾಳಿದೆವು. ಮನೆಯಲ್ಲಿ ಸಾಹಿತ್ಯ ಪರಿಸರ ಇದ್ದುದರಿಂದ ವೈದ್ಯಕೀಯ ಒತ್ತಡಗಳು ಏನೇ ಇದ್ದರು ಬರವಣಿಗೆ ಮುಂದುವರೆಸಿಕೊಂಡು ಹೋಗುವುದು ಸಾಧ್ಯವಾಯಿತು. ಎಷ್ಟೋ ಜನ ಮಹಿಳೆಯರಿಗೆ ಮದುವೆಯಾದ ಮೇಲೆ ತಮ್ಮ ಕಲೆ ಅಥವಾ ಸಾಹಿತ್ಯಾಸಕ್ತಿಗಳನ್ನು ಮುಂದುವರಿಸಿಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ಸಂಸಾರ ಜವಾಬ್ದಾರಿ ಹಾಗೂ ಒತ್ತಡಗಳು ಗಂಡನ ಮನೆಯವರ ಉದಾಸೀನತೆ, ಪ್ರಕಾಶನ ಸಮಸ್ಯೆ, ಒಳಗೂ ಹೊರಗೂ ಪ್ರತಿಕೂಲ ವಾತಾವರಣ ಇವುಗಳಿಂದಾಗಿ ಅನೇಕ ಪ್ರತಿಭಾವಂತೆಯರ ಬರವಣಿಗೆ ವಿವಾಹವಾದ ನಂತರ ನಿಂತುಹೋಗುತ್ತದೆ. ಆದರೆ ನನ್ನ ಮಟ್ಟಿಗೆ ಬರಹಕ್ಕೆ ಕುಟುಂಬದ ನಿರಂತರ ಒತ್ತಾಸೆ ಸಿಕ್ಕಿದೆ ಎನ್ನಬೇಕು."[೧]

"ಸಾಮಾನ್ಯವಾಗಿ ಪುರುಷರಿಗೆ ಸಿಗುವ ಸೌಲಭ್ಯಗಳು ಮಹಿಳೆಗೆ ಸಿಗುವುದಿಲ್ಲ. ಪುರುಷರಿಗೆ ಮನೆಯ ಜವಾಬ್ದಾರಿ ಇರುವುದಿಲ್ಲ. ಮಕ್ಕಳನ್ನು ನೋಡಿಕೊಳ್ಳುವ, ಅತಿಥೇಯರನ್ನು ಸತ್ಕರಿಸುವ ಅಡುಗೆ ಕೆಲಸ ಮಾಡುವ ಯಾವ ಜವಾಬ್ದಾರಿಯು ಇರುವುದಿಲ್ಲ. ಅವರ ಮನೆಯಲ್ಲಿ ಬರೆಯಲು ಅನುಕೂಲವಾಗದಿದ್ದರೆ,

---

೧. ಬರಹಗಾರ್ತಿಯ ಬದುಕು-ಅನುಪಮಾ ನಿರಂಜನ, ಪು. ೨೪

ಹೋಟೆಲುಗಳಿಗೋ, ಗಿರಿಧಾಮಗಳಿಗೊ ಹೋಗಿ ಬರೆಯಬಹುದು. ಆದರೆ ಈ ರೀತಿಯ ಯಾವುದೇ ಅನುಕೂಲಗಳು ಅನುಪಮಾರಿಗೆ ಸಿಗುವುದಿಲ್ಲ. ಹೆಚ್ಚಿನ ಸಮಯವನ್ನು ವೈದ್ಯಕೀಯ ವೃತ್ತಿ ಕಸಿದುಕೊಳ್ಳುತ್ತಿದ್ದರಿಂದ ಬರಹವು ಗಂಭೀರವಾಗಲೂ ಸಾಧ್ಯವಾಗಲಿಲ್ಲ ಎನ್ನುತ್ತಾರೆ" ೧೯೭೫ರ ನಂತರ ಕ್ಲಿನಿಕ್ಕಿನ ಕೆಲಸವಿಲ್ಲದಾಗ ಮಕ್ಕಳ ಜವಾಬ್ದಾರಿಯು ಇನ್ನಿಲ್ಲದ್ದರಿಂದ ವ್ಯಾಪಕವಾಗಿ ಅಧ್ಯಯನ ಮಾಡಿದರು. ಇದರಿಂದ ಉತ್ತಮ ಸಾಹಿತ್ಯ ಸೃಷ್ಟಿ ಸಾಧ್ಯವಾಯಿತು.

ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯೊಬ್ಬಳು ಬರವಣಿಗೆಯಲ್ಲಿ ತೊಡಗಿದ್ದಾಗ ಸಾಮಾಜಿಕವಾಗಿ ಅವಳು ಹಲವಾರು ಭಿನ್ನಾಭಿಪ್ರಾಯಗಳಿಗೆ ಒಳಗಾಗಬೇಕಾಗುತ್ತದೆ. ಇದೇ ರೀತಿ ಅನುಪಮಾ ನಿರಂಜನರಿಗೆ ದೀಪಾವಳಿ ಸಂಚಿಕೆಗಳಲ್ಲಿ ಪ್ರತಿವರ್ಷ ಕತೆ ಬರೆಯಲು ಆಹ್ವಾನವಿರುತ್ತಿತ್ತು. ಆದರೆ ಎಷ್ಟೋ ಜನರು "ನಿರಂಜನರೇ ಕತೆ ಕಾದಂಬರಿ ಬರೆದು ಹೆಂಡತಿಯ ಹೆಸರು ಹಾಕುತ್ತಾರೆ"[೧] ಅನ್ನುತ್ತಿದ್ದರು. ಒಂದು ಹೆಣ್ಣು ಸ್ವತಂತ್ರವಾಗಿ ಆಲೋಚನೆ ಮಾಡಿ ಕೃತಿ ರಚನೆ ಮಾಡಬಹುದು ಎಂಬುದನ್ನು ನಂಬಲು ಸಮಾಜ ಸಿದ್ಧವಿರಲಿಲ್ಲ ಇಂತಹ ಸಂದರ್ಭದಲ್ಲಿ ಅನುಪಮಾ ನಿರಂಜನರು ಈ ರೀತಿಯ ಆಪಾದನೆಗೆ ಗುರಿಯಾಗುತ್ತಾರೆ.

ಲೇಖಕಿಯರು ಸಾಹಿತ್ಯದ ಎಲ್ಲಾ ಕ್ಷೇತ್ರಗಳನ್ನೂ ಪ್ರವೇಶಿಸಿದ್ದು ತಮ್ಮ ಇರುವನ್ನು ಪ್ರಭಾವಶಾಲಿಯಾಗಿ ಮೂಡಿಸುತ್ತಿದ್ದರೂ, ಹಲವು ಲೇಖಕರ ಮನಸ್ಸಿನಲ್ಲಿ ಅವರ ಬಗ್ಗೆ ತಿರಸ್ಕಾರವಿತ್ತು. ಸಾಹಿತಿಯಾದ ಶ್ರೀ ಕೃಷ್ಣ ಆಲನಹಳ್ಳಿ ಅವರು ಒಂದೆಡೆ ಹೇಳುತ್ತಾ "ಮಹಿಳಾ ಸಾಹಿತ್ಯ ಎಂದರೆ ಅಡುಗೆ ಮನೆ ಸಾಹಿತ್ಯ"[೨] ಎಂದು ಗೇಲಿಮಾಡಿದ್ದರು. ಆದರೆ ಅನುಪಮಾ ನಿರಂಜನರು ಅದನ್ನು ಒಪ್ಪದೆ ಪತ್ರಿಕೆಯೊಂದರ ವಾಚಕರ ವಾಣಿಯಲ್ಲಿ ಲೇಖನವನ್ನು ಬರೆಯುತ್ತಾ ಅವರ ಮಾತುಗಳಿಗೆ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾರೆ.

ಜೀವನದಲ್ಲಿ ಎಂದಿಗೂ ಸೋಲನ್ನೊಪ್ಪಿಕೊಳ್ಳಬಾರದು ಎಂಬ ನಿರಂಜನರ ಮಾತಿನಂತೆ ಅನುಪಮಾ ಜೀವನದುದ್ದಕ್ಕೂ ನಡೆದರು. ನಿರಂಜನರು ಪಾರ್ಶ್ವವಾಯು ಪೀಡಿತರಾದಾಗಲೂ ಮೂರು ಬಾರಿ ಮಾರಕವಾದ ಕ್ಯಾನ್ಸರ್‌ನ ಶಸ್ತ್ರಕ್ರಿಯೆಗೆ ಒಳಗಾದರೂ. ಧೃತಿಗೆಡದೆ, ತಮ್ಮ ನೋವನ್ನು ಇತರರಿಗೆ ಹೇಳಿ ಬೇಸರವನ್ನು ಮಾಡದೆ ಬಂದ ಸಂಕಷ್ಟಗಳನ್ನು ಎದುರಿಸಿದರು. ಯಾವುದೇ ಶಕ್ತ ಪ್ರಯತ್ನಕ್ಕೆ

---

೧. ಬರಹಗಾರ್ತಿಯ ಬದುಕು–ಅನುಪಮಾ ನಿರಂಜನ, ಪು. ೨೭

೨. ಅದೇ. ಪು. ೮೮

ಪ್ರೋಷಣೆಬೇಕು, ಅದರಂತೆ ನಿರಂಜನರು ಅನುಪಮಾರಿಗೆ ಎಲ್ಲಾ ರೀತಿಯಲ್ಲೂ ಉತ್ತೇಜನವನ್ನು ನೀಡಿದರು. ನಿರಂಜನರಂಥ ಸುಪ್ರಸಿದ್ಧ ಸಾಹಿತಿಯ ಪುತ್ರಿಯಾಗಿ ಪತಿಯ ಜನಪ್ರಿಯ ಒಡನಾಡಿಗಳಲ್ಲಿ ಪಾಲ್ಗೊಳ್ಳುತ್ತಾರೆ ತಾವೂ ಓರ್ವ ಸಾಹಿತಿಯಾಗಿ ತಮ್ಮದೇ ಆದ ಸ್ವತಂತ್ರ ಸ್ಥಾನವನ್ನು ಪಡೆದುಕೊಂಡರು ಕಷ್ಟದ ಬದುಕನ್ನು ಸುಖವಾಗಿರಿಸಿಕೊಂಡವರು ಅನುಪಮಾ. ಆದ್ದರಿಂದಲೇ ಸಾಹಿತಿಯಾಗಿ ವೈದ್ಯೆಯಾಗಿ ಗೃಹಿಣಿಯಾಗಿ ಮೂರು ದೋಣಿಗಳಲ್ಲಿ ಕಾಲಿಟ್ಟರು, ಯಶಸ್ವಿಯಾದರು.

ವ್ಯಕ್ತಿಯ ಜೀವನದಲ್ಲಿ ಕುಟುಂಬ ಬಹುಮುಖ್ಯ ಪಾತ್ರವಹಿಸುತ್ತದೆ. ಕೌಟುಂಬಿಕ ಸಂಬಂಧಗಳಲ್ಲಿ ಪರಸ್ಪರ ಪ್ರೀತಿ ಅನ್ಯೋನ್ಯತೆ, ಬಹಳ ಮುಖ್ಯ ಈ ಸಂಬಂಧಗಳು ಮಕ್ಕಳ ಮೇಲೆ ಬಹುಪರಿಣಾಮ ಬೀರುತ್ತದೆ. ಕೌಟುಂಬಿಕ ಸಂಬಂಧಗಳ ವಿಘಟನೆಯಿಂದ ವಾಸಂತಿಯವರು ಜೀವನದುದ್ದಕ್ಕೂ ಕಷ್ಟವನ್ನನುಭವಿಸುತ್ತಾರೆ. ಏಳು ಜನರೊಳಗೂಡಿ ತುಂಬಿದ ಸಂಸಾರದಲ್ಲಿ ಜನಿಸಿದ ವಾಸಂತಿ ಪಡುಕೋಣೆ, ದುರ್ಬರವಾದ ಕೌಟುಂಬಿಕ ಸಂಬಂಧದಿಂದ ನಿಲ್ಲಲು ನೆಲೆಯಿಲ್ಲದೆ ಅವರಿವರ ಮನೆಯಲ್ಲಿ ಇರಬೇಕಾದಂತಹ ಸಂದರ್ಭದಲ್ಲಿ ಅವರ ಚುಚ್ಚುಮಾತು ವ್ಯಂಗ್ಯ ಎಲ್ಲವನ್ನು ಸಹಿಸಿಕೊಳ್ಳಬೇಕಾಗುತ್ತದೆ. ಜೀವನದಲ್ಲಿ ತನ್ನದೇ ಆದ ಒಂದು ಸ್ವತಂತ್ರ ಅಸ್ತಿತ್ವ ಪಡೆಯುವವರೆಗೂ ಸಂಬಂಧಿಕರ ಮನೆಯಲ್ಲಿ ಉಳಿದು ಅಪಾರ ನೋವು ಅನುಭವಿಸಿದರು. ಇದು ವಾಸಂತಿಯವರ ನೋವಷ್ಟೇ ಅಲ್ಲದೇ ಅನೇಕ ಕುಟುಂಬ-ಗಳಲ್ಲಿನ ಹೆಣ್ಣುಮಕ್ಕಳು ಇಂತಹ ಪರಿಸ್ಥಿತಿಯನ್ನು ಅನುಭವಿಸುತ್ತಿರುವುದನ್ನು ನೋಡಬಹುದು.

ವಾಸಂತಿಯ ತಂದೆ-ತಾಯಿ ಸಂಬಂಧಂತೆ ವಾಸಂತಿ ಮತ್ತು ಅವರ ಪತಿಯ ಸಂಬಂಧವು ಅನ್ಯೋನ್ಯವಾಗಿರಲಿಲ್ಲ. ಮದುವೆಯೆಂದರೆ ಗೊಂಬೆಯಾಟವೆಂದು ತಿಳಿ ಮುಗ್ಧೆ ವಾಸಂತಿ ತಮ್ಮ ಸಂಬಂಧವನ್ನು ಅರ್ಥೈಸುವುದು ಹೀಗೆ.

"ನಮ್ಮವರಿಗೆ ನಾನು ಸದಾ ಸರಸಸಲ್ಲಾಪ ಮಾಡಬೇಕೆಂದು ಆಸೆ, ನನಗೆ ದಿಗಿಲು, ಸಂಕೋಚ ನನ್ನ ಬಾಯಿಯಿಂದ ಮಾತೆ ಹೊರಡದು, ಅವರು ಸಿಟ್ಟಾಗಿ ಬಾಯಿಗೆ ಬಂದಂತೆ ಬೈಯ್ಯುವರು.... ನನಗೇಕೋ ಏನೊಂದು ಆಕರ್ಷಣೆಯಾಗಲಿ, ಭಾವನೆಯಾಗಲೀ ಆಗ ಇರಲಿಲ್ಲ. ಮನಸ್ಸು ಹಾಗಿತ್ತು. ಅವರು ತಪ್ಪು ತಿಳಿದುಕೊಳ್ಳು-ತ್ತಿದ್ದರು. ಪ್ರೇಮ, ಪತಿ-ಪತ್ನಿಯರ ಸಂಬಂಧದ ಬಗ್ಗೆ ನನಗೆ ಗೊತ್ತಿರಲಿಲ್ಲ. ಇದು ನನ್ನ ತಪ್ಪೇ ಇರಬಹುದು. ಆದರೆ ಆ ತಪ್ಪಿಗೆ ವಾತಾವರಣವೇ ಕಾರಣವಾಗಿತ್ತು."[೧]

---

೧. ಜೀವನ ಹೋರಾಟ-ವಾಸಂತಿ ಪಡುಕೋಣೆ, ಪು. ३೭.

ಪತಿಯೇ ದೇವರು ಎಂಬ ಭಾವನೆಯುಳ್ಳ ಆ ಕಾಲಕ್ಕೆ ಹೆಚ್ಚಾಗಿ ವಿದ್ಯಾಭ್ಯಾಸ ಪಡೆಯದ ಹೊರಗಿನ ಜಗತ್ತನ್ನು ಅರಿಯದ ಅವರಿವರಲ್ಲಿ ಅಷ್ಟಷ್ಟುದಿನ ಎರಡು ತುತ್ತು ಅನ್ನಕ್ಕಾಗಿ ಇದ್ದುಕೊಂಡು ಬೆಳೆದ ವಾಸಂತಿ ಹೀಗೆ ಹೇಳುವುದರಲ್ಲಿ ಆಶ್ಚರ್ಯವೇನಿಲ್ಲ. ವಾಸಂತಿಯವರ ಪತಿ ಯಾವ ಕೆಲಸಕ್ಕೆ ಸೇರಿದರೂ ದೀರ್ಘಕಾಲ ಉಳಿಯುತ್ತಿರಲಿಲ್ಲ. ಕುಟುಂಬದಲ್ಲಿ ಆರ್ಥಿಕತೆಯ ಅನಾನುಕೂಲತೆಯಿಂದಾಗಿ ಸ್ವಂತದ ಮನೆ ಮಾಡಿದಾಗ ಜೀವನ ಒಂದು ಹಂತ ತಲುಪಿತು ಎನ್ನುವಷ್ಟರೊಳಗೆ ಮತ್ತೆ ಸಂಬಂಧಿಕರ ಮನೆಯಲ್ಲಿ ಉಳಿಯಬೇಕಾಯಿತು.

ಅನ್ಯೋನ್ಯತೆಯಿಲ್ಲದ ವಾಸಂತಿಯವರ ದಾಂಪತ್ಯದಲ್ಲಿ ಸಂಶಯವು ಸುಳಿದಾಡುತ್ತಿರುತ್ತದೆ. ವಾಸಂತಿ ತನ್ನ ಅಣ್ಣನೊಡನೆ, ಅಪ್ಪನೊಡನೆ ಸಲಿಗೆಯಿಂದ ಇದ್ದಾಗ ಅದನ್ನು ಪತಿ ಸಹಿಸುತ್ತಿರಲಿಲ್ಲ. ಇದರಿಂದ ಕುಟುಂಬದ ಸಂಬಂಧ ಮತ್ತಷ್ಟು ಹದಗೆಟ್ಟು, ಒಮ್ಮೆ ವಾಸಂತಿಯನ್ನು ಪತಿ ಮನೆಯಿಂದ ಹೊರಹಾಕಿದಾಗ ಆತ್ಮಹತ್ಯೆಗೆ ಪ್ರಯತ್ನಿಸುತ್ತಾರೆ. ಆದರೆ ಮುಂದ ಪತಿ ಸಂಸಾರದ ಜವಾಬ್ದಾರಿ ಹೊಂದದಿದ್ದಾಗ ಸಾಕಷ್ಟು ಶ್ರಮವಹಿಸಿ ಅನೇಕ ಪರೀಕ್ಷೆಗಳನ್ನು ಪಾಸು ಮಾಡಿ ಬದುಕನ್ನು ಸಾಗುತ್ತಾರೆ.

ವಾಸಂತಿ ಮತ್ತು ಅವರ ಪತಿಯಲ್ಲಿ ಅಜಗಜಾಂತರ ವ್ಯತ್ಯಾಸವಿತ್ತು. ಹಾಗೂ ದಾಂಪತ್ಯ ಜೀವನದಲ್ಲಿ ಒಗ್ಗಟ್ಟಿರಲಿಲ್ಲ. ಕೌಟುಂಬಿಕ ಸಂಬಂಧವು ಹದಗೆಟ್ಟಿದ್ದರಿಂದ, ಅವರ ಪರಿಣಾಮವನ್ನು ಅನುಭವಿಸಬೇಕಾಯಿತು. ಸಂಬಂಧಿಕರ ಮನೆಯಲ್ಲಿ ಇರಬೇಕಾದಂತಹ ಪರಿಸ್ಥಿತಿ ಬಂದಾಗ ಅವರ ಹೀಯಾಳಿಕೆಯು ಪ್ರಾಪ್ತವಾಯಿತು. ಒಮ್ಮೆ ಮಗ ಶಶಿಧರನು ತೊಟ್ಟಿಲಿನಲ್ಲಿ ಸದ್ದಿಲ್ಲದೆ ಮಲಗಿದ್ದನ್ನು ಕಂಡು ಆತಂಕಗೊಳ್ಳುತ್ತಾರೆ. ಆದರೆ ಬೇರೆಯವರ ಆಶ್ರಯದಲ್ಲಿ ಗಂಡನ ಅನಾದರಣೆಯಲ್ಲಿ ಇರಬೇಕಾದಂತಹ ಸಂದರ್ಭದಲ್ಲಿ ಡಾಕ್ಟರರನ್ನು ಕರೆಯಲು ಆಕ್ಷೇಪಣೆ ಇರುತ್ತದೆ. ಇದರಿಂದ ತಮ್ಮ ಮಗುವನ್ನು ಕಳೆದುಕೊಳ್ಳುತ್ತಾರೆ. ವಾಸಂತಿಗೆ ಯಾವ ರೀತಿಯ ಸ್ವಯಂ ಹಕ್ಕಾಗಲೀ, ಪತಿಗೆ ಬುದ್ಧಿ ಹೇಳುವ ಅಧಿಕಾರವಾಗಲಿ ವಿರೋಧಿಸುವುದಾಗಲಿ ಸಾಧ್ಯವಾಗಲಿಲ್ಲ.

ವಾಸಂತಿಯ ತಂದೆ-ತಾಯಿ ಅವರ ಪತಿ, ಮಕ್ಕಳು ಮತ್ತು ಸೊಸೆಯರು ಎಲ್ಲರ ಸಂಬಂಧವೂ ಅನ್ಯೋನ್ಯವಾಗಿರಲಿಲ್ಲ. ಕೌಟುಂಬಿಕ ಸಂಬಂಧಗಳ ವಿಘಟನೆಯು ವಾಸಂತಿ ಅವರನ್ನು ತತ್ತರಿಸುವಂತೆ ಮಾಡಿತು.

ಚಿತ್ರಪಟಸೃಷ್ಟಿ ಎಂದರೆ ಮಧ್ಯಮ ವರ್ಗ ಇಂದಿಗೂ ಮೂಗು ಮುರಿಯುತ್ತದೆ. ಭಯಭೀತವಾಗುತ್ತದೆ. ಆದರೆ ೬೦-೭೦ ವರ್ಷಗಳ ಹಿಂದೆ ವಾಸಂತಿ ಅವರ ಅಣ್ಣ

"ನೀನ್ಯಾಕೆ ಏನಾದರೂ ಕೆಲಸ ಮಾಡುವುದಿಲ್ಲ? ಅದಲ್ಲದೇ ನೀ ಬರೆಯುವುದೆಲ್ಲಾ ನಿನ್ನ ಪತಿಯ ಬರವಣಿಗೆ"[೧] ಎಂದು ಹೀಯಾಳಿಸಿದ್ದನ್ನು ಕೇಳಿ ನೊಂದು, ಅದನ್ನೇ ಛಲವಾಗಿಸಿಕೊಂಡು ಅದನ್ನು ವರವೆಂದು ಭಾವಿಸಿ ೧೫ ದಿನಗಳಲ್ಲಿ ಹಿಂದಿಯಲ್ಲಿ 'ಜವಾನಿಕೀ ಹವಾ" ಎಂಬ ಕಥೆಯನ್ನು ಚಿತ್ರಪಟಕ್ಕಾಗಿ ರಚಿಸಿದರು. ಕೆಲ ದಿನಗಳ ನಂತರ ಮುಂಬೈಗೆ ಬಂದಾಗ ರಣಜಿತ್ ಮೂವ್ಹಿಟೋನಿಗೆ ಹೋಗಿ, ಚಂದಲಾ ಶಹ, ಚತುರ್ಭುಜ ದೋಣಿಯವರಿಗೆ ತೋರಿಸಿದಾಗ ಅವರು ಒಪ್ಪಿ ಗೋಹರರನ್ನು ನಾಯಕಿ ಪಾತ್ರಕ್ಕೆ ಆಯ್ಕೆ ಮಾಡಿ ಚಲನಚಿತ್ರವನ್ನು ತೆಗೆದರು" ಎನ್ನುವ ಮೂಲಕ ಲೇಖಕಿ ತಮ್ಮ ಮನೆತನದಲ್ಲಿ ಸಿನಿಮಾರಂಗಕ್ಕೆ ಪ್ರವೇಶಿಸಿದ ಪ್ರಥಮ ವ್ಯಕ್ತಿಯಾಗಿದ್ದಾಗ, ಇದು ಮಗ ಗುರುದತ್ತನ ಜೀವನಕ್ಕೆ ಪರೋಕ್ಷವಾಗಿ ನಾಂದಿ ಹಾಕಿದಂತಾಗಿದೆ. ಇಲ್ಲಿಂದ ಲೇಖಕಿಯ ಜೀವನ ತಿರುವು ಪಡೆದುಕೊಂಡು ಸಾರ್ವಜನಿಕವಾಗಿ ಕಾಣಿಸಿಕೊಂಡಿತು.

"ವಾಸಂತಿಯವರು ಸಮಯ ಸಿಕ್ಕಾಗ ಅಲ್ಪಸ್ವಲ್ಪ ಸಮಾಜ ಕಾರ್ಯವನ್ನು ಮಾಡಿದರು. ಮರಾಠಿ, ಬಂಗಾಲಿ, ಹಿಂದಿ, ತೆಲುಗು, ತಮಿಳು, ಇಂಗ್ಲಿಷ್, ಕನ್ನಡ ಹೀಗೆ ಏಳು ಭಾಷೆಗಳನ್ನು ನಿರಾಯಾಸದಿಂದ ಸಲೀಸಾಗಿ ಮಾತನಾಡುವ ವಾಸಂತಿ ಅವರ ಪ್ರಯತ್ನಕ್ಕೆ ಹಿಂದೆ ಸಾಕಷ್ಟು ಶ್ರಮವಿರುವುದನ್ನು ನೋಡಬಹುದು. ಸ್ವತಂತ್ರವಾಗಿ ಬರೆಯುವ ಸುಪ್ರಸಿದ್ಧ ಕಾದಂಬರಿಕಾರರಾದ ವಿಮಲಮಿತ್ರ, ಜರಾಸಂದ ಮತ್ತು ಬನಿರೇ ಇವರ ಪುಸ್ತಕಗಳನ್ನು ಕನ್ನಡಕ್ಕೆ ಭಾಷಾಂತರಿಸಿರುವುದನ್ನು ನೋಡಬಹುದು. ಗರ್ಭಿಣಿಯಾದ ಸಂದರ್ಭದಲ್ಲೂ ವಾಸಂತಿಯವರು ತಮ್ಮ ಕೆಲಸ ಕಾರ್ಯಗಳನ್ನು ನಿಲ್ಲಿಸಲಿಲ್ಲ. "ಮನೆಯಲ್ಲಿದ್ದಾಗಲೂ ನಾನು ಟ್ಯೂಷನ್ ಕೊಡುತ್ತಿದ್ದವರನ್ನು ಮನೆಗೆ ಕರಿಸಿ ಹೇಳಿಕೊಡುತ್ತಿದ್ದೆನು. ಯುದ್ಧದ ವಾರ್ತೆಗಳು ಮನಸ್ಸಿಗೆ ಕಳವಳತರುತ್ತಿದ್ದವು.

ಆದರೂ ನಾನು ನನ್ನ 'ಭಾಷಾರತ್ನ' ಪರೀಕ್ಷೆಯ ಸಿದ್ಧತೆಯನ್ನು ಹಲವರಿಗೆ ಮುಂಬೈ ಹಿಂದಿ ವಿದ್ಯಾಪೀಠದ ಪರೀಕ್ಷೆಗಳಿಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳಿಗೆ ಧರ್ಮಾರ್ಥ ಪಾಠ ಹೇಳಿಕೊಡುವುದನ್ನು ಬಿಟ್ಟಿರಲಿಲ್ಲ"[೨] ಈ ಮಾತುಗಳು ವಾಸಂತಿಯವರು ಸತತ ಶ್ರಮಜೀವಿ ಹಿಡಿದ ಕೆಲಸವನ್ನು ಬಿಡಲೊಲ್ಲರು ಎಂಬುದನ್ನು ತಿಳಿಸುತ್ತದೆ.

ವಾಸಂತಿಯವರ ಜೀವನ ಗಾಥೆಯನ್ನು ಓದುವಾಗ ನಮ್ಮ ಅರಿವಿಗೆ ಬಂದ ಸಂಗತಿಗಳು ಹಲವಾರು ಸಿಡುಬು, ಟೈಫಾಯ್ಡ್ ಮತ್ತು ಟಿ.ಬಿಗಳಂತಹ ಮಾರಕ

---

೧. ಜೀವನ ಹೋರಾಟ– ವಾಸಂತಿ ಪಡುಕೋಣೆ, ಪು. ೧೦೧.

೨. ಅದೇ.

ರೋಗಗಳು, ಅದಕ್ಕೆ ಆಗಿನ್ನೂ ಔಷಧಿಗಳನ್ನು ಕಂಡು ಹಿಡಿದಿರದ ಕಾರಣ, ಘಟನೆ ಘಟ್ಟನೆ ಮರಣಕ್ಕೆ ಎರವಾಗುತ್ತಿದ್ದು ಈ ಕಾಯಿಲೆಗಳಿಂದಲೇ ವಾಸಂತಿಯವರ ಸಮೀಪ ಬಂಧುಗಳು ಅಸುನೀಗಿದ್ದರು.

ಹಿಂದಿನ ದಿನಗಳಲ್ಲಿ ಕುಟುಂಬ ಯೋಜನೆಯ ಸೌಲಭ್ಯಗಳಿಲ್ಲದೆ ಕಾರಣ ಸ್ತ್ರೀಯರು ಮಕ್ಕಳನ್ನು ಹಡೆಯುತ್ತಾ ಹೋಗುವುದು ಅನಿವಾರ್ಯವಾಗಿತ್ತು. ಸ್ವತಃ ವಾಸಂತಿಯವರು ಪ್ರತಿಸಲವೂ ಗರ್ಭಿಣಿಯಾದಾಗ ಗರ್ಭವಿಳಿಸಿಕೊಳ್ಳುವುದಕ್ಕೆ ಪೇಚಾಡುತ್ತಿದ್ದರು. ಆದರೆ ಪ್ರತಿಬಂಧಕ ವಿಧಾನಗಳೂ, ಮದ್ದುಗಳೂ ಅಂದಿನ ಕಾಲಕ್ಕೆ ಇರಲಿಲ್ಲವಾಗಿ ವಾಸಂತಿಗೆ ಇಷ್ಟವಿಲ್ಲದಿದ್ದರೂ ಆರು ಮಕ್ಕಳನ್ನು ಹಡೆಯಬೇಕಾಯಿತು. ದೊಡ್ಡದಾದ ಸಂಸಾರದ ನಿರ್ವಹಣೆಗೆ ಕೇವಲ ಪತಿಯ ಸಣ್ಣ ಸಂಬಳ ಸಾಲದಾದಾಗ ವಾಸಂತಿ ದುಡಿಮೆಮಾಡುವುದು ಅನಿವಾರ್ಯವಾಯಿತು.

ಬಾಲ್ಯದಲ್ಲಿದ್ದ ಅನಿಶ್ಚಿತತೆ ಮುಂದುವರಿದು ಮದುವೆಯಾದರೂ ಬದುಕಿನಲ್ಲಿ ಭದ್ರತೆ ಕಾಣದೆ, ಹಣಕ್ಕಾಗಿ, ಸೂರಿಗಾಗಿ ಅಣ್ಣತಮ್ಮಂದಿರಲ್ಲಿ ಯಾಚಿಸಿದ ಸ್ಥಿತಿ ಮನಕರಗಿಸುವಂಥದ್ದು. ಪದವಿ ಗಳಿಸಿದ ಪ್ರತಿಭಾವಂತ ಗಂಡನಿದ್ದು ಅವನಿಗೊಂದು ಒಳ್ಳೆಯ ಕೆಲಸ ಸಿಗದಿದ್ದುದು, ಸಿಕ್ಕಿದ ಕೆಲಸಗಳನ್ನು ಆತ ಏನೇನೋ ನೆಪಗಳಿಗೆ ತೊರೆದು ಬಿಡುತ್ತಿದ್ದುದರಿಂದ ಜೀವನದ ಬಹುಪಾಲು ಸಮಯ ಬಂಧುಗಳಲ್ಲಿ ಯಾಚಿಸುವುದೇ ಆಯಿತೆಂದು ವಾಸಂತಿಯವರ ಕೊರಗು ಇದು ಕೃತಿಯುದ್ದಕ್ಕೂ ಕಂಡುಬರುತ್ತದೆ.

ಪ್ರತಿಯೊಬ್ಬರ ಜೀವನದಲ್ಲಿ ಕಷ್ಟಸುಖ ಎರಡೂ ಇರುತ್ತವೆ. ಆದರೆ ಕಷ್ಟವೇ ಜೀವನವಾದಾಗ ಆ ನೋವನ್ನು ಅನುಭವಿಸಿ ಜೀವನ ಸಾಗಿಸುವವರು ವಿರಳ. ಈ ಸಾಲಿಗೆ ಸೇರಿದವರು ವಾಸಂತಿ ತಮ್ಮ ಬಾಲ್ಯದಿಂದ ಹಿಡಿದು ವಿವಾಹದ ನಂತರವೂ ಹಲವಾರು ಕಷ್ಟಗಳನ್ನು ಅನುಭವಿಸುತ್ತಾರೆ. ಆದರೂ ತಮ್ಮ ಆತ್ಮವಿಶ್ವಾಸ ಕಳೆದುಕೊಳ್ಳದೆ ತಮ್ಮ ಬದುಕಿನ ಬಂಡೆಯನ್ನು ನಡೆಸುತ್ತಾರೆ.

ಗಂಡನ ಅನಾದರಕ್ಕೊಳಗಾದರೂ ತಮ್ಮ ಜೀವನಾಸಕ್ತಿಯನ್ನು ಕಳೆದುಕೊಳ್ಳದೆ ಬದುಕನ್ನು ಸಹ್ಯವಾಗಿರಿಸಿಕೊಂಡಿರುವುದು ಕುತೂಹಲಕರ ಸಂಗತಿ. ಸಂಸಾರದ ಹೊಣೆ ಹೆಗಲೇರಿದಾಗ ಅದರಿಂದ ವಿಚಲಿತರಾಗದೆ ಅವನ್ನು ನಿಭಾಯಿಸಿದ್ದು ವಾಸಂತಿಯವರ ಜೀವನದಲ್ಲಿ ಹೋರಾಟವೇ ಆಗಿದೆ.

ಶಾರದಾ ಹೆಮ್ಮಿಗೆ ಮಧ್ಯಮವರ್ಗದ ಒಬ್ಬ ಸಾಮಾನ್ಯ ಗೃಹಿಣಿ ಲೇಖಕಿ ಡಾ. ಕಮಲಾ ಹೆಮ್ಮಿಗೆಯವರ ತಾಯಿ, ಸೂಕ್ಷ್ಮ ಬುದ್ಧಿಯ, ವಿಶಾಲ ಮನಸ್ಸಿನ

ಹೃದಯವಂತಿಕೆಯ ಮಾತೆ ಸಾಮಾನ್ಯ ಗೃಹಿಣಿಯೊಬ್ಬರು ಈ ಶತಮಾನದ ಬದುಕನ್ನು ನೋಡುವ ದೃಷ್ಟಿಕೋನ ಇಲ್ಲಿ ಮುಖ್ಯವಾಗುತ್ತದೆ. ಇಲ್ಲಿಯ ನೋವು ನಿರಾಸೆ, ಸಂತೋಷ–ಸಂಭ್ರಮ, ಕೇವಲ ಒಬ್ಬ ಗೃಹಿಣಿಗೆ ಹಾಗೂ ಆಕೆಯ ಕುಟುಂಬಕ್ಕೆ ಮಾತ್ರ ಸೀಮಿತವಾಗದೆ ಇಡೀ ಒಂದು ತಲೆಮಾರಿನ ತಳಮಳವಾಗಿ ಮಧ್ಯಮವರ್ಗದ ಬದುಕಿನ ಸಹಜ ದಾಖಲೆಯಾಗಿ ರೂಪಗೊಂಡಿದೆ.

ಶಾರದಾ ಹೆಮ್ಮಿಗೆಯವರ ಆತ್ಮಕಥನದಲ್ಲಿ ಅವರ ಕುಟುಂಬವೊಂದನ್ನೇ ತೆಗೆದುಕೊಂಡಾಗ ಇರುವ ನಾಲ್ಕು ಜನ ಹೆಣ್ಣುಮಕ್ಕಳೇ. ತಂದೆ ತೀರಿಹೋಗಿದ್ದಾರೆ. ಹಳ್ಳಿಯಲ್ಲಿ ಜಮೀನಿಲ್ಲ, ಕೂಲಿಕೆಲಸದ ರೂಢಿಯಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಲೇಖಕಿಯ ತಾಯಿಯೊಬ್ಬಳೇ ಏನು ಮಾಡಲು ಸಾಧ್ಯ? ನೆಂಟರಿಷ್ಟರು ಎಷ್ಟು ದಿನ ಸಹಾಯಮಾಡಲು ಸಾಧ್ಯ? ಬಡತನದ ಬೇಗೆಯಲ್ಲಿ ಬೆಂದ ಇಂತಹ ಅನೇಕ ಕುಟುಂಬಗಳು ಅನೇಕ ಸವಾಲುಗಳನ್ನೆದುರಿಸಬೇಕಾಗುತ್ತದೆ. ಆಗ ಮನಸ್ಸಿಲ್ಲದಿದ್ದರೂ ಕೆಲವು ನಿರ್ಣಯಗಳಿಗೆ ಬದ್ಧವಾಗಿರಬೇಕಾಗುತ್ತದೆ. ಲೇಖಕಿಯ ಕುಟುಂಬದಲ್ಲಿ ನಡೆದದ್ದು ಕೂಡಾ ಇದೇ ಆಗಿದೆ. ಲೇಖಕಿಯ ಅಕ್ಕನಾದ ಗೀತಾರ ಮದುವೆಯನ್ನು ಎರಡನೇ ಸಂಬಂಧದಲ್ಲಿ ಪರಿವರ್ತಿಸಲಾಗುತ್ತದೆ. ಮೈಸೂರಿನಲ್ಲಿದ್ದ ಇವರ ಚಂದೋಭಾವನಿಗೆ ಎರಡನೇ ಸಂಬಂಧದಲ್ಲಿ ಪರಿವರ್ತಿಸಲಾಗುತ್ತದೆ. ಮೈಸೂರಿನಲ್ಲಿದ್ದ ಇವರ ಚಂದೂಭಾವನಿಗೆ ಈಗಾಗಲೇ ಮೂರು ಮಕ್ಕಳಿವೆ. ಹೆಂಡತಿ ಸತ್ತು–ಹೋಗಿದ್ದಾಳೆ. ಚಂದೋಭಾವನ ತಂಗಿ ಜಯತ್ತೆ ಹತ್ತುವರ್ಷದ ಬಾಲವಿಧವೆ–ಯಾಗಿದ್ದಾಳೆ. ಬಡತನದ ಕಾರಣಕ್ಕಾಗಿ ವರದಕ್ಷಿಣೆ ಕೊಡಲಾಗದ ಅಸಹಾಯಕ ಸ್ಥಿತಿಗಾಗಿ ಗೀತಾನಂತಹ ಸುಂದರಿ ಸದ್ಗುಣಿ ಹೆಣ್ಣುಮಕ್ಕಳು ಅನಿವಾರ್ಯವಾಗಿ ಚಂದೂರವರಂತಹವರನ್ನು ಮದುವೆಯಾಗಬೇಕಾಗುತ್ತದೆ. ಗೀತ ಈ ಮೂಕ ವೇದನೆಯನ್ನು ಯಾರಿಗೆ ಹೇಳಬೇಕು? ಇದೇ ಯಾತನೆ ಲೇಖಕಿಯ ಬದುಕನ್ನು ಪ್ರವೇಶಿಸುತ್ತದೆ. ಚಿಕ್ಕಳ್ಳಿಯ ಭಾಗೀರಥಿಯ ಕಾಮತೃಷೆಗೆ ಬಲಿಯದ ಆದರೆ ಮೂಲತಃ ಸಾಧುವಾದ, ಧರ್ಮಬೀರುವಾದ ಅಮಾಯಕವಾದ, ವ್ಯಕ್ತಿಯೊಂದಿಗೆ ಶಾರದಾರ ಮದುವೆಯನ್ನು ತಾಯಿ ನಿಶ್ಚಯಿಸಿಕೊಂಡು ಬಂದಾಗ ಲೇಖಕಿ ಪಡುವ ತಳಮಳ ತೀವ್ರತರವಾಗಿದೆ.

'ಬಡವನ ಸಿಟ್ಟು ದವಡೆಗೆ ಮೂಲ' ಎನ್ನುವಂತೆ ಲೇಖಕಿ ಇಲ್ಲಿ ಯಾರ ಮೇಲೆ ಸಿಟ್ಟು ಮಾಡಿಕೊಂಡರೂ ಏನೂ ಪ್ರಯೋಜನವಾಗುವುದಿಲ್ಲ. ಅನಿವಾರ್ಯವಾಗಿ ಈ ಮದುವೆಗೆ ಲೇಖಕಿ ಒಲ್ಲದ ಮನಸ್ಸಿನಿಂದ ಒಪ್ಪಲೇಬೇಕಾಗುತ್ತದೆ. ಬಂದ ಸವಾಲುಗಳನ್ನು ಧೈರ್ಯದಿಂದ ಎದುರಿಸಬೇಕಾಗುತ್ತದೆ. ಇಂತಹ ಪ್ರಸಂಗಗಳ ಮೂಲಕ

ಈ ಕಥಾನಕ, ಬ್ರಾಹ್ಮಣರ ಬಡ ಹೆಣ್ಣುಮಕ್ಕಳಿಗಾಗುವ ಯಾತನೆಯ ಮುಖಗಳನ್ನು ತೆರೆದು ತೋರಿಸುತ್ತದೆ. ಇಲ್ಲಿಯ ಹೆಣ್ಣುಮಕ್ಕಳು ಸ್ಫುರದ್ರೂಪಿಗಳಾಗಿ, ಸದ್ಗುಣಿಗಳಾಗಿ, ಒಳ್ಳೆಯ ನಡತೆಯುಳ್ಳವರಾಗಿದ್ದರೂ ಇಂತಹ ಒಳ್ಳೆಯ ವರಗಳು ದೊರೆಯದೆ, ಎರಡನೆ ಮದುವೆಯಾಗುವ, ಮಧ್ಯವಯಸ್ಸಿನ ಗಂಡಸ್ಸಿನೊಂದಿಗೆ ಸಂಸಾರ ನಡೆಸಬೇಕಾದ ಒಲ್ಲದ ಮದುವೆಗೆ ಒಪ್ಪಿಗೆ ಸೂಚಿಸಬೇಕಾದ ಪ್ರಸಂಗಗಳು ಬರುತ್ತವೆ.

ರಂಗಣ್ಣನೊಂದಿಗೆ ಮದುವೆಯನ್ನು ತಾಯಿ ನಿಶ್ಚಯಿಸಿದ್ದಾಳೆಂಬ ಸುದ್ದಿಯನ್ನು ಗೀತಕ್ಕನಿಂದ ತಿಳಿದ ಲೇಖಕಿ ತಾಯಿಯ ಮೇಲೆ ಕ್ರೋಧಗೊಳ್ಳುತ್ತಾಳೆ. ನೇರವಾಗಿ ತಾಯಿಯನ್ನು ಎದುರಿಸುತ್ತಾಳೆ. "ರಂಗಣ್ಣನೇ ನಿನ್ನ ಅಳಿಯನಾಗಬೇಕೆಂಬ ಹಠವೇಕೆ? ಬೇರೆ ವರಗಳೇ ಇಲ್ಲವೆ?" ಎಂದು ಲೇಖಕಿ ಪ್ರಶ್ನಿಸಿದಾಗ ಕಾಳಿಯಂತೆ ಎದ್ದು ಕುಳಿತ ಅವರ ಅಮ್ಮ ಹೀಗೆ ಹೇಳುತ್ತಾರೆ.

"ಹೌದೇ..... ವರಗಳಿಗೇನೂ ಬೇಕಾದಂತಿದ್ದಾರೆ. ಆದರೆ ಅವರಿಗೆ ಕೈತುಂಬಾ ವರದಕ್ಷಿಣೆ ಕೊಟ್ಟು ಮಾಡಲು ಇಲ್ಲ. ಆ ನಿನ್ನ ಸತ್ತ ಅಪ್ಪ ಗಂಟು ಇರಿಸಿ ಹೋಗಿಲ್ಲ...... ನೀನೊಬ್ಬಳಿಲ್ಲವೆ, ನಾನೂ ಮತ್ತೂ ಒಬ್ಬಳನ್ನು ಸಾಗಹಾಕಬೇಕಾಗಿದೆ. ತಿಳಿಯಿತಾ?"[೧] ಅವಳ ಒಂದೊಂದು ಮಾತು ಸಿಡಿದುಬಂದ ಗುಂಡಿನಂತೆ ಎದೆತಾಕಿದವು.

ಇಲ್ಲಿ ಲೇಖಕಿ ಎದುರಿಸುವ ಸವಾಲುಗಳು ಒಂದು ರೀತಿಯಾದರೆ, ಲೇಖಕಿಯ ತಾಯಿಗಿರುವ ಸಮಸ್ಯೆ ಮತ್ತೊಂದು ರೀತಿಯದು. ಹೀಗೆ ಇಲ್ಲಿಯ ಹೆಣ್ಣುಗಳೆಲ್ಲಾ ಬಡತನದಿಂದ, ಮಡಿವಂತಿಕೆಯಿಂದ ಅನಿವಾರ್ಯವಾಗಿ ನರಳಿ ನಲುಗುವ ಚಿತ್ರ ಮನಮಿಡಿಯುವಂತಿದೆ.

ಲೇಖಕಿಗೆ ಸಮಸ್ಯೆಗೆ ಪರಿಹಾರ ಕಾಣದೆ ತಳಮಳಗೊಳ್ಳುತ್ತಾಳೆ. ಆ ಚಿಕ್ಕ ವಯಸ್ಸಿನಲ್ಲೇ ಆತ್ಮಹತ್ಯೆಯ ವಿಚಾರಮಾಡುತ್ತಾಳೆ. ಹಿತ್ತಲಲ್ಲಿದ್ದ ಬಾವಿಗೆ ಬಿದ್ದು ಪ್ರಾಣಬಿಡುವ ಮನಸ್ಸು ಮಾಡುತ್ತಾಳೆ. ಇದೆಲ್ಲಾ ಸಾಧ್ಯವಾಗದೇ ಹೋದಾಗ ಅಂಥ ನಿರ್ಭೀತಿಯ ಹಾದಿ ತೋರುವವರಾರು? ಎಷ್ಟೆಂದರೂ ಹೆಂಗಸು, ಹೆಂಗಸೇ...... ಆಕೇ ಮೊದಲು ತನ್ನ ರಕ್ಷಣೆಯ ಕಡೆ ಗಮನ ನೀಡಬೇಕು. ಅನಾಥರ ಪಾಡಂತೂ ಇದಕ್ಕಿಂತಲೂ ಕಠಿಣ. ಹೆಂಗಸರನ್ನೂ ಬದುಕಲು ಬಿಡದ, ಸಾಯಲೂ ಬಿಡದ, ಈ ಸಮಾಜ ವ್ಯವಸ್ಥೆಯ ಬಗೆಗೆ ಲೇಖಕಿ ತೋರುವ ಪ್ರತಿಕ್ರಿಯೆ ಪ್ರತಿಭಟನೆಯ ಹಾದಿಯನ್ನು ಹಿಡಿಯದಿದ್ದರೂ ಪ್ರಾಮಾಣಿಕ ಬದುಕಿನ ಒಳನೋಟಗಳನ್ನು ಬಿಚ್ಚಿಡುತ್ತದೆ.

---

೧. ಬದುಕು ಕೊಟ್ಟಿದ್ದು ಕಲಿಸಿದ್ದು, ಶಾರದಾ ಹೆಮ್ಮಿಗೆ, ಪು. ೯೭.

ಮಹಿಳೆ ತನ್ನ ಕಾಲಮೇಲೆ ತಾನು ನಿಲ್ಲದ ಹೊರತು ಯಾವ ಸ್ವಾತಂತ್ರ್ಯವನ್ನು ಪಡೆಯಲು ಸಾಧ್ಯವಿಲ್ಲ. ಪರಾಧೀನತೆ ಅವಳನ್ನು ಬಂಧಿಸಿ ಬಿಟ್ಟಿರುತ್ತದೆ. ಹಿಂದೆ .... ಈಗ........ ಬಹುಶಃ ಮುಂದೆಯೂ ಈ ನೀತಿ ಬದಲಾಗದ ಲೇಖಕಿಯ ಈ ನುಡಿಗಳು ನೈಜ ಅನುಭವದ ತುಡಿತಗಳಾಗಿ ಹೊರ ಹೊಮ್ಮಿರುವುದರಿಂದ ಇಂದಿನ ಸ್ತ್ರೀವಾದಿ ಭಾಷಣಗಳಿಗಿಂತ ಭಿನ್ನವಾದ ನೆಲೆಗಳನ್ನು ಕಂಡುಕೊಳ್ಳಲು ಸಹಾಯಕವಾಗುತ್ತದೆ.

ಸಾಮಾನ್ಯ ಗೃಹಿಣಿಯಾದರೂ ಶಾರದಾ ಹೆಮ್ಮಿಗೆಯವರಿಗೆ ಅಂದಿನ ರಾಜಕೀಯ ಆಗುಹೋಗುಗಳ ಬಗೆಗೆ ಸ್ಪಷ್ಟವಾದ ತಿಳುವಳಿಕೆ ಇದ್ದು ಈ ಆತ್ಮಕಥನದಿಂದ ತಿಳಿದುಬರುತ್ತದೆ. ಲೇಖಕಿಯ ಸೋದರಮಾವ ರಂಗನಾಥ ಸ್ವಾತಂತ್ರ್ಯ ಚಳುವಳಿಯಲ್ಲಿ ಸ್ವತಃ ಭಾಗವಹಿಸಿದವರು. ಹೀಗಾಗಿ ಅವರಿಂದ ಲೇಖಕಿ ಅನೇಕ ವಿಷಯಗಳನ್ನು ತಿಳಿದುಕೊಂಡಿದ್ದರು. ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹ ಜಲಯನ್ ವಾಲ್‌ಬಾಗಿನಲ್ಲಿ ನಡೆದ ಭೀಕರ ಹತ್ಯಾಕಾಂಡ, ಚಲೇ ಜಾವ್ ಚಳುವಳಿಯ ವ್ಯಾಪಕತೆ ಹೀಗೆ ಅಂದಿನ ಸಂದರ್ಭದ ರಾಜಕೀಯ ಬೆಳವಣಿಗೆಗಳನ್ನು ಲೇಖಕಿ ಗಮನಿಸುತ್ತಿದ್ದು ಅವುಗಳನ್ನು ತಮ್ಮ ಆತ್ಮಕಥನದಲ್ಲಿ ಅಲ್ಲಲ್ಲಿ ಅಳವಡಿಸಿಕೊಂಡಿರುವುದು, ಅವರ ರಾಜಕೀಯ ಪ್ರಜ್ಞೆಗೆ ಅವರ ದೇಶಾಭಿಮಾನಕ್ಕೆ ಸಾಕ್ಷಿಯಾಗಿದೆ.

ಶಾರದಮ್ಮನವರಿಗೆ ನಾಲ್ಕು ಹೆಣ್ಣು ಮಕ್ಕಳು, ಒಬ್ಬನೇ ಮಗ. ಮಕ್ಕಳೆನ್ನಲ್ಲ ಚೆನ್ನಾಗಿ ಓದಿಸಬೇಕೆಂಬ ದೃಢನಿಶ್ಚಯದಿಂದ ಸ್ವತಃ ಅವರ ಓದುಬರಹದಲ್ಲಿ ವೈಯಕ್ತಿಕ ಆಸಕ್ತಿ ವಹಿಸುತ್ತಾರೆ. ತಮ್ಮ ಗುರಿಯಲ್ಲಿ ಶತಶಃ ಯಶಸ್ವಿಯಾಗುತ್ತಾರೆ.

ಸಾಮಾಜಿಕವಾಗಿ ಕೌಟುಂಬಿಕವಾಗಿ ಹಲವಾರು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಕಷ್ಟಕರವಾದ ಜೀವನವನ್ನು ನಡೆಸಿದ ಹೆಸರಿಸಲೇಬೇಕಾದ ಲೇಖಕಿಯೆಂದರೆ ದುಃಸರಸ್ವತಿಯವರು ತಮ್ಮ ಆತ್ಮಕಥನವಾದ ಈಗೇನು ಮಾಡೀರ? ಕೃತಿಯಲ್ಲಿ ಮುಕ್ತವಾಗಿ ಜೀವನದಲ್ಲಿ ಎದುರಾದ ಸಮಸ್ಯೆಗಳು ಹೇಳಿಕೊಂಡಿದ್ದಾರೆ. ಮಹಿಳೆಯರು ಕಛೇರಿಗಳಲ್ಲಾಗಲಿ, ಬ್ಯಾಂಕುಗಳಲ್ಲಾಗಲಿ, ಇತರ ಸಂಸ್ಥೆಗಳಲ್ಲಾಗಲಿ, ಮೇಲಾಧಿಕಾರಿಗಳ ಕೈ ಕೆಳಗೆ ಕೆಲಸಮಾಡುವಾಗ ಅವರು ಎಷ್ಟೇ ಪ್ರಾಮಾಣಿಕವಾಗಿ ದುಡಿದರು ಅವರ ಪ್ರಾಮಾಣಿಕತೆಯನ್ನು ದುರುಪಯೋಗಪಡಿಸಿಕೊಂಡು ಅವರನ್ನು ಸಮಸ್ಯೆಯ ಸುಳಿಯಲ್ಲಿ ಸಿಲುಕಿಸುವಂತಹ ಎಷ್ಟೋ ಪ್ರಸಂಗಗಳು ಇಂದಿಗೂ ಸಹ ನಡೆಯುತ್ತಿವೆ. ಇದೇ ರೀತಿಯ ಸಮಸ್ಯೆಯಲ್ಲಿ ಲೇಖಕಿಯು ಸಿಲುಕಿಕೊಂಡು ಅವರು ಪೋಲಿಸರ ಬಂಧನಕ್ಕೊಳಗಾಗುತ್ತಾರೆ.

ಬೇರೆಯವರು ಮಾಡಿದ ತಪ್ಪಿಗಾಗಿ ಲೇಖಕಿಯು ಸಮಸ್ಯೆಯ ಸುಳಿಯೊಳಗೆ ಸಿಲುಕಿ ಪೊಲೀಸರ ಬಂಧನಕ್ಕೊಳಗಾದಾಗ ಅವರನ್ನು ಪ್ರಶ್ನಿಸುವ, ವಿಚಾರಣೆ ನಡೆಸುವ ರೀತಿ ಯಾವ ರೀತಿ ಇರುತ್ತದೆ ಎಂಬುದನ್ನು ಅವರ ಆತ್ಮಕಥೆಯಲ್ಲಿ ನೋಡಬಹುದು.

ಸಮಾಜದ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತು ಪೊಲೀಸರು, ತಪ್ಪಿತಸ್ಥರನ್ನು ಬಂಧಿಸದೆ ತಪ್ಪುಮಾಡದ ಒಂದು ಹೆಣ್ಣನ್ನು ಬಂಧಿಸಿ ಅವಳನ್ನು ಮಾನಸಿಕವಾಗಿ ಹಿಂಸಿಸುವ ಅವಹೇಳನಕಾರಿಯಾಗಿ ಪ್ರಶ್ನಿಸುವುದು ಕಂಡುಬರುತ್ತದೆ. ಹೀಗೆ ಸರಸ್ವತಿಯವರು ತಪ್ಪುಮಾಡದೆ ಸಮಸ್ಯೆಯ ಸುಳಿಯಲ್ಲಿ ಸಿಲುಕಿ ತಮ್ಮ ಜೀವನದುದ್ದಕ್ಕೂ ನೋವನ್ನನುಭವಿಸುತ್ತಾರೆ.

ಮಕ್ಕಳು ಸಮಸ್ಯೆಗೆ ಸಿಲುಕಿಕೊಂಡಾಗ ಅವರಿಗೆ ಕುಟುಂಬದವರ, ಸ್ನೇಹಿತರ ಪ್ರೋತ್ಸಾಹ ಹೆಚ್ಚಾಗಿರಬೇಕು. ಬೇರೆಯವರ ಮಾತಿಗೆ ತಲೆಒಡ್ಡದೆ, ಅವರಲ್ಲಿ ಆತ್ಮವಿಶ್ವಾಸವನ್ನು ತುಂಬಿ ಸಮಸ್ಯೆಯಿಂದ ಹೊರಬರಲು ಕುಟುಂಬದವರು ಸ್ಫೂರ್ತಿದಾಯಕವಾಗಿರಬೇಕು. ಇದೇ ರೀತಿಯ ಸಮಸ್ಯೆಯು ಸಿಲುಕಿಕೊಂಡಾಗ ಅವರ ತಂದೆಯ, ಸ್ನೇಹಿತರ ಅಪಾರ ಪ್ರೋತ್ಸಾಹದಿಂದಾಗಿ ತಮ್ಮ ನೋವನ್ನೆಲ್ಲಾ ಮರೆತು ಮೊದಲಿನಂತಾಗುತ್ತಾರೆ.

ಪ್ರಸ್ತುತ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಅವರು ಶಾಲೆ ಸೇರಿದ ಮತ್ತು ಅನುಭವಿಸಿದ ಯಶೋಗಾಥೆಯೇ ಆಗಿದೆ. ಸಾ.ರಾ. ಅವರು ವಿದ್ಯಾಭ್ಯಾಸ ಮಾಡುವ ಕಾಲಘಟ್ಟವನ್ನು ಇಡಿಯಾಗಿ ಗ್ರಹಿಸಿದಾಗ ಅವರ ಮುಸ್ಲಿಂ ಸಮುದಾಯದ ಕಿಡಿಗಣ್ಣು ಹೇರಳವಾಗಿ ಬಿದ್ದಿರುವುದು ತಿಳಿಯುತ್ತದೆ. ಸಾಂಪ್ರದಾಯಿಕ ಕೌಟುಂಬಿಕ ಆವರಣದೊಳಗೆ ಸಿಲುಕಿ ವೈಯಕ್ತಿಕ ಮನಸ್ಸು ಮುದುಡಿಕೊಳ್ಳುತ್ತದೆ.

ಸಾ.ರಾ. ಅವರ ವಿದ್ಯಾಭ್ಯಾಸಕ್ಕೆ ಮುಸ್ಲಿಂ ಸಮುದಾಯದವರ ವಿರೋಧ ಇದ್ದರೂ ತನ್ನ ತಂದೆಯ ಮತ್ತು ಅಣ್ಣನ ಪ್ರೋತ್ಸಾಹದಿಂದಾಗಿ ಅವರ ಸಮಸ್ಯೆಗಳೆಲ್ಲವೂ ಬಗೆಹರಿಯುತ್ತವೆ. ಮುಸ್ಲಿಂ ಮಹಿಳೆಯರು ಇಂದಿಗೂ ಎದುರಿಸುತ್ತಿರುವ ಒಂದು ಮುಖ್ಯ ಸಮಸ್ಯೆಯೆಂದರೆ ಬುರ್ಕಾ ಪದ್ಧತಿ. ಸಾಂಪ್ರದಾಯಿಕವಾಗಿ ಮುಂದುವರೆದು-ಕೊಂಡು ಬರುತ್ತಿರುವ ಬುರ್ಕಾವನ್ನು ಹಾಕಿಕೊಳ್ಳದೆ ಮುಸ್ಲಿಂ ಮಹಿಳೆಯರು ಯಾರು ಹೊರಗೆ ಓಡಾಡುವಂತಿಲ್ಲ. ಬುರ್ಕಾವನ್ನು ಹಾಕಿಕೊಳ್ಳದೆ ಓಡಾಡುತ್ತಿದ್ದ ಲೇಖಕಿಯನ್ನು ನೋಡಿದ ಮುಸ್ಲಿಂ ಮತದವರು ಯಾವ ರೀತಿ ನಿಂದನೆ ಮಾಡುತ್ತಾರೆ ಎಂಬುದನ್ನು ತಮ್ಮ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ.

"ಬುರ್ಕಾ ಹಾಕಿಕೊಂಡು ಹೋಗಬಾರದೆ"?

"ಮುಸ್ಲಿಂ ಹುಡುಗಿಯರೆಲ್ಲಾ ಹೀಗೆ ಘೋಷಾ ಇಲ್ಲದೆ ಬೀದಿಯಲ್ಲಿ ತಿರುಗಿ ಹೊರಟರೆ ಇಸ್ಲಾಂ ಮತ ಉಳಿದೀತೇ?" ಎಂದೆಲ್ಲ ಇವರು ನನಗೆ ಕೇಳಿಸುವಂತೆ ನಗುತ್ತಿದ್ದರು.

"ನಿಮ್ಮ ಮಗಳೊಡನೆ ಬುರ್ಕಾ ಹಾಕಲು ಹೇಳಿ"? ಎಂದು ನನ್ನಿ ತಾಯಿಯೊಡನೆ ಯಾರೋ ಅಂದಾಗ ಅದನ್ನು ಕೇಳಿದ ನನ್ನ ತಂದೆ ಮತ್ತು ಅಣ್ಣಂದಿರು ಜೋರಾಗಿ ನಕ್ಕುಬಿಟ್ಟರು.

"ನನ್ನ ಮಗಳು ಹೀಗಿದ್ದರೆ ಯಾರಿಗೂ ನಷ್ಟವಿಲ್ಲ. ಅವಳೇನಾದರೂ ತಪ್ಪು ಮಾಡಿದಾಗ ಯೋಚಿಸೋಣ" ಎಂದು ನನ್ನ ತಂದೆ ಉತ್ತರಕೊಟ್ಟರು.[೧]

ಹೀಗೆ ಅನಕ್ಷರಸ್ಥರಾದ ಮುಸ್ಲಿಂ ಸಮುದಾಯದಿಂದ ಬುರ್ಕಾ ಹಾಕದಿರುವುದಕ್ಕೆ ಸಾ.ರಾ. ಅವರ ಬಗ್ಗೆ ವಿರೋಧ ವ್ಯಕ್ತವಾದರೂ ಅಕ್ಷರಸ್ಥರಾದ ಅವರ ತಂದೆ, ಅಣ್ಣ ಸಾ.ರಾ.ಅವರ ಪರವಾಗಿ ನಿಲ್ಲುತ್ತಾರೆ. ಅವರಿಗೆ ಉತ್ತರ ನೀಡುತ್ತಾರೆ.

ಮುಸ್ಲಿಂ ಸಮುದಾಯದಲ್ಲಿ ಹೆಣ್ಣುಮಕ್ಕಳು ಸ್ವತಂತ್ರವಾಗಿ ಮನೆಯಿಂದ ಹೊರಗೆ ಬಂದು ಶಾಲೆಗೆ ಹೋಗುವಂತಿರಲಿಲ್ಲ. ಅವರ ಧರ್ಮದಲ್ಲಿ ತಮ್ಮದೇ ಆದ ಕಟ್ಟುಪಾಡುಗಳನ್ನು ವಿಧಿಸಿದ್ದರು. ಆದರೆ ಸಾರಾ ಅವರ ತಂದೆ ಮತ್ತು ಅಣ್ಣ ವಿದ್ಯಾವಂತರಾದ ಕಾರಣ ಅವರಿಗೆ ಶಾಲೆಗೆ ಹೋಗುವ ಅವಕಾಶವಿತ್ತು. ಆದರೆ ಅದು ಓದಿಗೆ ಮಾತ್ರ ಸೀಮಿತವಾಗಿದ್ದು, ಅವರು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ, ದೈಹಿಕ ಚಟುವಟಿಕೆಗಳಲ್ಲಿ ಭಾಗವಹಿಸುವಂತಿರಲಿಲ್ಲ. ಆದರೆ ಸಾರಾ ಅವರಿಗೆ ಓದಿಗಿಂತ ದೈಹಿಕ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿ ಇದ್ದು, ಶಾಲೆಯ ಥ್ರೋಬಾಲ್ ಟೀಮಿನಲ್ಲಿ ಅತ್ಯುತ್ತಮ ಆಟಗಾರ್ತಿಯಾದ ಇವರಿಗೆ ಪರ ಊರಿಗೆ ಹೋಗಿ ಆಟವಾಡುವ ಅವಕಾಶವಿರಲಿಲ್ಲ. ತಂದೆಯವರ ಸಂಪೂರ್ಣ ಬೆಂಬಲ ಇವರಿಗಿದ್ದರು, ಅದು ಓದಿಗೆ ಮಾತ್ರ ಸೀಮಿತವಾಗಿದ್ದು ದೈಹಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಇವರ ತಂದೆಯವರು ನಿಷೇಧ ಹಾಕಿದ್ದರು.

"ಪಿಕ್‌ನಿಕ್‌ಗೆ ಹೋಗಬಾರದು, ಸಿನಿಮಾಗೆ ಹೋಗಬಾರದು, ಹೆಣ್ಣು ಮಕ್ಕಳೇ ಅಭಿನಯಿಸುವ ನಾಟಕದಲ್ಲೂ ಅಭಿನಯಿಸಬಾರದು. ಶಾಲಾ ವಾರ್ಷಿಕೋತ್ಸವಕ್ಕೂ ಹೋಗಬಾರದು. ಒಳ್ಳೆಯ ಬಟ್ಟೆಯುಡಬಾರದು, ಹಾಗೆ ಮಾಡಬಾರದು ಹೀಗೆ ಮಾಡಬಾರದು. ಈ 'ಬಾರದು' ಎಂಬ ಅಸಂಖ್ಯ ನೂಲುಗಳ ಬಲೆಯಲ್ಲಿ ರಾತ್ರಿ ಹಗಲೂ ಕಟ್ಟಿಹಾಕುತ್ತಿದ್ದರು ನನ್ನ ಹಿರಿಯರು. ನನ್ನ ಅಣ್ಣ ತಮ್ಮಂದಿರಿಗೆ ಯಾವ

---

೧. ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು – ಸಾರಾ ಅಬೂಬಕ್ಕರ್, ಪು. ೮೮.

ರೀತಿಯ ನಿರ್ಬಂಧವೂ ಇಲ್ಲದಿದ್ದರೂ ನಾನು ಮಾತ್ರ ಪಂಜರದಲ್ಲಿ ಬಂಧಿಯಾದ ಹಕ್ಕಿಯಾಗಿದ್ದೆ. ಆಗೆಲ್ಲಾ ನಾನು ಅಂದುಕೊಳ್ಳುತ್ತಿದ್ದೆ. 'ಈ ಐವರ ಜೊತೆಯಲ್ಲಿ ನಾನು ಗಂಡಾಗಿಯೇ ಹುಟ್ಟಬಾರದಿತ್ತೇ' ಎಂದು ಇಂತಹ ಉಸಿರುಕಟ್ಟಿಸುವ ವಾತಾವರಣದಲ್ಲಿ ನಾನು ನಿರಾಳವಾಗಿ ಉಸಿರಾಡುವ ಒಂದೇ ಒಂದು ಜಾಗವಾದ ಈ ಆಟದ ಮೈದಾನಕ್ಕೂ ನಿಷೇಧ ಹೇರಿದಾಗ, ಹೃದಯದಲ್ಲಿ ಅಸಹನೆಯಿಂದ ಕುದಿಯುತ್ತಿದ್ದ ಜ್ವಾಲಾಮುಖಿಯೊಂದು ಸ್ಫೋಟಿಸಿತು. ನಾನು ಕಾಳಗದ ಕಹಳೆಯನು ಮೊಳಗಿದೆ"[೧]

ಹೀಗೆ ಸಾರಾ ಅವರಿಗೆ ಅವರ ಕುಟುಂಬದವರು ನಿರ್ಬಂಧವನ್ನು ಹೇರಿದಾಗ ಈ ರೀತಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುತ್ತಾರೆ. ಆದರೆ ತಂದೆ-ತಾಯಿ ಮತ್ತು ಧರ್ಮಕ್ಕೆ ವಿರುದ್ಧವಾಗಿ ಅವರು ನಡೆದುಕೊಳ್ಳುವಂತಿರಲಿಲ್ಲ. ವಿದ್ಯಾವಂತರಾದ ಇವರೆ ತಮ್ಮ ಮಗಳ ಮೇಲೆ ಈ ರೀತಿಯ ನಿರ್ಬಂಧವನ್ನು ಹೇರಿದಾಗ ಅನಕ್ಷರಸ್ಥ ಮುಸ್ಲಿಂ ಮಹಿಳೆಯರು ಎದುರಿಸುತ್ತಿದ್ದ ಸಮಸ್ಯೆಗಳು ಎಷ್ಟು? ಎಂಬುದನ್ನು ಊಹಿಸಲು ಅಸಾಧ್ಯ.

ಶಿಕ್ಷಣ: ಇಂದಿಗೂ ಹಳ್ಳಿಗಳಲ್ಲಿ ಆಧುನಿಕ ವಿದ್ಯಾಭ್ಯಾಸಕ್ಕೆ ಸಮನಾದ ಪ್ರೋತ್ಸಾಹವಿಲ್ಲ. ಬೆಳಗ್ಗೆ ಮತ್ತು ರಾತ್ರಿ ಕೂಡ ತಮ್ಮ ಮಕ್ಕಳನ್ನು ಮದ್ರಸಾಗೆ ಕಳುಹಿಸಿ ಧಾರ್ಮಿಕ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವ ತಾಯಂದಿರಿಗೆ ಆಧುನಿಕ ವಿದ್ಯಾಭ್ಯಾಸದ ಪ್ರಾಮುಖ್ಯತೆ ತಿಳಿದಿಲ್ಲ. ಇಂತಹ ಸ್ಥಿತಿ ಸಾರಾ ಅಬೂಬಕ್ಕರ್ ಅವರ "ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು ಕೃತಿ ಪ್ರತಿಬಿಂಬಿಸುತ್ತದೆ".

ಸಾರಾ ಅವರು ತಮಗೆ ತಮ್ಮ ಧರ್ಮದ ನೀರೆ ಸಂಪ್ರದಾಯಗಳು ಹೇರಿದ ಒತ್ತಡ ತಂತ್ರಗಳಿಂದ ಹೆಣ್ಣು ಮಕ್ಕಳು ಹೇಗೆ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎಂಬುದನ್ನು ತಮ್ಮ ಅನುಭವದ ಮೂಲಕ ತಿಳಿಸಿದ್ದಾರೆ.

ಮುಸ್ಲಿಂ ಸಮುದಾಯದಲ್ಲಿ ಮಹಿಳೆಯರನ್ನು ಹೀನವಾಗಿ ದುಡಿಸಿಕೊಳ್ಳುತ್ತಾರೆ. ಅವರಿಗೆ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಸ್ವಾತಂತ್ರ್ಯವನ್ನು ಕಸಿದುಕೊಂಡು ಅವರ ಇರುವನ್ನು ಅರ್ಥಹೀನ ಮಾಡಿ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತೆ ಅವರ ಅಸ್ತಿತ್ವ ಎಷ್ಟು ದುರಂತವಲ್ಲವೆ? ಸಾಮಾನ್ಯ ಮೂಲಭೂತ ಹಕ್ಕುಗಳನ್ನು ಕಸಿದುಕೊಂಡಿರುವ ಈ ಸಮುದಾಯವನ್ನು ಈ ಮಹಿಳೆಯರ ಮನೆಮಂದಿಯೇ ಪ್ರೋತ್ಸಾಹಿಸುವುದು ಪ್ರಸ್ತುತದಲ್ಲಿ ಅನಿವಾರ್ಯ ಎಂಬಂತೆ ನಡೆದುಕೊಳ್ಳುತ್ತಿದ್ದಾರೆ. ಈ ಮೂಲಭೂತವಾದಿಗಳ ಸಂಪ್ರದಾಯದ ಗೊಡ್ಡುತನಕ್ಕೆ ವಿದ್ಯಾವಂತ ಕೌಟುಂಬಿಕ ವರ್ಗ ಹೇಗೆ ಹೆದರುತ್ತದೆ ಎಂಬುದನ್ನು ತಿಳಿದರೇ

೧. ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು - ಸಾರಾ ಅಬೂಬಕ್ಕರ್, ಪು. ೯೩.

ಸೋಜಿಗವೇ ಸರಿ. ಪ್ರಸ್ತುತ ಕತೆಯ ಕಥಾನಾಯಕಿಯ ತಂದೆ ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ವಕೀಲ ತರಗತಿಯಲ್ಲಿ ಚಿನ್ನದ ಪದಕ ಪಡೆದ ಅವರು ಸ್ವಂತ ಮಗಳ ವಿದ್ಯಾಭ್ಯಾಸ ಮಾಡಿಸಲು ಮೂಲಭೂತವಾದಿಗಳ ವಿರುದ್ಧ ನಿಲ್ಲಲು ಎಷ್ಟು ಹಿಂಜರಿಯುತ್ತಾರೆ ಎಂಬುದನ್ನು ತಿಳಿಯಬಹುದು. ಆದರೆ ಅವರ ಹಿರಿಯ ಮಗ ಬಿಸಿರಕ್ತ ತುಂಬಿ ಓದಲು ಸಹಾಯ ಮಾಡುತ್ತಾರೆ. ಅಷ್ಟೇ ಅಲ್ಲದೆ ಅವರಿಗೆ ನಿಷೇಧವಾಗಿದ್ದ ಮೈದಾನದಾಟಗಳನ್ನು ಆಡಿ ರಂಜಿಸಲು ಪ್ರೋತ್ಸಾಹಿಸುವುದು ನಿಜಕ್ಕೂ ಮೆಚ್ಚಿಕೊಂಡಾಡುವಂತಹದ್ದು.

ಮುಸ್ಲಿಂ ಧಾರ್ಮಿಕ ಗ್ರಂಥಗಳನ್ನು ಚೆನ್ನಾಗಿ ಓದಿಕೊಂಡಿದ್ದ ಸಾ.ರಾ.ಅವರು ಹೇಳುವ ಮಾತುಗಳು ಗಮನಾರ್ಹ. "ಆ ಕಾಲದಲ್ಲಿ ಸ್ತ್ರೀಯರು ಮನೆಯೊಳಗೆ ಬಂಧಿಯಾಗಿರಲಿಲ್ಲ ಎಂಬುದನ್ನು ಈ ಕತೆಗಳಿಂದ ನಾನು ತಿಳಿದುಕೊಂಡೆ. ಮುಸ್ಲಿಂ ಹೆಂಗಸರು ಕತ್ತಿ ಹಿಡಿದು ಕುದುರೆ ಹತ್ತಿ ರಣರಂಗದಲ್ಲಿ ಪುರುಷರೊಡನೆ ಯುದ್ಧ ಮಾಡಿದ ಕತೆಗಳನ್ನು ಈ ಪುಸ್ತಕಗಳಲ್ಲಿ ನಾನು ಓದಿದ್ದೇನೆ". ಈ ಮಾತುಗಳನ್ನು ಮುಸ್ಲಿಂ ಮೂಲಭೂತ ವಾದಿಗಳು ಚೆನ್ನಾಗಿ ತಿಳಿಯಬೇಕಿದೆ. ಮುಸ್ಲಿಂ ಧಾರ್ಮಿಕ ಮುಖಂಡರು ಮತ್ತೊಂದು ಬಾರಿ ಮನಸ್ಸಿಟ್ಟು ಖುರಾನ್ ಗ್ರಂಥವನ್ನು ಓದುವ ಅವಶ್ಯಕತೆ ಮತ್ತು ಅನಿವಾರ್ಯತೆ ಏಕೆ ಎಂಬುದನ್ನು ಅವರ ಮಾತಿನಲ್ಲೇ ಕೇಳೋಣ.

"ಹೆಣ್ಣುಮಕ್ಕಳಿಗೆ ವಿದ್ಯೆಕೊಡಕೂಡದೆಂದು ಖುರಾನಿನಲ್ಲಿ ಎಲ್ಲೂ ಹೇಳಿಲ್ಲವಲ್ಲ?" ಮುಂದಿನ ಜನಾಂಗವನ್ನು ಪೋಷಿಸಿ ಉತ್ತಮ ಪ್ರಜೆಯಾಗಿ ಮುಂದೆ ತರಬೇಕಾದವಳು ತಾಯಿಯಾದುದರಿಂದ ಗಂಡಿಗಿಂತಲೂ ಹೆಣ್ಣಿಗೆ ವಿದ್ಯಾಭ್ಯಾಸದ ಅಗತ್ಯವಿದೆ. ಸಾರಾ ಮತ್ತು ಸಾರಾ ತಂದೆಯವರು ಧೈರ್ಯಮಾಡಿ ಹೇಳಿ ಗಟ್ಟಿಮನಸ್ಸು ಮಾಡಿದ್ದರು.

ಶಾಲೆಗೆ ಹೋಗುತ್ತಿದ್ದ ಸಾ.ರಾ.ಅವರನ್ನು ಕುರಿತು ಮುಸ್ಲಿಂ ಬಾಂಧವರು ಆಡುತ್ತಿದ್ದ ಮಾತುಗಳು ಸಾ.ರಾ. ಅವರ ಬಾಲ್ಯ ಮನಸ್ಸನ್ನು ಎಷ್ಟು ನೋಯಿಸಿರಬೇಕು. ಆ ಅಲ್ಲಾನಿಗೆ ಗೊತ್ತು.

"ಊರಿನ ಪ್ರತಿಷ್ಠಿತ ಮುಸ್ಲಿಮರೊಬ್ಬರ ಮಗಳು ಘೋಷಾ ಇಲ್ಲದೆ ಸೀರೆಯ ಸೆರಗನ್ನು ತಲೆಯ ಮೇಲೆ ಹಾಕಿಕೊಳ್ಳದೆ ಹಿಂದೂ ಹುಡುಗಿಯಂತೆ ಅವರ ಜೊತೆಯಲ್ಲಿ ನಡೆದು ಹೋಗುತ್ತಿದ್ದರೆ ನೋಡಿ ಸಹಿಸುವುದು ಇವರಿಂದ ಸಾಧ್ಯವಾಗುತ್ತಿರಲಿಲ್ಲ. ನನ್ನ ಹಿಂದಿನಿಂದ ನನಗೆ ಕೇಳಿಸುವಂತೆ ಏನಾದರೊಂದು ಹೇಳುತ್ತಿದ್ದರು".

"ಇಷ್ಟು ದೊಡ್ಡವಳಾಗಿ ಇನ್ನೂ ಈ ಹುಡುಗಿ ಶಾಲೆಗೆ ಹೋಗುತ್ತಿದ್ದಾಳಲ್ಲ? ಬುರ್ಕಾ ಹಾಕಿಕೊಂಡಾದರೂ ಹೋಗಬಾರದೇ ಮುಸ್ಲಿಂ ಹುಡುಗಿಯರೆಲ್ಲಾ ಹೀಗೆ

ಘೋಷಾ ಇಲ್ಲದೆ ಬೀದಿಯಲ್ಲಿ ತಿರುಗ ಹೊರಟರೆ ಇಸ್ಲಾಂ ಮತ ಉಳಿದೀತೆ" ಎಂದೆಲ್ಲಾ ಇವರು ನನಗೆ ಕೇಳಿಸುವಂತೆ ಹೇಳುತ್ತಿದ್ದರಂತೆ".

ಕಷ್ಟಪಟ್ಟು ಮುಸ್ಲಿಂ ಬಾಂಧವರ ತಿಳಿಗೇಡಿ ಮಾತುಗಳ ನಡುವೆಯೂ ಶಾಲೆ ಸೇರಿದ ಸಾ.ರಾ. ಅವರು ಅನುಭವಿಸಿದ ಕಿರುಕುಳ ಬಿಟ್ಟು ಎಷ್ಟೋ ಮನರಂಜನೆಗಳು ಲೆಕ್ಕವಿಲ್ಲ. ಸಾ.ರಾ. ಅವರ ಈ ಎಳೆಮನಸ್ಸಿಗೆ ಎಷ್ಟು ನೋವಾಗಿರಬೇಕು ಎಂಬುದು ಊಹೆಗೆ ನಿಲುಕದ್ದು.

ಒಟ್ಟಾರೆ ಸಾ.ರಾ. ಅವರು ನಾನಾ ತೊಡಕುಗಳ ನಡುವೆ ತಮ್ಮ ಎಸ್.ಎಸ್.ಎಲ್.ಸಿ. ಹಂತದವರೆಗೆ ವಿದ್ಯಾಭ್ಯಾಸವನ್ನು ಮುಗಿಸಿದರು. ಮುಂದೆ ಶೈಕ್ಷಣಿಕ ಚಟುವಟಿಕೆಗೆ ತಿಲಾಂಜಲಿಯನ್ನಿರಿಸಿ ಮನೆಯ ಹಿರಿಯರು ಅವರಿಗೆ ಸಾಂಸಾರಿಕ ಬದುಕಿಗೆ ಎಳೆಯ ಮನಸ್ಸಿನ ಸಾ.ರಾ. ಒಪ್ಪಿಗೆಯನ್ನರಿಯದೆ ತಳ್ಳಿದರು.

ಇಲ್ಲಿ ನಮಗೆ ಕಾಡುವ ಒಂದು ಪ್ರಶ್ನೆ ಎಂದರೆ ನಾವಿರುವುದು ಪ್ರಜಾಪ್ರಭುತ್ವ ರಾಷ್ಟ್ರದಲ್ಲೋ ಅಥವಾ ಮೂಲಭೂತವಾದಿಗಳಿಂದ ತುಂಬಿರುವ ಗೊಡ್ಡು ಸಂಪ್ರದಾಯವನ್ನು ಉದಾರವಾಗಿ ಬಿತ್ತುತ್ತಿರುವ ಮುಸ್ಲಿಂ ರಾಷ್ಟ್ರದಲ್ಲೇ ತಿಳಿಯದು. ಏಕೆಂದರೆ ಸಾ.ರಾ. ಅವರ ವಿದ್ಯಾಭ್ಯಾಸವನ್ನು ನಿಲ್ಲಿಸಲು ಸಂವಿಧಾನಾತ್ಮಕ ಒಪ್ಪಿಗೆ ಇತ್ತೋ ಅಥವಾ ಇಲ್ಲವೋ ಇಲ್ಲದಿದ್ದರೆ ಅದನ್ನು ಪಾಲಿಸಲು ಈ ಜನಗಳನ್ನು ಈ ಮುಸ್ಲಿಂ ಬಂಧುಗಳೇಕೆ ಬಿಡುತ್ತಿಲ್ಲ. ಅವರ ಒತ್ತಡಗಳು ಮುಗ್ಧ ಹೆಣ್ಣುಮಕ್ಕಳ ಮೇಲೇಕೆ ಎಂಬುದೆ ನಮ್ಮ ಕೊರಗು.

ಪುರುಷರಿಗಿರುವಂತೆಯೇ ಸ್ತ್ರೀಯರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡಿ ಅವರು ನಮ್ಮಂತೆಯೇ ಎಂಬ ಮಾನವತೆಯು ಕಿಂಚಿತ್ತಾದರೂ ಉಳಿಸಿ ಆಕೆಯ ಮಾತಾಡುವ ಹಕ್ಕನ್ನು ಕಸಿದುಕೊಳ್ಳಬೇಡಿ. ಅವರ ಕಷ್ಟ ನಮಗೆ ಬಂದರೆ ಅನುಭವಿಸಲು ನೀವು ಸಿದ್ಧರಿರುವಿರಾ? ಒಮ್ಮೆ ಯೋಚಿಸಿ.

ಈ ಕಥೆಯಲ್ಲಿ ನಾವು ಗಮನಿಸಲೇಬೇಕಾದ ಮತ್ತೊಂದು ಮುಖ್ಯಪಾತ್ರ ಎಂದರೆ ಸಾ.ರಾ. ಅವರ ತಂದೆ ವಿದ್ಯಾವಂತರಾಗಿದ್ದುಕೊಂಡು ಯಾವುದೇ ಸ್ವಾರ್ಥಪರ ಉದ್ದೇಶವಿಲ್ಲದೆ ಕಷ್ಟಪಟ್ಟು ಓದಿ ಜೊತೆಗೆ ತಮ್ಮ ಮಗಳೂ ಕೂಡ ಓದಲು ನಿಯಮಗಳನ್ನು ಮೀರಿ ಓದಿಸಿದ್ದು ಒಂದು ದೊಡ್ಡ ಕ್ರಾಂತಿಯೇ ಸರಿ.

"ನೀನು ನಮ್ಮ ಸಮಾಜದಲ್ಲಿ ಶಾಲೆಗೆ ಹೋಗಿ ಕಲಿಯುತ್ತಿರುವ ಪ್ರಥಮ ಮುಸ್ಲಿಂ ಹುಡುಗಿ ನೀನು ಶಾಲೆಗೆ ಹೋಗುವುದೇ ಊರಿನವರಿಗೆ ನುಂಗಲಾರದ ತುತ್ತಾಗಿರುವಾಗ ಇನ್ನು ನೀನು ಪರ ಊರಿಗೆ ಹೋಗಿ ಆಡಿದರೆ ಊರವರು

ಏನೆಂದಾರು? ನಿನ್ನಿಂದ ಯಾವ ತಪ್ಪು ಮಾಡಿದರೆ ಆಮೇಲೆ ನಮ್ಮೂರಿನ ಮುಸ್ಲಿಂ ಹೆಣ್ಣುಮಕ್ಕಳು ಶಾಲೆಯ ಮುಖವನ್ನೇ ನೋಡಲಾರರು. ನಿನ್ನನ್ನು ನೋಡಿ ಉಳಿದವರಾರು ಕಲಿಯಲಿ" ಎನ್ನುವಂತಹ ಮಾತುಗಳು ಮುಸ್ಲಿಂ ಸಮಾಜದ ನಿಯಮಗಳನ್ನು ಹೊರದೂಡಲು ಪ್ರೇರೇಪಿಸುವಂತಿದೆ ಮತ್ತು ಮುಸ್ಲಿಂ ಹೆಣ್ಣುಮಕ್ಕಳ ಭವಿಷ್ಯದ ಆಲೋಚನೆ ಅಡಗಿದೆ. ಇಂಥವರು ಮುಸ್ಲಿಂ ಸಮಾಜದಲ್ಲಿ ಹಲವು ಮಂದಿ ಇದ್ದರೆ ಇಂತಹ ಸಮಸ್ಯೆಗಳು ತಾವಾಗಿಯೇ ನಾಶವಾಗುತ್ತವೆ.

ಸಾರಾ ಅವರು ಮುಸ್ಲಿಂ ಮಹಿಳೆಯಾದ್ದರಿಂದ ಮುಸ್ಲಿಂ ಹುಡುಗಿ ಶಾಲೆ ಕಲಿಯುವುದಕ್ಕಾಗಿ, ಧರ್ಮದ ಬಲೆಯೊಳಗೆ ಸಿಲುಕಿ ನೋವು, ಯಾತನೆ ಮಾನಸಿಕ ಹಿಂಸೆಗಳನ್ನು ಅನುಭವಿಸುತ್ತಾರೆ.

ವಾಸಂತಿ ಪಡುಕೋಣೆಯವರಿಗೂ ಓದುವ ಹಂಬಲವಿದ್ದರೂ ಕೌಟುಂಬಿಕ ಸಂಬಂಧದಲ್ಲಿನ ವಿಘಟನೆಯಿಂದಾಗಿ ವಾಸಂತಿಯ ಶಿಕ್ಷಣವು ನಿಂತು ನಿಂತು ಸಾಗಿತು. ಕಲಿಯುವ ಅಪಾರ ಆಸೆಯಿದ್ದರೂ ಕಲಿಯಲು ಸಾಧ್ಯವಾಗಲಿಲ್ಲ. ಅನೇಕ ಅಡೆತಡೆಗಳಿಂದ ಅಧ್ಯಯನದ ಕೊರತೆ ಉಂಟಾಯಿತು. ಕುಟುಂಬದಲ್ಲಿನ ಆರ್ಥಿಕ ಅನಾನುಕೂಲತೆಯಿಂದಾಗಿ ಜೀವನಕ್ಕೆ ಸರಿಯಾದ ನೆಲೆ ಇಲ್ಲದ ಕಾರಣದಿಂದಾಗಿ ವಾಸಂತಿ ಪಡುಕೋಣೆ ವಿದ್ಯಾಭ್ಯಾಸದಿಂದ ವಂಚಿತರಾಗುವ ಸಂದರ್ಭದಲ್ಲಿಯೂ ಓದಬೇಕೆಂಬ ಒತ್ತಡ ಉತ್ಸಾಹವಿತ್ತು. ಕುಟುಂಬದ ಆಸರೆ, ಪ್ರೀತಿ, ಆರ್ಥಿಕ ಅನುಕೂಲತೆ, ಇಲ್ಲದಿರುವ ಸಂದರ್ಭದಲ್ಲಿ ಸಾಮಾನ್ಯವಾಗಿ ಓದಿನಿಂದ ವಿಮುಖ-ರಾಗುವುದನ್ನು ನೋಡಬಹುದು. ಆದರೆ ವಾಸಂತಿ ಎಂತಹ ಪರಿಸ್ಥಿತಿಯಲ್ಲಿ ಓದುವ ಆಸಕ್ತಿಯಿಟ್ಟುಕೊಂಡು ಅವರಿವರ ಸಹಾಯದಲ್ಲೇ ಓದನ್ನು ಸಾಗಿಸಿದ್ದು ಅವರ ಸಾಹಸವೇ ಎನ್ನಬಹುದು.

ಉಡುಪಿಯಲ್ಲಿದ್ದಾಗ ಮರಾಠಿ ಶಾಲೆಗೆ ಹೋಗುತ್ತಿದ್ದ ವಾಸಂತಿ ನಂತರ ಬಾಗಲಕೋಟೆಯಲ್ಲಿ ಸ್ವಲ್ಪ ಕಾಲ ನೆಲೆಸಿದಾಗ ವ್ಯಾಸಂಗ ನಿಂತಿತು. ಅನಂತರ ಸಿಕಂದರ್‌ಬಾದ್‌ನ ಅಣ್ಣನಮನೆಯಲ್ಲಿ ನೆಲೆಸಿದಾಗ ಅಲ್ಲಿ "ವಾಸಂತಿ ನಿನ್ನ ಶಾಲೆಯ ಖರ್ಚನ್ನು ನಾನು ನೋಡಿಕೊಳ್ಳುವೆ. ನೀನು ಶಾಲೆಗೆ ಹೋಗುವೆಯಾ?" ಎಂದರು. ಅಣ್ಣನ ಮಾತನ್ನು ಕೇಳಿದ ವಾಸಂತಿಯ ಸಂತೋಷಕ್ಕೆ ಮಿತಿಯೇ ಇಲ್ಲ. "ಆಗಲಿ, ಅಣ್ಣ ನನಗೆ ಓದುಬರಹದ ಮೇಲೆ ತುಂಬ ಆಸೆ" ಎನ್ನುವರು. ಈ ಸನ್ನಿವೇಶ ವಾಸಂತಿಯಲ್ಲಿ ವಿಪರೀತವಾಗಿ ಓದಿನ ದಾಹ ಇರುವುದನ್ನು ತೋರಿಸುತ್ತದೆ. ತನ್ನ ಅಣ್ಣನಿಂದಾಗಿ ಮುಂಬೈನ ಮಿಷನ್ ಹೈಸ್ಕೂಲಿಗೆ ಸೇರಿದರೂ ಕೂಡ ಮದುವೆಯಿಂದಾಗಿ ಓದು ಮತ್ತೆ ನಿಂತು ಹೋಗುತ್ತದೆ.

ವಿವಾಹದ ನಂತರ ತಮ್ಮ ಜೀವನವನ್ನು ನಡೆಸಲು ಅವರಿಗೆ ಆಧಾರವಾಗಿ ದೊರೆತದ್ದು ಶಿಕ್ಷಣ, ವಾಸಂತಿಯವರ ಪತಿ ಕುಟುಂಬದ ನಿರ್ವಹಣೆ ಮಾಡಲಾಗದೆ ತಲೆಮೇಲೆ ಕೈಹೊತ್ತು ಕುಳಿತುಕೊಂಡ ಪರಿಸ್ಥಿತಿಯಿಂದಾಗಿ ಸಂವೇದನಾಶೀಲತೆಯನ್ನು ಹೊಂದಿದ ವಾಸಂತಿ. ಮನೆಯ ವಿವರಣೆಯನ್ನು ನೋಡಲಾಗದೆ ಹೊರಗಿನ ಬಿಸಿಲಿಗೆ ಬಂದರು. ಕಷ್ಟ ಸಹಿಷ್ಣುತೆಯನ್ನು ಬದುಕು ಅವರಿಗೆ ಕಲಿಸಿತು. ಹನ್ನೆರಡು ಹದಿಮೂರು ವರ್ಷಗಳ ವೈವಾಹಿಕ ಜೀವನದ ಸಂಕಷ್ಟಗಳ ಬಡತನಗಳು ವಾಸಂತಿಯವರನ್ನು ಹೊರಗೆ ದುಡಿಯಲು ಪ್ರೇರೇಪಿಸಿತು. ತಾವು ಎದುರಿಸುತ್ತಿದ್ದ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಿಕೊಳ್ಳುವ ಪ್ರಯತ್ನದಲ್ಲಿ ಶಿಕ್ಷಣ ಅಗತ್ಯವೆಂಬುದನ್ನು ಕಂಡುಕೊಂಡರು.

ಸ್ವಾತಂತ್ರ್ಯೋತ್ತರ ಸಂದರ್ಭದಲ್ಲೂ ಹೆಣ್ಣುಮಕ್ಕಳು ಒಂದಿಷ್ಟು ಅಡುಗೆ ಕೆಲಸ, ಕಸೂತಿ ಕೆಲಸ, ಹೊಲಿಗೆ ಕೆಲಸ, ಮನೆಯ ಕೆಲಸವನ್ನು ಕಲಿತು ಮನೆಯಲ್ಲಿ ಮಕ್ಕಳ ಪತಿಯ ಸೇವೆ ಮಾಡಿಕೊಂಡು ಜೀವನ ಸಾಗಿಸಬೇಕಿತ್ತು. ಇಂತಹ ಕಾಲದಲ್ಲಿ ವಾಸಂತಿಯವರು ಓದಬೇಕೆಂಬ ಪಣತೊಟ್ಟು ಓದಿದ್ದು ಅವರ ಹೋರಾಟದ ಬದುಕಿಗೆ ನಿದರ್ಶನವಾಗಿದೆ.

ಹಿಂದಿರಾಷ್ಟ್ರ ಪ್ರಚಾರಕರೊಬ್ಬರು ಪ್ರತಿಮನೆಗೂ ಹೋಗಿ ಹಿಂದಿ ಕಲಿಯುವಿರಾ ನಾನು ಧರ್ಮಾರ್ಥ ಕಲಿಸುವೆನೆಂದು ಅಂಗಲಾಚಿ ಬೇಡಿಕೊಳ್ಳುತ್ತಿದ್ದನ್ನು ಕಂಡು ವಾಸಂತಿಯ ಮನಸ್ಸು ಹಿಂದಿ ಕಲಿಯುವ ಆಸೆಯನ್ನು ತುಂಬಿಕೊಂಡಿತು. ವಾಸಂತಿ ಅವರಿಗೆ ಕಲಿಕೆಯ ಅವಕಾಶವಾಗಲಿ, ಪತಿಯ ಪ್ರೋತ್ಸಾಹವಾಗಲಿ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಪತಿ ಬೇಡವೆಂದರು. ಆಕ್ಷೇಪಣೆ ಮಾಡಿದರೂ, ಹಠಮಾಡಿ ಸಮಜಾಯಿಷಿ ಹಿಂದಿ ಕಲಿತರು. ಇಡೀ ಕರ್ನಾಟಕದಲ್ಲಿ ಪ್ರವೇಶ ಎಂಬ ಎರಡನೆಯ ಪರೀಕ್ಷೆಯಲ್ಲಿ ಪ್ರಥಮಸ್ಥಾನದಲ್ಲಿ ಉತ್ತೀರ್ಣರಾದರು. ಶಿಕ್ಷಣದಿಂದ ಬೆಳೆಯಲು ತವಕಿಸುತ್ತಿದ್ದ ವಾಸಂತಿಯ ಹೋರಾಟದ ಬದುಕು ಇಲ್ಲಿಂದ ಪ್ರಾರಂಭವಾಗುತ್ತದೆ.

ರಾಷ್ಟ್ರಬಂಧು ಪತ್ರಿಕೆಗಾಗಿ ಕೆಲವು ಲೇಖನಗಳನ್ನು ಬರೆಯುವುದರೊಂದಿಗೆ ಇವರ ಬರಹದ ಬದುಕು ಆರಂಭವಾಯಿತು. ಆದರೆ ಬರವಣಿಗೆಗೆ ಮನೆಯ ಸಹಕಾರವಿರಲಿಲ್ಲ. ಹೊಸ್ತಿಲನ್ನು ದಾಟಿದರೆ ಹೆಣ್ಣು ಅಪಕೀರ್ತಿಗೀಡಾಗುತ್ತಾಳೆ ಎನ್ನುವ ವಾದಗಳು ಇದ್ದ ಕಾಲದಲ್ಲಿ ವಾಸಂತಿಯವರು ನಿಂತು ಸಾಗಿದ ಶಿಕ್ಷಣವನ್ನು ಮುಂದವರೆಸಿ ಮಹಿಮೆಗೆ ತೊಡಗಿಸಿಕೊಂಡದ್ದು. ಮಕ್ಕಳನ್ನು ಸಾಕಿ ಸಲಹಿ, ಸಂಸಾರವನ್ನು ಮುಂದುವರಿಸಿಕೊಂಡು ಹೋದದ್ದು ಅವರ ಹೋರಾಟವೇ ಎನಿಸುತ್ತದೆ.

[illegible]

ಮೊಲ್ಮೆಮೆನಷನ್ ಸೇರಿದೊಡನೆ ತನಗೆ ತಾನು ಸ್ವತಃ ದುಡಿದು ಮನೆಯ ತಾಪತ್ರಯ ಕಡಿಮೆ ಮಾಡಿಕೊಳ್ಳಬೇಕೆಂಬ ಹಂಬಲ ಕಾಣಿಸಿ, ಧೈರ್ಯದಿಂದ ಐದು ರೂಪಾಯಿ ವೇತನಕ್ಕೆ ಇಂಗ್ಲಿಷ್‌ನಲ್ಲಿ ಪಾಠ ಹೇಳಿಕೊಡಲು ಆರಂಭಿಸಿದರು. ಮೆಡಿಕಲ್ ಕೋರ್ಸಿಗೆ ಸೇರಿ ಅರ್ಧಕ್ಕೆ ನಿಲ್ಲಿಸಿದ್ದು, ಮೆಡಿಕಲ್ ಕಾಲೇಜಿನ ಉಪನ್ಯಾಸ ವರ್ಗದಿಂದ ಕಲಿತ ವಿಷಯಗಳು ನರ್ಸ್ ಕೆಲಸಕ್ಕೆ ಸೇರಿದವರಿಗೆ ಔಷಧಗಳ ಹೆಸರುಗಳು ಉಪಯೋಗಿಸುವ ಹೆಸರುಗಳನ್ನು ಕಲಿಸುವ ಜೊತೆಗೆ ಟ್ಯೂಷನ್‌ಗಳನ್ನು ಮಾಡಿದರು. ಮನೆಯಲ್ಲಿ ಸಾಕಷ್ಟು ತಾಪತ್ರಯಗಳು. ಪತಿಯ ಅಸಹನೆ ಇದ್ದಾಗಿಯೂ, ಯಾವುದಕ್ಕೂ ಮನಸ್ಸು ಕೆಡಿಸಿಕೊಳ್ಳದೆ ಕಲಿತು ಕಲಿಸುತ್ತಿದ್ದರು.

ಮೆಟ್ರಿಕ್ ಪಾಸಾದರೆ ಆರ್ಯಕನ್ಯಾ ವಿದ್ಯಾಲಯದಲ್ಲಿ ಖಂಡಿತ ಕೆಲಸ ಕೊಡುವೆಯೆಂದು ಮಹಿಳೆಯೊಬ್ಬರು ಆಶ್ವಾಸನೆಯಿತ್ತಾಗ, ವಾಸಂತಿ ಅವರ ಮನಸ್ಸು ಅದರೆಡೆಗೆ ತಿರುಗಿತು. ಕಲ್ಕತ್ತಾದಲ್ಲಿ ಪ್ರೈವೇಟಾಗಿ, ಮೆಟ್ರಿಕ್ ಪರೀಕ್ಷೆ ತೆಗೆದುಕೊಳ್ಳುವ ಸಲುವಾಗಿ ಗಣಿತ ಮತ್ತು ಡೊಮೆಸ್ಟಿಕ್‌ಸೈನ್ಸನ್ನು ಟ್ಯೂಷನ್ ಮೂಲಕ ಕಲಿತರು. ಬನಾರಸ್ ಯೂನಿವರ್ಸಿಟಿಯ ಪ್ರೈವೇಟ್ ಪರೀಕ್ಷೆಗೆ ಕಟ್ಟುವ ಸಲುವಾಗಿ ಸಂಗೀತದ ಪಾಠವನ್ನು ಕಲಿತರು. ಪರೀಕ್ಷೆಗೆ ಎರಡು ತಿಂಗಳಿರುವಾಗ, ಬನಾರಸಿಗೆ ಹೋಗಿ ಇರಬೇಕಾದ ಸಂದರ್ಭದಲ್ಲಿ ಪತಿಯು ಆಕ್ಷೇಪಣೆ ಮಾಡಿದರೂ, ಮೆಟ್ರಿಕ್, ಪರೀಕ್ಷೆಗೆ ಕೂರುವ ನಿರ್ಧಾರ ಮಾಡಿದ್ದರು. ಮೆಟ್ರಿಕ್ ಪರೀಕ್ಷೆಗಾಗಿ ಇತಿಹಾಸ, ಭೂಗೋಳ ಅಂಕಗಣಿತವನ್ನು ಕಲಿತರು.

ಮಕ್ಕಳು ಮನೆ, ಗಂಡ, ಹೀಗೆ ಎಲ್ಲವನ್ನು ನೋಡಿಕೊಳ್ಳುತ್ತಲೇ ಕಲಿಯುತ್ತ ಸಾಗಿದರು. ಇದರ ನಡುವೆಯೇ ಮಗ ಆತ್ಮರಾಮನು ಒಂದು ತಿಂಗಳ ಕಾಲ ಜ್ವರದಲ್ಲಿ ಮಲಗಿರುವಾಗ ತನ್ನೆಲ್ಲಾ ಓದನ್ನು ಒಂದು ತಿಂಗಳ ತನಕ ಬಿಡಬೇಕಾಗಿ ಬಂದರೂ, ಅದರಿಂದ ವಿಚಲಿತರಾಗದೇ ಮತ್ತೆ ಒದನ್ನು ಮುಂದುವರೆಸಿದರು. ಆತ್ಮರಾಮನ ಯೋಗಕ್ಷೇಮ ನೋಡಿಕೊಂಡ ಬಗ್ಗೆ ತನ್ನ ಕರ್ತವ್ಯ ಪ್ರಜ್ಞೆಯನ್ನು ಪ್ರಶಂಶಿಸಿ ಡಾಕ್ಟರ್ ಸರ್ಟಿಫಿಕೇಟನ್ನು ನೀಡಿದರು. ಆ ಕಾಲಕ್ಕೆ ಮೆಟ್ರಿಕ್ ಪರೀಕ್ಷೆಗೆ ಕುಳಿತುಕೊಳ್ಳುವವರಿಗೆ ಅಗತ್ಯವಾಗಿ ಡಾಕ್ಟರ್ ಸರ್ಟಿಫಿಕೇಟ್ ಬೇಕಾದಾಗ ಅದನ್ನು ತಮ್ಮ ಸಹನಶೀಲತೆ, ಮಗುವಿನ ಬಗೆಗೆ ಕಾಳಜಿ ತೋರಿಸುವ ಮೂಲಕ ಪಡೆದುಕೊಳ್ಳುತ್ತಾರೆ.

ಸಾಕಷ್ಟು ಶ್ರಮದ ಮೂಲಕ ೧೯೪೧ರಲ್ಲಿ ಹದಿನಾರು ವರ್ಷದ ಮಗ ಗುರುದತ್ತನ ಜೊತೆಗೆ ಕಲ್ಕತ್ತಾ ವಿಶ್ವವಿದ್ಯಾನಿಲಯದ ಮೆಟ್ರಿಕ್ ಪರೀಕ್ಷೆಯನ್ನು ಮೂರನೇ ಡಿವಿಜನ್ನಿನಲ್ಲಿ ಪಾಸುಮಾಡಿರು. ಇವೆಲ್ಲವನ್ನೂ 'ಟ್ಯೂಶನ್' ಹೇಳುತ್ತಾ ಶಾಲೆಯಲ್ಲಿ

ಶಿಕ್ಷಕಿಯ ಕೆಲಸ ಮಾಡುತ್ತ ಗಳಿಸಿ, ಐದು ಮಕ್ಕಳ ಸಂಸಾರ ನಡೆಸುತ್ತಾ, ಸಾಧಿಸುತ್ತಾ ಹೊರಟರು. ಸತತ ಹೋರಾಟದ ನಡುವೆಯೂ ಹಲವು ಪರೀಕ್ಷೆಗಳನ್ನು ಪಾಸುಮಾಡಿದರು. ಇವೆಲ್ಲದರ ನಂತರ ವಾಲ್ಟಿರ್ ಥಾಮಸ್ ಕಂಪೆನಿಯವರ ಭಾಷಾಂತರ ಕೆಲಸ, ಹೀಗೆ ದಿನವೆಂದರೆ ಕೆಲಸದ ನಂತರ ಕೆಲಸ, ಸವಾಲುಗಳ ನಡುವೆಯೇ ವಾಸಂತಿಯವರು ಬರೆದರು. ಅನುವಾದ, ಕಥೆಗಳು ಹೀಗೆ ಬೇರೆ ಬೇರೆ ಪ್ರಕಾರಗಳಲ್ಲಿ ಹಲವು ದಶಕಗಳಲ್ಲಿ ನಿರಂತರವಾಗಿಯಲ್ಲದಿದ್ದರೂ ಆಗಾಗ್ಗೆ ಬರೆಯುತ್ತಾ ಬಂದರು.

ಎಲ್ಲ ಕೆಲಸದ ನಡುವೆಯೂ ಬರೆಯುವ ಓದುವ ಆಸಕ್ತಿಯನ್ನು ಕಳೆದುಕೊಳ್ಳದೇ ಮುಂದುವರೆಸಿದರು. ಮನೆ ಕೆಲಸ, ಗಂಡ, ಮಕ್ಕಳು ಎಲ್ಲರನ್ನೂ ನೋಡಿಕೊಳ್ಳುತ್ತಲೇ ಓರ್ವ ಮಹಿಳೆಯೊಳಗಿನ ಲೇಖಕಿ ಹೊರಬರಲು ಅದೆಷ್ಟು ಒದ್ದಾಡಬೇಕಾಗುತ್ತದೆ ಎಂಬ ಕಟುಸತ್ಯ ವಾಸಂತಿ ಅವರ ಜೀವನದಿಂದ ತಿಳಿದುಬರುತ್ತದೆ.

ಎಲ್ಲವೂ ಅನುಕೂಲಕರವಾಗಿದ್ದಾಗ, ಉತ್ತೇಜಕ ವಾತಾವರಣವನ್ನಷ್ಟು ಕಲ್ಪಿಸಿಕೊಟ್ಟಾಗ ಯಶಸ್ಸಿನತ್ತ ಮುನ್ನಡೆಯುವುದಾಗಲಿ, ಸಾಧನೆಗೆಯ್ಯುತ್ತಲೇ ಹೋಗುವುದಾಗಲಿ ಆಶ್ಚರ್ಯದ ಮಾತಲ್ಲ. ಆದರೆ ಎದೆ ನಡುಗಿಸುವ ಪ್ರತಿಕೂಲ ವಾತಾವರಣದಲ್ಲಿಯೂ ಸಮತೋಲನ ಕಳೆದುಕೊಳ್ಳದೆ ಕಷ್ಟಪರಂಪರೆಗಳ ಪ್ರಹಾರಕ್ಕೆ ತಮ್ಮನ್ನು ಒಡ್ಡಿಕೊಂಡು ಸಾಧನೆಯ ಪಥದಿಂದ ವಿಚಲಿತರಾಗದೇ ಯಶಸ್ಸನ್ನು ಸಾಧಿಸಿರುವುದು. ನಿಜಕ್ಕೂ ವಾಸಂತಿ ಅವರು ಜೀವನದ ಹೋರಾಟದಲ್ಲಿ ನಡೆಸಿರುವ ಸಾಹಸವೇ ಎನ್ನಬಹುದು.

ಅಕ್ಷರಸ್ಥ ವಂಶದಲ್ಲಿ ಜನಿಸಿದ ಅನುಪಮಾ ಅವರು ಸಾಕಷ್ಟು ವಿದ್ಯಾಭ್ಯಾಸವನ್ನು, ಶಿಸ್ತು, ಪ್ರಾಮಾಣಿಕತೆಯನ್ನು ತನ್ನ ಕುಟುಂಬದವರಿಂದ ಪಡೆದುಕೊಂಡಿರುವ ಅನುಪಮಾರಲ್ಲಿದ್ದ ಮೂಲಸತ್ವ, ಧೀಶಕ್ತಿ ಅಧ್ಯಯನ, ಸತತ ಪರಿಶ್ರಮ, ಸಂವೇದನಾಶೀಲತೆಗಳು ಅವರನ್ನು ಯಶಸ್ಸಿನ ಶಿಖರಕ್ಕೆ ಕೊಂಡೊಯ್ದವು ಎನ್ನುವುದನ್ನು ಮರೆಯಲಾಗುವುದಿಲ್ಲ. ಎಲ್ಲ ಗೊಂದಲಗಳ ನಡುವೆಯೂ ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲಿ ಮೊದಲನೆಯ ದರ್ಜೆಯಲ್ಲಿ ಉತ್ತೀರ್ಣರಾದ ಅನುಪಮಾರ, ಮೆಡಿಕಲ್ ಕಾಲೇಜು ಸೇರುವ ಇಚ್ಛೆಯನ್ನು ನೆರವೇರಿಸುವ ಆರ್ಥಿಕ ಪರಿಸ್ಥಿತಿ ಶಿವರಾಮಯ್ಯ-ನವರದಾಗಿರಲಿಲ್ಲ. ತಮ್ಮ ಅಜ್ಜಿ ಅಕ್ಕಮ್ಮನವರ ಸಹಾಯದಿಂದಾಗಿ ಅನುಪಮಾರ ಆಸೆ, ಕನಸುಗಳು ಸಾಕಾರಗೊಂಡವು.

ತಂದೆ ಶಿವರಾಮಯ್ಯನವರಿಗೆ ಬೆಂಗಳೂರಿಗೆ ವರ್ಗವಾದಾಗ ಅನುಪಮಾ ಮಲ್ಲೇಶ್ವರದ ಹೈಸ್ಕೂಲಿಗೆ ಸೇರಿ ೧೯೪೪ರಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಪ್ರಥಮದರ್ಜೆ ಪಡೆದು ಉತ್ತೀರ್ಣರಾದರು. ನಂತರ ಮಹಾರಾಣಿ ಕಾಲೇಜಿನಲ್ಲಿ ಕೆಮಿಸ್ಟ್ರಿ, ಬಾಟನಿ, ಝೂಆಲಾಜಿ ವಿಷಯಗಳನ್ನು ತೆಗೆದುಕೊಂಡು ವಿದ್ಯಾಭ್ಯಾಸ ಮುಂದುವರೆಸಿದರು. ಗಣಿತದಲ್ಲಿ ಅವರಿಗೆ ಹೆಚ್ಚು ಆಸಕ್ತಿಯಿರಲಿಲ್ಲ. ಕಾಲೇಜಿನ ವಿದ್ಯಾಭ್ಯಾಸ ಅನುಪಮಾರ ಕನ್ನಡ ಸಾಹಿತ್ಯದ ಓದಿಗೆ ಮತ್ತಷ್ಟು ಸಹಾಯಮಾಡಿತು ಮತ್ತು ಅವರ ಮುಂದಿನ ಜೀವನಕ್ಕೆ ಅಸ್ತಿಭಾರವನ್ನು ಹಾಕಿತು.

ಕನ್ನಡದಲ್ಲಿ ಪ್ರಥಮಸ್ಥಾನ ಪಡೆದ ಅನುಪಮಾರಿಗೆ, ಉಪನ್ಯಾಸಕಿ ಚಂಪಾಬಾಯಿ ಸಾಹಿತ್ಯ ಅಧ್ಯಯನ ಮಾಡುವಂತೆ ತಿಳಿಸಿದಾಗ, ಸಾಹಿತ್ಯದ ವಿದ್ಯಾರ್ಥಿಯಾಗುವುದೇ, ತಾನು ನಂಬಿದ್ದ ವೈದ್ಯಕೀಯ ಕೋರ್ಸನ್ನು ಆಯ್ಕೆ ಮಾಡಿಕೊಳ್ಳುವುದೇ ಎಂಬ ದ್ವಂದ್ವ ಅನುಪಮಾರಿಗೆ ಸಾಹಿತ್ಯದ ವಿದ್ಯಾರ್ಥಿನಿಯಾಗದೆಯೇ ಸಾಹಿತ್ಯ ಕ್ಷೇತ್ರದ ಉನ್ನತ ಶಿಖರವನ್ನೇರಿ ವೈದ್ಯೆಯೂ ಆಗಿ, ಸವ್ಯಸಾಚಿಯಂತೆ ಯಶಸ್ವಿಯಾದದ್ದು ಅನುಪಮಾರ ಹೆಗ್ಗಳಿಕೆ ಚಿಕ್ಕಲಾಲ್‌ಬಾಗಿನಲ್ಲಿ ಕೇಳಿದ ಜಯಪ್ರಕಾಶ ನಾರಾಯಣರ ಭಾಷಣ ಅನುಪಮಾರ ಮೇಲೆ ಗಾಢವಾದ ಪರಿಣಾಮ ಬೀರಿ, ದೇಶದ ಪ್ರಚಲಿತ ಸಮಸ್ಯೆಗಳ ಬಗೆಗೆ ಚಿಂತಿಸುವಂತೆ ಅವರನ್ನು ಪ್ರೇರೇಪಿಸಿತು. ಇದೇ ಸಂದರ್ಭದಲ್ಲಿ, ಕಮ್ಯುನಿಸ್ಟ್ ಪಕ್ಷದಲ್ಲಿದ್ದ ಸರೋಜಾಳ ಪರಿಚಯವಾಗಿ ಸ್ಟೂಡೆಂಟ್ಸ್ ಫೆಡರೇಷನ್‌ಗೆ ಹೋಗಲಾರಂಭಿಸಿದ ಅನುಪಮಾ ಶಾಂತಿ ಸಮಿತಿಯ ಸದಸ್ಯೆಯೂ ಆದರು. ಮಗಳ ಈ ಚಟುವಟಿಕೆಗಳು ತಂದೆಗೆ ಇಷ್ಟವಾಗಲಿಲ್ಲವಾದರೂ, ಮಗಳು ಯಾವ ಚಟುವಟಿಕೆಗಳನ್ನು ನಿಲ್ಲಿಸಲಿಲ್ಲ. ಬರವಣಿಗೆ ಕೂಡ ಮುಂದುವರೆದಿತ್ತು. ತಮ್ಮ ಮನೆಯ ಬಲಭಾಗದಲ್ಲಿದ್ದ ಹರಿಜನ ಕೇರಿಯವರ ಬದುಕು ಬವಣೆಗಳನ್ನು ಕಂಡು "ಮಣ್ಣು ದಿಬ್ಬದ ಮೇಲೆ" ಎನ್ನುವ ಕಥೆಯನ್ನು ಬರೆದರು. ವಿದ್ಯಾರ್ಥಿ ದೆಸೆಯಿಂದಲೇ ಅನುಪಾದಲ್ಲಿದ್ದ ಎಡಪಂಥದ ಒಲವು, ಶೋಷಣೆಯ ಬಗೆಗೆ ಪ್ರತಿಭಟನೆ, ಬಡತನದ ಬಗೆಗೆ ಅನುಕಂಪ, ತಮಗೆ ಸರಿ ಎನಿಸಿದ್ದನ್ನು ಎದೆಗುಂದದೆ ಕಾರ್ಯಗತಗೊಳಿಸುವ ಛಲ ಮತ್ತು ಅವಿರತ ಸಾಧನೆಗಳನ್ನು ಕಾಣಬಹುದಾಗಿದೆ.

"ಶಿವರಾಮಯ್ಯನವರಿಗೆ ಏಳು ಜನ ಮಕ್ಕಳು, ಸರಕಾರಿ ಕೆಲಸ, ಸಂಬಳ ಕಡಿಮೆ ಬೇರೆ ಯಾವ ಆದಾಯವಿಲ್ಲ. ಹಾಗಾಗಿ ನೇಕಾರರ ಮನೆತನದಲ್ಲಿ ಹುಟ್ಟಿದ ಮಗುವಾದರೂ ಜರತಾರಿ ಲಂಗ ಗಗನ ಕುಸುಮವಾಗಿತ್ತು. ಮೆಡಿಕಲ್ ಓದುತ್ತಿದ್ದಾಗ ಕೂಡ ಅನುಪಮಾ ಅವಳ ಬಳಿ ಇದ್ದುದು ನಾಲ್ಕೈದು ಹತ್ತಿ ಸೀರೆಗಳು, ಗೆಳತಿಯರೋ, ಬೆಲೆ ಬಾಳುವ ವಿವಿಧ ನಮೂನೆಯ ಸೀರೆಗಳನ್ನು ಉಡುತ್ತಿದ್ದರು. ಗೆಳತಿಯರು

"ಹೋಟೆಲ್ಲಿಗೆ ಹೋಗೋಣ" ಎಂದರೆ ಇವರು ಹಸಿವಿಲ್ಲವೆಂದು ನಿರಾಕರಿಸುತ್ತಿದ್ದರು. ಹೋಗದಿರಲು ನಿಜವಾದ ಕಾರಣ ಹಣವಿಲ್ಲದಿರುತ್ತಿದ್ದುದು ಹಾಸಿಗೆಯ ಮೇಲೆ ಧೂಳು ಬೀಳುತ್ತದೆ. ಬಂದು ಬೆಡ್‌ಸ್ಪ್ರೆಡ್ ಹಾಕು ಎಂದು ಗೆಳತಿಯರು ಹೇಳಿದಾಗ, ಇವರ ಬಳಿಯಿದ್ದ ಕಂಬಳಿಯನ್ನು ಹಾಸಿಗೆಯ ಮೇಲೆ ಹಾಕಿದಾಗ, ಆ ಗೆಳತಿಯರಿಗೆ ನಗು, ಅಧ್ಯಯನದಲ್ಲಿ ಮುಂದಾಗಿದ್ದರು. ಈ ಆರ್ಥಿಕ ಅಸಮಾನತೆ ಅನುಪಮಾರಿಗೆ ಸ್ವಲ್ಪ ನೋವು ಕೊಟ್ಟಿತಂತೆ".[೧] ಇಂತಹ ಪರಿಸ್ಥಿತಿಯಲ್ಲಿ ವಿದ್ಯಾಭ್ಯಾಸ ಮಾಡಿ ಅನುಪಮಾ ಸಾಧಿಸಿದ್ದನ್ನು ಕಂಡಾಗ, ವ್ಯಕ್ತಿಜೀವನದಲ್ಲಿ ಮಹತ್ತರವಾದದ್ದನ್ನು ಸಾಧಿಸಲು, ಹೊರಗಿನ ಅನುಕೂಲಗಳಿಗಿಂತ, ಮನಸ್ಸಿನೊಳಗಿನ ದೃಢನಿಶ್ಚಯ, ಸತತ ಪರಿಶ್ರಮಗಳು ಮುಖ್ಯವೆಂಬ ಅಂಶ ಸ್ಪಷ್ಟವಾಗುತ್ತದೆ.

ಎಳೆವಯಸ್ಸಿನಲ್ಲಿನ ಹಾಗೂ ವಿದ್ಯಾಭ್ಯಾಸ ಮಾಡುವಾಗಿನ ಇಂತಹ ಹಲವು ಅನುಭವಗಳು, ಅವರು ಎಡಪಂಥದ ಸಿದ್ಧಾಂತಗಳೆಡೆಗೆ ಆಕರ್ಷಿತರಾಗಲು ಮತ್ತು ಸಮಾಜದಲ್ಲಿನ ಬಡವರ ಬಗೆಗೆ ಹೆಚ್ಚಾಗಿ ಸ್ಪಂದಿಸಲೂ ಕಾರಣಗಳಾಗಿರಬಹುದು. ಬೇಲೂರಿನಿಂದ ತಂದೆಗೆ ಹೊಸಕೋಟೆಗೆ ವರ್ಗವಾದಾಗ ಮತ್ತೆ ಶಾಂತಿಯ ಬದಲಾವಣೆಯಾಯಿತು. ಹುಡುಗಿಗೆ, ಮಾಧ್ಯಮಿಕ ಶಾಲೆಯಲ್ಲಿದ್ದಾಗಲೇ ಕಥೆ ಕಾದಂಬರಿಗಳನ್ನೋದುವ ಹವ್ಯಾಸ ಬೆಳಸಿಕೊಂಡಿದ್ದ ವೆಂಕಟಲಕ್ಷ್ಮಿ, ಹೈಸ್ಕೂಲಿನಲ್ಲಿ ಓದುತ್ತಿದ್ದಾಗಲೇ ಕಥೆ ಬರೆಯಲಾರಂಭಿದ್ದಳು. 'ಆನಂದಮಠ' ಮುಂತಾದ ಅನೇಕ ಕಾದಂಬರಿಗಳನ್ನು ಓದಿ ಮುಗಿಸಿದ್ದ ಹುಡುಗಿಗೆ "ಹೈಸ್ಕೂಲಿನ ಕೇಶವಮೂರ್ತಿ ಮಾಸ್ತರರು ಮಿರ್ಜಿ ಅಣ್ಣಾರಾಯರ 'ನಿಸರ್ಗ' ಕಾದಂಬರಿಯನ್ನು ಓದುವಂತೆ ಸಲಹೆಮಾಡಿದರು. ಕೇಶವಮೂರ್ತಿಗಳು ವೆಂಕಟಲಕ್ಷ್ಮಿಯ ಮೆಚ್ಚಿನ ಗುರುಗಳು ಕಥೆ ಕಾದಂಬರಿಗಳನ್ನು ಓದುತ್ತಾ, ಈ ಹುಡುಗಿಯ ಮನಸ್ಸಿನಲ್ಲಿ ತಾನು ಕಥೆ ಬರೆಯಬೇಕು. ದೊಡ್ಡ ಸಾಹಿತಿಯಾಗಬೇಕು ಎನ್ನುವ ತೀವ್ರ ಇಚ್ಛೆ ಮೂಡಿತು"[೨] "ಹಾರೈಸಿ ಹಾರೈಸಿ ಹಾರಿದುದೇ ನೀರಧಿಯ ಮೀನ" ಎನ್ನುವ ಕವಿವಾಣಿಯಂತೆ ವೆಂಕಟಲಕ್ಷ್ಮಿ ತನ್ನ ಹದಿಮೂರನೆಯ ವಯಸ್ಸಿನಲ್ಲಿ, ತನ್ನ ಬರಹಗಳ ಮೊದಲ ಹೆಜ್ಜೆಯಾಗಿ 'ನಯನಾ' ಮತ್ತು 'ಶುಭಾ' ಎಂಬ ಕೈಬರಹದ ಕಥಾಸಂಕಲನಗಳನ್ನು ಹೊರತಂದಳು. ಓದಲು ಪ್ರೋತ್ಸಾಹಿಸಿದ ತಂದೆ ಮಗಳು ಕಥೆ ಬರೆಯುವುದನ್ನು ಬೆಂಬಲಿಸಲಿಲ್ಲ. ಆದರೂ ಹುಡುಗಿ ಕಥೆ ಬರೆಯುವುದನ್ನೇನೋ ನಿಲ್ಲಿಸಲಿಲ್ಲ. ಹೀಗೆ ಅನುಪಮಾ ಅವರಿಗೆ ಬರವಣಿಗೆ ಎನ್ನುವುದು ಮೀನಿಗೆ ಈಜಿನಂತೆ ಸಹಜವಾಗಿ ಬಂದಿತು.

---

೧. ನೆನಪು ಸಿಹಿಕಹಿ, ಅನುಪಮಾ ನಿರಂಜನ, ಪು. ೭೦.

೨. ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು – ಸಾರಾ ಅಬೂಬಕ್ಕರ್, ಪು. ೮೮.

ವ್ಯಾಸಂಗದ ಆರಂಭದ ದಿನಗಳಿಂದಲೇ ವೈದ್ಯಕೀಯ ಬದುಕಿಗೂ ತಮ್ಮ ಬರಹಕ್ಕೂ ತಳುಕು ಹಾಕಿಕೊಂಡರು. ವೈದ್ಯಕೀಯ ವೃತ್ತಿ ಮತ್ತು ಸಾಹಿತ್ಯದ ಮೇಳೈಕೆ ಕಷ್ಟವೆಂದು ತಿಳಿದಿದ್ದರೂ ಮುಂದುವರೆಸಿಕೊಂಡು ಹೋದರು. ವೈದ್ಯ ವೃತ್ತಿಯಲ್ಲಿ ತೊಡಗಿದ ಅನುಪಮಾರವರಿಗೆ ನೂರಾರು ಜನರ ಸಂಪರ್ಕವಿತ್ತು. ಅದು ಬರವಣಿಗೆಗೆ ಸ್ಫೂರ್ತಿಯಾಯಿತು. ವೃತ್ತಿ ಮತ್ತು ಪ್ರವೃತ್ತಿ ಎಂಬುದು ತಿಳಿಯುವಷ್ಟರಮಟ್ಟಿಗೆ ಎರಡನ್ನು ಮೇಳೈಸಿಕೊಂಡರು.

ಎಷ್ಟೋ ಜನ ಮಹಿಳೆಯರಿಗೆ ಮದುವೆಯಾದ ಮೇಲೆ ತಮ್ಮ ಕಲೆ/ಸಾಹಿತ್ಯಾಸಕ್ತಿಗಳನ್ನು ಮುಂದುವರೆಸಿಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ಸಂಸಾರದ ಜವಾಬ್ದಾರಿ ಹಾಗೂ ಒತ್ತಡಗಳು, ಗಂಡನ ಮನೆಯವರ ಉದಾಸೀನತೆ, ಪ್ರಕಾಶನದ ಸಮಸ್ಯೆ, ಒಳಗೂ ಹೊರಗೂ ಇರಬಹುದಾದ ಪ್ರತಿಕೂಲ ವಾತಾವರಣಗಳಿಂದ ಅನೇಕ ಪ್ರತಿಭಾವಂತೆಯರ ಬರವಣಿಗೆ ವಿವಾಹನಂತರ ನಿಂತು ಹೋಗುತ್ತದೆ. ಆದರೆ ಅನುಪಮಾರವರಿಗೆ ವೈದ್ಯಕೀಯ ಕೆಲಸದ ಒತ್ತಡವಿದ್ದರೂ ಮನೆಯಲ್ಲಿ ಸಾಹಿತ್ಯಕ್ಕೆ ಪರಿಸರ ಇದ್ದುದರಿಂದ ಬರವಣಿಗೆ ಮುಂದುವರೆಸಿಕೊಂಡು ಹೋಗಲು ಸಾಧ್ಯವಾಯಿತು. ಮುಖ್ಯವಾಗಿ ಪತಿ ನಿರಂಜನರ ಒತ್ತಾಸೆ ಅನುಪಮಾರವರಿಗೆ ದೊರೆಯಿತು.

ಉದ್ಯೋಗಸ್ಥೆಯಾಗಿದ್ದುಕೊಂಡು ಮನೆಯನ್ನು ನೋಡಿಕೊಳ್ಳುತ್ತಾ ಬರಹವನ್ನು ನಿಭಾಯಿಸಲು ಅನುಪಮಾರಿಗೆ ಸಾಧ್ಯವಾದುದು ನಿರಂಜನರಿಂದಲೇ "ನಿರಂಜನರು ತಮ್ಮ ಕೆಲಸ ತಾವು ಮಾಡಿಕೊಳ್ಳುವ ಸ್ವಭಾವದವರು. ಮಾಮೂಲಾಗಿ ಹೆಂಡತಿ ಮಾಡುವಂತಹ ಯಾವ ಸೇವೆಯನ್ನು ನಾನು ಅವರಿಗೆ ಮಾಡಲಿಲ್ಲ. ನಾನು ಕ್ಲಿನಿಕಿಗೆ ಹೋದಾಗ ಮಕ್ಕಳು ಸಣ್ಣವರಿದ್ದಾಗ ನಿರಂಜನ ಅವರನ್ನು ನೋಡಿಕೊಂಡದ್ದನ್ನು ಮರೆಯುವಂತಿಲ್ಲ. ಅವರು ನಿಭಾಯಿಸುತ್ತಿದ್ದರು?" ಎಂದು ಹೇಳುತ್ತಾರೆ. ನಿರಂಜನರ ಈ ಒತ್ತಾಸೆಯಿಂದಾಗಿ ಅನುಪಮಾ ಸಾಹಿತ್ಯ ಲೋಕದಲ್ಲಿ ಸಾಧನೆಗೈಯ್ಯಲು ಮಿನುಗಲು ಸಾಧ್ಯವಾಯಿತು.

ವೈದ್ಯೆಯಾಗಿ ದಿನವೂ ವಿವಿಧ ಬಗೆಯ ರೋಗಿಗಳನ್ನು ನೋಡುತ್ತಿದ್ದರು. ಅದರೊಡನೆ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದರು. ಅವರ ದುಃಖ ಸಂತೋಷಗಳನ್ನು ಹತ್ತಿರದಿಂದ ಕಂಡಿದ್ದರಿಂದ ಅವರ ಬರವಣಿಗೆ ಸುಲಭವಾಯಿತು. 'ಸಂಕೋಲೆ-ಯೊಳಗಿಂದ' ಕಾದಂಬರಿ, ವೈದ್ಯಕೀಯ ಕಾಲೇಜು ಮತ್ತು ಅಸ್ಪತ್ರೆಗಳ ವಾಸ್ತವ ಲೋಕವನ್ನು ಒಳಗೊಂಡಿದ್ದು ಡಿಸೆಕ್ಷನ್ ಥಿಯೇಟರ್‌ನಲ್ಲಿ ಮಲಗಿದ್ದ ಹೆಣಗಳು, ಅವನ್ನು ಕುಯ್ಯುವ ವೈದ್ಯಕೀಯ ವಿದ್ಯಾರ್ಥಿಗಳು, ಅವರ ಅಂತರಂಗ, ಆಸ್ಪತ್ರೆಯಲ್ಲಿನ ಹೆರಿಗೆಗಳ

ನೋವು, ರಕ್ತಸ್ರಾವ, ಡಾಕ್ಟರುಗಳ ಅನಾಸ್ಥ ತಾರತಮ್ಯ ಭಾವನೆಗಳು ಇವನ್ನೆಲ್ಲಾ ಹಸಿಹಸಿಯಾಗಿ ಕಾದಂಬರಿಯಲ್ಲಿ ತರಲು ಸಾಧ್ಯವಾದದ್ದು ನಾನೊಬ್ಬ ವೈದ್ಯಕೀಯ ವಿದ್ಯಾರ್ಥಿನಿಯಾದ್ದರಿಂದ" ಇದರಿಂದ ಅನುಪಮಾರವರು ಬದುಕಿಗೆ ತೀವ್ರವಾಗಿ ಸ್ಪಂದಿಸುತ್ತಿದ್ದರು ಹಾಗೂ ಆದ ಅನುಭವದ ಮೂಸೆಯಲ್ಲಿ ಪಕ್ವವಾದ ಮನಸ್ಸಿನಿಂದ ಹರಿದುಬಂದ ಅವರ ಸಾಹಿತ್ಯ ಉತ್ಕ್ರಮವಾಯಿತು.

ಜೀವನದಲ್ಲಿ ಎಂದಿಗೂ ಸೋಲನ್ನೊಪ್ಪಿಕೊಳ್ಳಬಾರದು ಎಂದು ನಿರಂಜನರು ಪೀಡಿತರಾದಗಲೂ, ಮೂರು ಬಾರಿ ಮಾರಕವಾದ ಕ್ಯಾನ್ಸರ್ ಶಸ್ತ್ರಕ್ರಿಯೆಗೆ ಒಳಗಾದರೂ, ಧೃತಿಗೆಡದೆ ತಮ್ಮ ನೋವನ್ನು ಇತರರಿಗೆ ಹೇಳಿ ಬೇಸರವನ್ನು ಮಾಡದೆ, ಬಂದ ಸಂಕಷ್ಟಗಳನ್ನು ಎದುರಿಸಿದರು. ಯಾವುದೇ ಶಕ್ತ ಪ್ರಯತ್ನಕ್ಕೆ ಪೋಷಣೆಬೇಕು ಅಂದರಂತೆ. ನಿರಂಜನರು ಅನುಪಮಾರಿಗೆ ಎಲ್ಲಾ ರೀತಿಯಲ್ಲೂ ಉತ್ತೇಜನವನ್ನು ನೀಡಿದರು. ನಿರಂಜನರಂಥ ಸುಪ್ರಸಿದ್ಧ ಸಾಹಿತಿಯ ಪತ್ನಿಯಾಗಿ, ಪತಿಯ ಜನಪ್ರಿಯ ಒಡನಾಟಗಳಲ್ಲಿ ಪಾಲ್ಗೊಳ್ಳುತ್ತಲೇ ತಾವು ಓರ್ವ ಸಾಹಿತಿಯಾಗಿ ತಮ್ಮದೇ ಆದ ಸ್ವತಂತ್ರ ಸ್ಥಾನವನ್ನು ಪಡೆದುಕೊಂಡರು.

ಅಧ್ಯಾಯ – ೫

ಮಹಿಳಾ ಆತ್ಮಕಥೆಗಳಲ್ಲಿ ಸಾಂಸ್ಕೃತಿಕ ನೆಲೆ

ಭಾಷೆ ಮತ್ತು ಶೈಲಿ

ಶಾರದಾ ಹೆಮ್ಮಿಗೆಯವರ ಆತ್ಮಕಥೆ 'ಬದುಕು ಕೊಟ್ಟಿದ್ದು ಕಲಿಸಿದ್ದು' ಇದು ಕಾದಂಬರಿಯಂತೆ ಓದಿಸಿಕೊಂಡು ಹೋಗುತ್ತದೆ. ಅವರು ಯಾವುದನ್ನು ಬರಿ ನಿರೂಪಣೆ ಮಾಡುವುದಿಲ್ಲ. ಚಿತ್ರ ಬಿಡಿಸಿದಂತೆ ಬದುಕನ್ನು ತೆರೆದಿಡುತ್ತಾರೆ. ಮನಸ್ಸಿನ ಪದರುಗಳನ್ನು ಬಿಚ್ಚುತ್ತ ಹೋಗುತ್ತಾರೆ.

ಲೇಖಕಿಯ ಶೈಲಿ ಸರಳವಾಗಿದೆ, ಸಹಜವಾಗಿದೆ ಹಾಗೂ ಪರಿಣಾಮಕಾರಿ-ಯಾಗಿದೆ. ಪ್ರೊ. ಚಂದ್ರಶೇಖರಪಾಟೀಲರು ಅಭಿಪ್ರಾಯಪಟ್ಟಿರುವಂತೆ ಬಾಳ ಛಂದೈತಿ, ಟಿಲಿಪೋನಿನ್ಯಾಗ ಬಾಳ್ವೋತ್ತು ಎದೀ ಮಾತು ಹೇಳಿಕೊಂಡಾಂಗನಿಸ್ತ್ಯು ಎನ್ನುವ ನುಡಿಯಲ್ಲಿ ಸತ್ಯವಿದೆ. ಈ ಆತ್ಮಕಥನ ಒಂದು ಕಾದಂಬರಿಯಂತೆಯೇ ಕುತೂಹಲ ಮೂಡಿಸುತ್ತಾ, ಸರಳವಾಗಿ ಓದಿಸಿಕೊಂಡು ಹೋಗುತ್ತದೆ. ಭಾಷೆ ಕೂಡ ತುಂಬಾ ಸಹಜವಾಗಿದೆ. ಯಾವುದೇ ಕ್ಲಿಷ್ಟಪದಗಳಾಗಲಿ, ಗೊಂದಲದ ಹೇಳಿಕೆಗಳಾಗಲಿ ಎಲ್ಲಿಯೂ ಕಾಣುವುದಿಲ್ಲ. ತಾವು ಕಂಡದ್ದನ್ನು ತಮಗನಿಸಿದ್ದನ್ನು ನೇರವಾಗಿ ಮತ್ತು ಅಷ್ಟೇ ಲವಲವಿಕೆಯಿಂದ ಬರೆಯುತ್ತಾ ಹೋಗಿದ್ದಾರೆ.

ಚಿಕ್ಕಳ್ಳಿಯನ್ನು ವರ್ಣಿಸುವಾಗ, ಕಾವೇರಿ ಕಪಿಲೆಯರ ಸಂಗಮವನ್ನು ಹೇಳುವಾಗ ಲೇಖಕಿಯ ಕಾವ್ಯಭಾಷೆ ಕುತೂಹಲಮೂಡಿಸುತ್ತದೆ. ಬದುಕಿನ ಅವಿಭಾಜ್ಯ ಅಂಗವಾಗಿತ್ತು.

"ದಿನಾ ತಲಕಾಡಿಗೆ ಹೋಗಿಬರುತ್ತಾ, ಆರು ತಿಂಗಳುಗಳಿಂದಂತೂ ಹೊಳೆಯ ನಮ್ಮ ಸಂಬಂಧ ಇನ್ನೂ ಅಧಿಕವಾಗಿತ್ತು. ಧುಮ್ಮಿಕ್ಕುವ ಜಲಧಾರೆ, ಬೇಸಿಗೆಯಿಂದ ಸ್ವಲ್ಪ ಸೊರಗಿತ್ತು. ಸೂರ್ಯೋದಯಕ್ಕಾಗಿ ಕಟ್ಟೆಯ ಹಿಂಬದಿ ಕೆಂಪಾಗಿ ರಂಗುಗೊಂಡಿದ್ದು ಮುಂಜಾನೆಯ ಕಾಮನ ಬಿಲ್ಲಿನಂತಿತ್ತು"[೧]

ಇಂತಹ ಬರವಣಿಗೆಯನ್ನು ಗಮನಿಸಿದಾಗ, ಶಾರದ ಹೆಮ್ಮಿಗೆಯವರೊಳಗಡೆ ಅಡಗಿದ್ದ ಕವಯಿತ್ರಿ ಇಣಿಕಿ ಹಾಕಿ ನೋಡಿದಂತಾಗುತ್ತದೆ. ಇಂತಹ ನವಿರಾದ, ಕಾವ್ಯಾತ್ಮಕವಾದ ಬರವಣಿಗೆ ಅಲ್ಲಲ್ಲಿ ಗಮನಸೆಳೆಯುತ್ತದೆ.

"ಪ್ರಪಂಚದಲ್ಲಿ ನನಗಾರೂ ಇಲ್ಲ. ನಾನು ಒಂಟಿ ಎಂಬ ಕೊರಗಲ್ಲಿ ರಾತ್ರಿ ಎಲ್ಲರೂ ಮಲಗಿದ ನಂತರ ಮುಳು-ಮುಳು ಅಳುತ್ತಾ ಹಳೆಯ ನೆನಪಿನಲ್ಲಿ ರಾತ್ರಿ

---

೧. ಬದುಕು ಕೊಟ್ಟಿದ್ದು ಕಲಿಸಿದ್ದು- ಶಾರದ ಹೆಮ್ಮಿಗೆ, ಪು. ೪೦.

ಕಳೆಯುತ್ತಿದ್ದೆ"[೧] ಎನ್ನುವ ಲೇಖಕಿಯ ಬಾಲ್ಯದ ಈ ಮಾತು ತುಂಬಾ ಮುಗ್ಧತೆಯಿಂದ ಕೂಡಿದೆ. ಈ ಮುಗ್ಧತೆ ಅವರ ಬದುಕಿನುದ್ದಕ್ಕೂ ಉಳಿದುಕೊಂಡಿರುವುದನ್ನು ಕಾಣಬಹುದಾಗಿದೆ, ನಿರಾಭರಣ ಸುಂದರಿಯಂತಿರುವ ಇಲ್ಲಿಯ ಭಾಷೆ ಆಕರ್ಷಕವಾಗಿದೆ.

ಸರಳ ತಿಳಿಹಾಸ್ಯದಿಂದ ಆಕರ್ಷಕವಾಗಿ ಬರೆಯುವ ಕಲೆ ಲೇಖಕಿಗೆ ಸಾಧಿಸಿತ್ತು. ಹಳ್ಳಿಗರಿಗೆ ಸಹಜವಾದ ಅಡ್ಡಹೆಸರು ಇಡುವ ಕುಚೋದ್ಯದ ಪ್ರವೃತ್ತಿಯನ್ನು ವಿನೋದಪೂರ್ಣವಾಗಿ ಬಣ್ಣಿಸಿದ್ದಾರೆ. ಹೊಟ್ಟೆಯಲ್ಲಿ ಗೆಡ್ಡೆ ಬೆಳೆದು ಶಸ್ತ್ರಚಿಕಿತ್ಸೆಯಿಂದ ಗುಣಮುಖವಾದ ರಾಮಣ್ಣನವರಿಗೆ ಗೆಡ್ಡೆರಾಮಣ್ಣನೆಂದೇ ಹೆಸರು ಶಾಶ್ವತವಾಯಿತಂತೆ. ಅಷ್ಟೇ ಅಲ್ಲ, ಮಕ್ಕಳು ಮರಿ–ಮಕ್ಕಳಿಗೂ ಆ ಅಡ್ಡಹೆಸರು. ಮುಂದುವರಿದು ಬಂದಿತಂತೆ! ಕಾಯಂ ಸುಳ್ಳು ಹೇಳುತ್ತಿದ್ದ ಹಿರಿಯರೊಬ್ಬರಿಗೆ ಕುದುರೆಗೊಂಬು, ಕೈಮೈ ತುಂಬಿಕೊಂಡು ಉತ್ತರ ಬೆಳೆದಾಕೆ ದೊಣ್ಣೆ ಪದ್ಮಮ್ಮ, ಕುದುರೆ ಸಾಕುವುದರಲ್ಲಿ ಯಶಸ್ವಿಯಾಗಿ ಕೈಚೆಲ್ಲಿದವರು. ಕುದುರೆ ಸಂಪತ್ತು ತೀರ ಕಡಿಮೆ ಬಟ್ಟೆ ಧರಿಸು–ತ್ತಿದ್ದವರು. ಜೂಲಪ್ಪ ಇತ್ಯಾದಿ ಮುಂದೆ ಈ ಹೆಸರುಗಳಿಂದಳೇ ಆಯಾ ಮನೆತನಗಳು ಗುರುತಿಸಲ್ಪಡಬೇಕೇ? ಅದರಂತೆ ಹಳ್ಳಿಯ ನಾಟಕಗಳಲ್ಲಿ ಸ್ತ್ರೀ ವೇಷಧಾರಿಗಳು ಎದುರಿಸಬೇಕಾಗಿ ಬರುತ್ತಿದ್ದ ಪೇಚಿನ ಪ್ರಸಂಗಗಳನ್ನು ಸ್ವಾರಸ್ಯ ಪೂರ್ಣವಾಗಿ ವರ್ಣಿಸುತ್ತಾರೆ. ಭಾಗವತರು ಬೇಡವೆಂದರೂ ಶೇಷಶಾಯಿ ನಾರಾಯಣನ ಪಾತ್ರವಹಿಸಿದ ಮೊದಲ ಜಾತ್ರೆಯಲ್ಲಿ ಕೊಂಡ ನೀಲಿ ಕನ್ನಡಕ ಹಾಗೂ ಕೈಗಡಿಯಾರಗಳನ್ನು ಪ್ರದರ್ಶಿಸಿದ್ದು, ತೀರ ಮಡಿವಂತಿಕೆಯಿಂದ ಹಳ್ಳಿಗರಿಗೆಲ್ಲಾ ಹೆಚ್ಚಿನ ಮುಜುಗರ ಹುಟ್ಟಿಸಿದ ಶಿಂಗತ್ತೆ, ಹೊಳೆಯಿಂದ ತಂದ ಮಡಿನೀರಿನ ಪಾತ್ರೆಗಳಲ್ಲಿ ಕುರಿ ಹಿಕ್ಕೆ ಬೀಳುವಂತಾದದ್ದು, ಮುಂತಾದ ಸನ್ನಿವೇಶಗಳಲ್ಲಿ ರಂಜಕವಾಗಿದೆ.

ಈ ಕೃತಿಯುದ್ದಕ್ಕೂ "ಡಾವರ್ ಬೀಚ್"ದ ನದಿಯಂತೆ. 'ಫೇರ್ ವೆಲ್ ಟು ಆರ್ಮ್ಸ್'ದ ಮಳೆಯಂತೆ, ಕುವೆಂಪು ಬರಹದ ಮಲೆಯ ಬೆಟ್ಟದ ಸಾಲುಗಳಂತೆ ಬರುವ ಕಾವೇರಿ ನದಿಯ ಲೇಖಕಿಯ ಬದುಕಿನ ಒಟ್ಟು ಗುರಿ ಹಾಗೂ ವಿಶ್ಲೇಷಣೆಯಂತೆ ಹರಿದುಹೋಗುತ್ತದೆ" ಸಾಂಕೇತವಾಗಿರುವ ಕಾವೇರಿ ಅಲ್ಲಲ್ಲಿ ಅವರ ಮನದೊಳಗಿನ ವಿಚಾರಗಳ ಗುಪ್ತಗಾಮಿಯಾದರೆ ಇನ್ನು ಕೆಲವೆಡೆ ಆಕೆ ಭೌತಿಕವಾಗಿ ಬಾಲ್ಯ, ಯೌವ್ವನ ಹಾಗೂ ಮುಪ್ಪಿನ ಕೊನೆಯ ಹಂತದಲ್ಲೂ ಸಂತೈಸುವ ಅಗೋಚರ ಸಖಿ. ಇಲ್ಲಿ ನೆಲಗುಣಗಳಿಗೆ ಹೊಂದಿಕೊಂಡು ಮೌನರೋದನದಂತೆ ಹರಿಯುವ ಈ ಕಾವೇರಿಯೇ ಅವರ ಬದುಕಿನ ಮುಂದಿದ್ದ ಆದರ್ಶವಾಗಿದೆಯೇನೋ. ಈ

---

೧. ಬದುಕು ಕೊಟ್ಟಿದ್ದು ಕಲಿಸಿದ್ದು– ಶಾರದ ಹೆಮ್ಮಿಗೆ, ಪು. ೧೨.

ಜೀವನದಿಯ ಒಳವಿಧಾನ ದೈಹಿಕ, ಮಾನಸಿಕ ಜಾಡ್ಯ ತೊಲಗಿಸುವ ದಿವ್ಯ ಪ್ರೋಕ್ಷಣೆಯಂತಿದ್ದ ಆ ನೀರಿನ ಮಹಿಮೆ ಅರಿಯದ, ಕಾವೇರಿಯನ್ನು ಕೇವಲ ನಲ್ಲಿಯ ನೀರು ಎಂದು ಪರಿಗಣಿಸುವ ಜನಾಂಗ ಬಂದಾಗ ಶಾರದಮ್ಮ ನೊಂದಿದ್ದಾರೆ. ಕಾವೇರಿಯ ಕುರಿತಾದ ಅವರ ಈ ಬರಹದ ಭಾಗ ಅವರ ಪರಿಸರ ಪ್ರಜ್ಞೆಯನ್ನೂ ತೋರಿಸುತ್ತದೆ. ಲೇಖಕಿಯು ಬಡತನವನ್ನು, ಚಿಕ್ಕಂದಿನ ಬವಣೆಯನ್ನು ಹೆತ್ತ ತಾಯಿಯ ನಿಷ್ಠುರ ಸ್ವಭಾವದಿಂದಾಗಿ ಶಾರದಾ ಅವರನ್ನು ಕಾಡುವ ಅನಾಥಪ್ರಜ್ಞೆಯನ್ನು ವಿದ್ಯೆಯ ಹಸಿವೆಯನ್ನು, ದಾಂಪತ್ಯ ಜೀವನದ ನೀರಸ ಬದುಕನ್ನು ತಮ್ಮ ಆತ್ಮಕಥೆಯಲ್ಲಿ ಚಿತ್ರಿಸಿದ್ದಾರೆ. ಇದು ಶಾರದಾ ಅವರೊಬ್ಬರ ಕಥೆಯಲ್ಲ, ಸಾವಿರಾರು ಹೆಂಗಳೆಯರ ಕಥೆಯಾಗಿದ್ದು, ಓದುಗರ ಮನಸ್ಸನ್ನು ಪೂರಾ ಆವರಿಸಿಕೊಂಡುಬಿಡುತ್ತದೆ. ಅವರ ಸರಳ ಭಾಷೆಯ ಸಹಜ ಸುಂದರ ಶೈಲಿ – ಚಿಕ್ಕಳ್ಳಿ ಹತ್ತಿರ ಹರಿಯುವ ಕಾವೇರಿ ನದಿಯಂತೆ ಇದೆ.

'ಜೀವನದ ಹೋರಾಟ' ವಾಸಂತಿಯವರ ಬದುಕಿನ ವಿವರಗಳಿಂದ ತುಂಬಿದ ಆತ್ಮಕಥೆಯಾಗಿದೆ. ಇವರ ಆತ್ಮಕಥೆಯ ಬಹುಮುಖ್ಯ ಆಕರ್ಷಣೆ ಎಂದರೆ ಅವರ ಬರವಣಿಗೆಯ ಶೈಲಿ. ಓದುಗರಿಗೆ ಸುಲಭವಾಗಿ ಅರ್ಥವಾಗುವಂತಿದ್ದು ಸರಳವಾದ ಶೈಲಿಯಲ್ಲಿ ಕಾದಂಬರಿಯಂತೆ ರಚನೆಯಾಗಿದೆ. ವಾಸಂತಿಯವರು ವಿದೇಶಿ ಸ್ಥಳಗಳಿಗೆ ಭೇಟಿಕೊಟ್ಟಂತಹ ಸಂದರ್ಭದಲ್ಲಿ ಅಲ್ಲಿನ ಪ್ರಕೃತಿ ಸೌಂದರ್ಯವನ್ನು ಈ ಕೆಳಕಂಡಂತೆ ವರ್ಣಿಸುತ್ತಾರೆ.

ಮೊದಲಬಾರಿಗೆ ಪರ್ವತಮಯ ಪ್ರದೇಶವಾದ ಡಾರ್ಜಲಿಂಗಿಗೆ ಹೋದಾಗ ವಾಸಂತಿಯವರ ಮನಸ್ಸಿಗಾದ ಸಂತೋಷ ಅಷ್ಟಿಷ್ಟಲ್ಲ. ಡಾರ್ಜಲಿಂಗಿನ ಶಾಂತ ವಾತಾವರಣ ತಂಪಾದ ಹವೆ, ಮುಖಕ್ಕೇ ಮುತ್ತಿಡುವ ಮೋಡಗಳು, ಎಲ್ಲವೂ ಎಷ್ಟು ಸೊಗಸಾಗಿದೆ ಎಂದು ವರ್ಣಿಸುತ್ತಾ ವಾಸಂತಿ ಹೀಗೆ ಬರೆಯುತ್ತಾರೆ. "ಅಲ್ಲಿನ ಟೈಗರ್ ಹಿಲ್ಲಿಗೆ ರಾತ್ರಿ ಮೂರು ಗಂಟೆಗೆ ನಡೆದುಕೊಂಡೇ ಹೊರಟೆವು. ಆಗ ಮೈಯ್ಯಲ್ಲಿ ಶಕ್ತಿ ಇತ್ತು. ಬೆಳಗಿನ ತನಕ ಇಡೀ ಆಕಾಶ ಬಿಳೀ ಮೋಡಗಳಿಂದ ತುಂಬಿ, ಹತ್ತಿಯನ್ನು ಮೆತ್ತಿದಂತೆ ಕಾಣುತ್ತಿತ್ತು. ಸೂರ್ಯನು ಉದಯವಾಗುವ ದೃಶ್ಯವನ್ನು ನಾನು ನಾಲ್ಕು ಮಾತುಗಳಿಂದ ವರ್ಣಿಸಲಾರೆ. ಒಂದು ಚಿನ್ನದ ಪಾತ್ರೆಯಲ್ಲಿ ಕರಗಿದ ಚಿನ್ನದ ರಸವೇ ಕುದಿಯುತ್ತಿದೆಯೇನೋ ಎಂಬಂತಹ ನೋಟ! ಒಂದೇ ನಿಮಿಷ ಅಷ್ಟರಲ್ಲಿ ಸೂರ್ಯೋದಯವಾಗಿ ರಮ್ಯವಾದ ಕೆಂಪು ಬಣ್ಣ ಗೋಚರಿಸಿತು"[೧]

---

೧. ಜೀವನ ಹೋರಾಟ– ವಾಸಂತಿ ಪಡುಕೋಣೆ, ಪು. ೧೦೦

ಹೀಗೆ ಅವರು ಬೆಳದಿಂಗಳಲ್ಲಿ ಕಂಡ ತಾಜ್‌ಮಹಲನ್ನೂ ವರ್ಣಿಸುತ್ತಾರೆ. ಮಥುರ, ವೃಂದಾವನ, ಹರಿದ್ವಾರ, ಲಕ್ಷ್ಮಣ ಝೂಲಾ ಮುಂತಾದ ತೀರ್ಥಕ್ಷೇತ್ರಗಳ ದರ್ಶನ ಮಾಡಿ ಭಾವುಕರಾದುದ್ದನ್ನು ಅವರು ಬರೆದಿದ್ದಾರೆ. ಕಾಶ್ಮೀರ ನೋಡುವ ಅವರೀಗ ಸಿಕ್ಕಿದಾಗಲೂ ಅವರು ಮಗುವಿನಂತಾಗಿದ್ದರು ಸ್ವರ್ಗ ಸಮಾನವಾದ ಕಾಶ್ಮೀರದ ಚೆಲುವನ್ನಿವರು ಆರಾಧನಾ ನೋಟದಿಂದ ಹೀರಿಕೊಂಡಿದ್ದಾರೆ.

ಜಪಾನ್‌ಗೆ ಹೋದಾಗಲೂ ಅಷ್ಟೇ! ಅಲ್ಲಿಯ ಸೃಷ್ಟಿ ಸೌಂದರ್ಯವನ್ನು ಅವರು ಬಹಳವಾಗಿ ಬಣ್ಣಿಸಿದ್ದಾರೆ. ಸ್ವಷ್ಟವಾಗಿರುವ ರಸ್ತೆ ಸುಂದರವಾದ ಮನೆಗಳು ಹೊಟೇಲ್‌ನಲ್ಲಿ ಸಿಗುವ ಆಹಾರಗಳು, ಜಪಾನಿಯರ ಬದುಕಿನ ರೀತಿ, ಧರಿಸುವ ಬಟ್ಟೆಗಳು ಅವರ ದೇಹ ಕಣ್ಣು, ಬಣ್ಣ ಹೀಗೆ ಪ್ರತಿಯೊಂದು ಅಂಶಗಳನ್ನು ತಮ್ಮ ಕುತೂಹಲದ ಕಣ್ಣಿಗೆ ತುಂಬಿಸಿಕೊಂಡಿದ್ದಾರೆ.

ಪ್ರಕೃತಿಯ ಸೌಂದರ್ಯದಲ್ಲಿ ಸ್ವರ್ಗವನ್ನೇ ಕಾಣುವ, ಅದರಲ್ಲೇ ಲೀನವಾಗುವ, ಸೃಷ್ಟಿಯನ್ನು ಪ್ರೀತಿಸುವ ಗುಣವುಳ್ಳವರಾದುದರಿಂದಲೋ ಏನೋ ವಾಸಂತಿ ಪಡುಕೋಣೆ ಜಟಿಲವಾದ ಬದುಕಿನಲ್ಲೂ ಆಸಕ್ತಿಯನ್ನು ಉಳಿಸಿಕೊಂಡಿದ್ದರೆಂಬುದರಲ್ಲಿ ಸಂದೇಹವಿಲ್ಲ.

ಕನ್ನಡದ ಹೆಸರಾಂತ ಲೇಖಕಿಯಾದ ಡಾ. ಅನುಪಮಾ ನಿರಂಜನರು ವೈದ್ಯೆಯಾಗಿ, ಸಾಹಿತಿಯಾಗಿ ಎರಡು ಕ್ಷೇತ್ರಗಳಲ್ಲೂ ಕಾರ್ಯನಿರ್ವಹಿಸಿದ್ದು. ತಮ್ಮದೇ ಆದ ಖ್ಯಾತಿಯನ್ನು ಪಡೆದಿದ್ದಾರೆ. 'ನೆನಪು: ಸಿಹಿಕಹಿ' ಇದು ಅನುಪಮಾ ನಿರಂಜನರ ಆತ್ಮಕಥೆಯಾಗಿದ್ದು ತಮ್ಮ ಬದುಕಿನ ಪುಟಗಳನ್ನು ತೆರೆದಿಟ್ಟಿದ್ದಾರೆ. ಸರಳವಾದ ಭಾಷೆ ಶೈಲಿಯಲ್ಲಿ ರಚಿತವಾಗಿದ್ದು, ಓದುಗರನ್ನು ತನ್ನತ್ತ ಆಕರ್ಷಿಸುತ್ತಾ, ಸಾಹಿತ್ಯಿಕವಾಗಿ ಮೂಡಿಬಂದಿವೆ.

ಈ ಆತ್ಮಕಥನದ ಬಗೆಗೆ ಡಾ. ಹಾ.ಮಾ.ನಾಯಕರು ಬರೆಯುತ್ತಾರೆ. "ಸಾವನ್ನು ಎದುರಿಗೆ ಕೂರಿಸಿಕೊಂಡು ತಮ್ಮ ಪಾಡಿಗೆ ಕೆಲಸ ತಾವು ಮಾಡಿಕೊಂಡು ಹೋಗುವುದು ಸಾಮಾನ್ಯವಾದ ಸಾಹಸವಲ್ಲ. ಇಂಥ ಮುಖಾಮುಖಿ ಎಲ್ಲರಿಗೂ ಸಾಧ್ಯವೆನಿಸುವುದಿಲ್ಲ. ಈ ಎಲ್ಲಾ ಬೆಳವಣಿಗೆಯನ್ನು ಅನುಪಮಾ ತಾಳಿಕೊಂಡಿದ್ದಾರೆ. ಆದರೆ ಅನುಭವಗಳು ಹರಳುಗೊಳ್ಳದಿರುವುದೇ ಈ ಆತ್ಮಕಥೆಯ ಕೊರತೆಯಾಗಿದೆ."[೧] ಅನುಪಮಾ ಪ್ರಮುಖ ಲೇಖಕಿ ಆದರೂ ಅದೇಕೋ ತಮ್ಮ ಆತ್ಮಕಥನದಲ್ಲಿ ಲೇಖಕಿಯರ ಸಮಸ್ಯೆಗಳನ್ನು ವಿಶೇಷವಾಗಿ ವಿಶ್ಲೇಷಿಸಿಲ್ಲ. ಅನುಪಮಾರ "ನೆನಪು ಸಿಹಿಕಹಿ" ತನ್ನ ಸರಳ ನೇರ ನಿರೂಪಣೆಯಿಂದ ಓದುಗರ ಮನಸ್ಸನ್ನು ತಟ್ಟುತ್ತದೆ.

---

೧. ಡಾ. ಅನುಪಮಾ ನಿರಂಜನ- ಇಂದಿರಾ ಶಿವಣ್ಣ, ಪು. ೩೮

ಅನುಪಮಾ ಮತ್ತು ನಿರಂಜನರ ದಾಂಪತ್ಯ ಅನ್ಯೋನ್ಯವಾದುದು. ಇದು ಅವರ ಆತ್ಮಕಥೆಯಲ್ಲಿ ಮೂಡಿ ಬಂದಿರುವ ಸರಸತಮವಾದ ಭಾಗವಾಗಿದೆ. ಅನುಪಮಾ ಮತ್ತು ನಿರಂಜನರ ನಡುವೆ ಒಲುಮೆಯಿತ್ತು. ಇಬ್ಬರೂ ಬದುಕಿನಲ್ಲಿ ಪರಸ್ಪರ ಒಬ್ಬರಿಗೊಬ್ಬರಿಗೆ ನಿಂತರು. ಅವರ ನಡುವಿನ ಅನೇಕ ಪ್ರಸಂಗಗಳು ರಸವತ್ತಾಗಿವೆ. ಓದುಗನ ಮನಸ್ಸಿನಲ್ಲಿ ಕೆತ್ತಿ ನಿಲ್ಲುತ್ತವೆ. ಒಂದು ಪ್ರಸಂಗ ಹೀಗಿದೆ.

"ನಾನು ಗುಡ್ಡ ಏರಿದೆವು. ನಿರ್ಮಲವಾದ ಆಕಾಶದಲ್ಲಿ ಒಂದೆರಡು ಹಕ್ಕಿಗಳು ಹಾರುತ್ತಿದ್ದವು. ನಮ್ಮಿಬ್ಬರ ಮನಸ್ಸು ಅಷ್ಟೇ ಸ್ವಚ್ಛಂದವಾಗಿದ್ದವು. ಬಂಡೆಗಲ್ಲೊಂದರ ಮೇಲೆ ಕುಳಿತಾಗ ನಿರಂಜನ. ತಾವು ತಂದಿದ್ದ ಎರಡು ಸೇಬುಹಣ್ಣುಗಳನ್ನು ತೆಗೆದು 'ಇದನ್ನು ಹ್ಯಾಗೆ ಪಾಲು ಮಾಡೂದು? ಕಚ್ಚೋಣವೋ? ಎಂದು ಕೇಳಿದರು. 'ಥೂ ಬೇಡಪ್ಪ'! 'ಹಾಗಾದರೆ ಕೈಲೇ ಮುರೀತೀನಿ' ಎನ್ನುತ್ತಾ ತಮ್ಮ ಬಲವಾದ ಕೈಗಳ ಮಧ್ಯೆ ಸೇಬುಹಣ್ಣು ಅಮುಕಿ ಎರಡು ಹೋಳು ಮಾಡಿದರು. ಇಬ್ಬರು ತಿನ್ನತೊಡಗಿದೆವು."[೧]

ಹೀಗೆ ಅನಾಮತ್ತಾಗಿ ಸೇಬುಹಣ್ಣನ್ನು ಸೀಳಿದ ನಿರಂಜನರು ಮುಂದೊಮ್ಮೆ ಜಾರಿ ಬಿದ್ದು, ಬಲಗೈ ಮೂಳೆ ಮುರಿದುಕೊಂಡಾಗ ಬರೆದ 'ಸಾಧನ ಸಂಚಯ'ದ ಒಕ್ಕಣೆ ಹೀಗಿದೆ. "…. ಹಿಂದೊಮ್ಮೆ ಎರಡು ವರ್ಷಗಳ ಹಿಂದೆ ನಾವಿಬ್ಬರೂ ಮೊದಲ ಬಾರಿ ಗುಡ್ಡವನ್ನೇರಿ ಹೋಗಿ ಅಲ್ಲಿ ಕುಳಿತಾಗ ಎರಡು ಅಂಗೈಗಳ ಮಧ್ಯೆ ಸೇಬು ಹಣ್ಣನ್ನು ನಾನು ಒಡೆದಿದ್ದೆ ನೆನಪಿದೆಯಾ? ಇನ್ನು ಮುಂದೆ ನಾನೆಂದಿಗೂ ಹೀಗೆ ಸೇಬು ಹಣ್ಣನ್ನು ಒಡೆಯಲಾರೆ"…. ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದ ಅನುಪಮಾರವರು ಸುದ್ದಿಕೇಳಿ ಬೆಂಗಳೂರಿಗೆ ಧಾವಿಸಿ ರತ್ನ ವಿಲಾಸ ರಸ್ತೆಯ ಪುಟ್ಟ ಮನೆಯಲ್ಲಿ ಚೇತರಿಸುತ್ತಿದ್ದ ನಿರಂಜನರನ್ನು ನೋಡಿ ಬಲಗೈಯನ್ನು ಹಿಡಿದು ಕಣ್ಣೀರು ಸುರಿಸುತ್ತಾರೆ. ಇದನ್ನು ಓದಿದ ಓದುಗನೂ ಅವಯತ್ನವಾಗಿ ಎರಡು ತೊಟ್ಟು ಕಣ್ಣ ಹನಿ ಉದುರಿಸುವಂತಿದೆ ಈ ಸನ್ನಿವೇಶ.

ಹಾಗೆಯೇ ಕನ್ನಡ ಸಾಹಿತ್ಯದ ಪ್ರಮುಖ ಮುಸ್ಲಿಂ ಲೇಖಕಿ ಸಾ.ರಾ.ಅಬೂಬಕ್ಕರ್ ಇವರ ಆತ್ಮಕಥೆಯಾದ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಇದರಲ್ಲಿ ತಮ್ಮ ಬದುಕಿನ ಚಿತ್ರಣವನ್ನು ಒಂದು ಹೆಣ್ಣು ಮನೆ ಬಿಟ್ಟು ಹೊರಗೆ ಶಾಲೆ ಕಲಿಯಲು ಹೋದಾಗ ಅವಳನ್ನು ನೋಡಿ ಸಹಿಸದ ಜನರು ಹೊಟ್ಟೆಕಿಚ್ಚು ಪಟ್ಟು ವಿರೋಧಿಸುವುದನ್ನು, ಜಾತಿ ಎನ್ನುವಂತಹುದು ಮಕ್ಕಳ ಶಿಕ್ಷಣಕ್ಕೆ ಅಡ್ಡಗಾಲಾಗಿರುವುದನ್ನು ತಮ್ಮ ಸುತ್ತಮುತ್ತಲಿನ

೧. ನೆನಪು ಸಿಹಿಕಹಿ: ಅನುಪಮಾ ನಿರಂಜನ. ಪು. ೮೮

ತಾವು ಕಂಡುಂಡ ಅನೇಕ ಸಮಸ್ಯೆಗಳನ್ನು ಸರಳ ಸಹಜವಾದ ಬರವಣಿಗೆಯಲ್ಲಿ ಓದುಗರಿಗೆ ಅರ್ಥವಾಗುವಂತೆ ರಚಿಸಿದ್ದಾರೆ.

ಸಾರಾ ಅವರ ಹಿರಿಯಣ್ಣ ತೀರಿಕೊಂಡಾಗ ಅವರು ನೋವಿನಿಂದ ಹೇಳುವ ಮಾತುಗಳು ಓದುಗರ ಮನ ಕರುಗುವಂತಿದ್ದು ಸಹಜವಾದ ಶೈಲಿಯಲ್ಲಿ, ಸಾಹಿತ್ಯಿಕವಾಗಿ ಮೂಡಿ ಬಂದಿದೆ. ಅದು ಈ ಕೆಳಕಂಡಂತಿದೆ.

"ಯಾಕಣ್ಣಾ ಹೀಗೆ ಮಾಡಿದೆ? ನನಗೆ, ತಂದೆತಾಯಿಗೆ, ನಿನ್ನನ್ನು ನಂಬಿದ ಇಡೀ ಊರಿನವರಿಗೆಲ್ಲಾ ಯಾವ ಮುನ್ಸೂಚನೆಯೂ ಇಲ್ಲದೆ ಕೈಕೊಟ್ಟು ಕಣ್ಮರೆಯಾದೆಯಲ್ಲ? ನಾವೇನು ತಪ್ಪು ಮಾಡಿದ್ದೇವೆ? ನನ್ನನ್ನು ಬಿಟ್ಟು ಹೋಗುವುದು ನಿನಗೆ ಅಷ್ಟು ಸುಲಭವಾಯಿತೇ? ಕಡು ವಾಸನೆಯನ್ನು ಬೀರುವ ಕೆಂಡಸಂಪಿಗೆಯ ಹೂವು ನನಗಿಷ್ಟವೆಂದು ನನಗಾಗಿ ಅದರ ಗಿಡವನ್ನು ತಂದು ಅಂಗಳದಲ್ಲಿ ನೆಟ್ಟೆಯಲ್ಲ? ಅದರಲ್ಲಿ ಹೂ ಬಿಟ್ಟಾಗ ಅದನ್ನು ಕಿತ್ತುತಂದು ನನ್ನ ಮುಡಿಯಲ್ಲಿ ಮುಡಿಸಲು ಆ ಮೇಲೆಂದೂ ನೀನು ಬರಲೇ ಇಲ್ಲವಲ್ಲ? ನಾವಿನ್ನು ಎಲ್ಲಿ ಭೇಟಿಯಾಗೋಣ? ಕೊನೆಯ ದಿನವೇ? ಒಳಿತು ಕೆಡುಕುಗಳನ್ನು ತೂಕ ಮಾಡುವ ತಕ್ಕಡಿಯ ಬಳಿಯೇ? ಅಥವಾ ಸ್ವರ್ಗಕ್ಕೆ ಹೋಗುವ ಸೇತುವೆಯ ಬಳಿಯೇ?"[೧] ಎಂದಲ್ಲಾ ಕೇಳುತ್ತೇನೆ.

ಧರ್ಮ:

ಪ್ರತಿಯೊಂದು ಧರ್ಮದ ಜನರು ತಮ್ಮದೇ ಆದ ಆಚಾರ, ವಿಚಾರ ರೂಢಿ ಸಂಪ್ರದಾಯಗಳನ್ನು ಹೊಂದಿದ್ದು, ತಮ್ಮದೇ ಆದ ಧಾರ್ಮಿಕ ಚೌಕಟ್ಟಿನೊಳಗೆ ಜೀವನ ನಡೆಸುತ್ತಾರೆ. ಧರ್ಮದ ಬಲೆಯೊಳಗೆ ಸಿಲುಕಿದ ಮಹಿಳೆಯರು ಅದರ ಕಟ್ಟುಕಟ್ಟಳೆಗಳಿಗೆ ಬಂಧಿಯಾಗಿದ್ದು ಸ್ವತಂತ್ರವಾಗಿ ಓದುವ ಬರೆಯುವ, ಬದುಕುವ ಅವಕಾಶವು ಇಲ್ಲದಂತಾಗಿವೆ. ಇದೇ ರೀತಿಯ ಸಮಸ್ಯೆಯೊಳಗೆ ಪ್ರಸಿದ್ಧ ಮುಸ್ಲಿಂ ಲೇಖಕಿಯಾದ ಸಾರಾ ಅವರು ಸಿಲುಕಿ ತಮ್ಮ ವಿದ್ಯಾಭ್ಯಾಸಕ್ಕೆ ಧರ್ಮದಿಂದ ಸಮಸ್ಯೆಯನ್ನು 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಈ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ.

ಮುಸ್ಲಿಂ ಬಾಂಧವರಲ್ಲಿ ವಿದ್ಯಾವಂತ ಮನೆತನದ ಮೇಲೆ ಮೂಲಭೂತ-ವಾದಿಗಳ ಜಡ್ಡು ಸಂಪ್ರದಾಯ ಜಾಡ್ಯಗಳ ಪೋಷಕ ಮನಸ್ಸುಗಳ ಪ್ರಬಲವಾದ ಅಧಿಕಾರವನ್ನು ಸ್ಥಾಪಿಸಿರುತ್ತದೆ. ಅದಕ್ಕೆ ಸಾ.ರಾ ಅವರು ಮನೆತನವೇ ಸಾಕ್ಷೀಭೂತ-ವಾಗಿದೆ. ಪ್ರಸ್ತುತ ಯುಗ ವೈಜ್ಞಾನಿಕವಾಗಿ ಎಷ್ಟೇ ಮುಂದುವರಿಯುತ್ತಿದ್ದರೂ ವೈಜ್ಞಾನಿಕ

೧. ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು- ಸಾರಾ ಅಬೂಬಕ್ಕರ್, ಪು. ೧೦೧.

ದೃಷ್ಟಿಕೋನವನ್ನು ಕುರುಡಾಗಿಸಿಕೊಂಡಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಅದು ಸಾ.ರಾ ಅವರ ಕಾಲದಿಂದ ಬಂದ ಮಾತು.

ಮುಸ್ಲಿಂ ಸಮುದಾಯದಲ್ಲಿ ಮಹಿಳೆಯರನ್ನು ಹೀನವಾಗಿ ದುಡಿಸಿಕೊಳ್ಳುತ್ತಾರೆ. ಅವರಿಗೆ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಸ್ವಾತಂತ್ರ್ಯವನ್ನು ಕಸಿದುಕೊಂಡು ಅದರ ಇರುವನ್ನು ಅರ್ಥಹೀನ ಮಾಡಿ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತೆ ಅವರ ಅಸ್ಥಿತ್ವ ಎಷ್ಟು ದುರಂತವಲ್ಲವೇ? ಸಾಮಾನ್ಯ ಮೂಲಭೂತ ಹಕ್ಕುಗಳನ್ನು ಕಸಿದುಕೊಂಡಿರುವ ಈ ಸಮುದಾಯವನ್ನು ಈ ಮಹಿಳೆಯರ ಮನೆಮಂದಿಯೇ ಪ್ರೋತ್ಸಾಹಿಸುವುದು ಪ್ರಸ್ತುತದಲ್ಲಿ ಅನಿವಾರ್ಯ ಎಂಬಂತೆ ನಡೆದುಕೊಳ್ಳುತ್ತಿದ್ದಾರೆ. ಈ ಮೂಲಭೂತವಾದಿಗಳ ಸಂಪ್ರದಾಯದ ಗೊಡ್ಡುತನಕೆ ವಿದ್ಯಾವಂತ ಕೌಟುಂಬಿಕ ವರ್ಗ ಹೇಗೆ ಹೆದರುತ್ತದೆ ಎಂಬುದನ್ನು ತಿಳಿದರೆ ಸೋಜಿಗವೇ ಸರಿ. ಪ್ರಸ್ತುತ ಕತೆಯ ಕಥಾನಾಯಕಿಯ ತಂದೆ ಮದ್ರಾಸ್ ವಿಶ್ವವಿದ್ಯಾನಿಯಲದಲ್ಲಿ ವಕೀಲ ತರಗತಿಯಲ್ಲಿ ಚಿನ್ನದ ಪದಕ ಪಡೆದ ಅವರು ಸ್ವಂತ ಮಗಳ ವಿದ್ಯಾಭ್ಯಾಸ ಮಾಡಿಸಲು ಮೂಲ ಭೂತವಾದಿಗಳ ವಿರುದ್ಧ ನಿಲ್ಲಲು ಎಷ್ಟು ಹಿಂಜರಿಯುತ್ತಾರೆ ಎಂಬುದನ್ನು ತಿಳಿಯಬಹುದು.

ಒಂದು ಮತೀಯ ಚೌಕಟ್ಟಿನಲ್ಲಿ ಅದರ ಆವರಣದೊಳಗೆ ಸಾಂಪ್ರದಾಯಿಕ ಬದುಕು ಮತ್ತು ಅದರ ಭವಿಷ್ಯವಿರಬೇಕೆಂಬ ಕರಾಳ ದೃಷ್ಟಿಕೋನವನ್ನು ಮಹಿಳೆಯರ ಮೇಲೆ ಹೇರಿ ಅದು ದೈವಿಕ ಪ್ರೇರಣೆ ಎಂದು ಹೇಳುವ ಖುರಾನ್ ಪಂಡಿತರು ಪಂಡಿತರೇ ಅಲ್ಲ. ಧಾರ್ಮಿಕ ಪ್ರತಿನಿಧಿಗಳು ಸಾತ್ವಿಕ ಮತ್ತು ವಿಶ್ವಮನಸ್ಸನ್ನು ಹೊಂದಿ ಆಲೋಚಿಸಬೇಕು ಎಂದು ಹೇಳುವ ಸಾ.ರಾ. ಅವರ ಮಾತು ಇಲ್ಲಿ ಪ್ರಸ್ತುತ.

ಮುಸ್ಲಿಂ ಹಿಂದೂ ದೇವಾಲಯಗಳಿಗೆ ಹೋದಾಗ ಸಮಾಜದಲ್ಲಿನ ಜನರು ಮತ್ತು ಕುಟುಂಬದವರು ಅವರನ್ನು ಹೇಗೆ ಕೀಳಾಗಿ ಕಾಣುತ್ತಾರೆ ಎಂಬುದನ್ನು ಸಾ.ರಾ ಅವರು ತಮ್ಮ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ. ಅದು ಈ ರೀತಿ ಇದೆ. "ಒಂದು ದಿನ ನಾನು ಈ ಹುಡುಗಿಯರ ಜೊತೆಯಲ್ಲಿ ನಮ್ಮೂರಿನ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಹೋದೆ. ಅವರೊಡಗೂಡಿ ಅವರು ಮಾಡುವಂತೆಯೇ ಮಾಡಿ ಗರ್ಭಗುಡಿಗೆ ಸುತ್ತು ಬಂದು ಪೂಜಾರಿಯಿಂದ ಪ್ರಸಾದ ತೆಗೆದುಕೊಂಡು ಬಂದು ನನ್ನ ಅಣ್ಣಂದಿರೊಡನೆ ಹೇಳಿದೆ. ಎಲ್ಲರೂ ಇಂದಿನಿಂದ ನೀನು ಹಿಂದೂವಾಗಿದೆ.' ಎಂದು ನನ್ನನ್ನು ಹಾಸ್ಯ ಮಾಡಿ ನಗತೊಡಗಿದರು. ನನ್ನ ತಂದೆ ದೊಡ್ಡದಾಗಿ ನಕ್ಕುಬಿಟ್ಟರು.

ಮುಸ್ಲಿಂ ಹುಡುಗಿಯಾದ ನನಗೆ ಇತರ ಹುಡುಗಿಯರೊಡನೆ ಒಂದು ಸಿನಿಮಾಕ್ಕು ಹೋಗುವ ಸ್ವಾತಂತ್ರ್ಯವಿರಲಿಲ್ಲ. ನನ್ನಣ್ಣ ಊರಿಗೆ ಬಂದಾಗೊಮ್ಮೆ ಅವನೊಡನೆ ಒಂದೋ ಎರಡೋ ಚಿತ್ರ ನೋಡಿದ್ದೇನೆ ಹೊರತು ಉಳಿದ ದಿನಗಳಲ್ಲಿ ಗೆಳತಿಯ ಬಾಯಿಂದ ಸಿನಿಮಾದ ಕತೆ ಕೇಳಿ ತೃಪ್ತಿ ಪಟ್ಟುಕೊಳ್ಳಬೇಕಾಗುತ್ತಿತ್ತು ಎಂದು ಪಿಕ್‌ನಿಕ್ ಮತ್ತು ಎಕ್ಸ್‌ಕರ್ಷನ್‌ಗೆ ನಾನು ಹೋದವಳೇ ಅಲ್ಲ. ಶಾಲೆಯ ಥ್ರೋಬಾಲ್ ಟೀಮಿನ ಅತ್ಯುತ್ತಮ್ಮ ಆಟಗಾರ್ತಿಯಾದ ನನಗೆ ನಮ್ಮ ತಂಡ ಪರ ಊರಿಗೆ ಹೊರಟಾಗ ಅವರೊಡನೆ ಹೋಗುವ ಅವಕಾಶ ಸಿಗಲಿಲ್ಲ ಎಂದು ಸಾ.ರಾ. ಅವರು ನೊಂದು ನುಡಿಯುತ್ತಾರೆ. ಅವರ ಆ ಬಾಲ್ಯದ ಹೊಂಗನಸುಗಳನ್ನು ತಂದು ಕೊಡಲು ಸಾಧ್ಯವೆ? ಎಂದಿಗೂ ಇಲ್ಲ ಹಾಗೊಂದು ವೇಳೆ ಆ ಕಳವಳ ನೋವಿದ್ದರೆ ಧಾರ್ಮಿಕ ಮುಖಂಡರೆ ನಿಮ್ಮ ಅವಿವೇಕ ಬುದ್ಧಿಯನ್ನು ಬಳಸಿ ಮುಸ್ಲಿಂ ಹುಡುಗಿಯರ ಶೈಕ್ಷಣಿಕ ಬದುಕನ್ನು ಹಾಳು ಮಾಡಿ ಅವರ ಮೃದು ಮಧುರ ಮನಸ್ಸಿಗೆ ನೋವನ್ನೀಯಬೇಡಿ.

ಸಾ.ರಾ. ಅವರು ಮುಸ್ಲಿಂರಿಂದಲೇ ಮಾತ್ರವಲ್ಲದೆ ಪ್ರಾರಂಭದಲ್ಲಿ ಹಿಂದೂ ಸಹಪಾಠಗಳಿಂದಲೂ ನೋವನ್ನು ಅನುಭಸಿದ್ದಾರೆ. ಪ್ರಸ್ತುತದಲ್ಲಿ ಮಾರ್ಮಿಕವಾಗಿ ಅನುಭವಿಸುತ್ತಿರುವುದನ್ನು ಅಧಿಕೃತವಾಗಿ ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ ಎಂಬ ಕೃತಿಯಲ್ಲಿ ಹೇಳಿಕೊಂಡಿದ್ದಾರೆ. 'ಅಯ್ಯೋ, ಮುಸ್ಲಿಂ ಹುಡುಗಿ ಮುಟ್ಟಿಸಿಕೊಳ್ಳಬೇಡಿ ಎಂದು ಹೇಳುತ್ತಿದ್ದ ಹಿಂದೂ ಹುಡುಗಿಯರು ಅಂದಿಗೂ ಇಂದಿಗೂ ಸಾ.ರಾ. ಅವರ ಸಾತ್ವಿಕ ಮನಸ್ಸನ್ನು ನೋಯಿಸುತ್ತಿರುವ ಹಿಂದೂ ಹಿಂದೇತರ ಮಹಿಳೆ ಮಹಿಳೆಯರಿಗೆ ಇಡೀ ಸ್ತ್ರೀ ಕುಲದಿಂದ ಛೀಮಾರಿಯ ಜೊತೆಗೆ ಶಾಶ್ವತವಾದ ದಿಕ್ಕಾರವಿರಲಿ.

ಈ ಎಲ್ಲಾ ವಿದ್ಯಾಮಾನಗಳ ನಡುವೆ ಗಾಂಧಿ ಮನಸ್ಸಿನ ಒಬ್ಬ ಉಪಾಧ್ಯಾಯಿನಿ ಸಾ.ರಾ. ಅವರಿಗೆ ಸಂತೈಸಿ ವಿವೇಚನೆಯಿಂದ ನಡೆಸಿಕೊಂಡ ಅವರ ಸಾತ್ವಿಕ ವಿಶ್ವ ಹೃದಯಕ್ಕೆ ಕೃತಜ್ಞತೆಗಳನ್ನು ಅರ್ಪಿಸಲೇಬೇಕು. ಸ್ವತಃ ಮುಸ್ಲಿಂ ಲೇಖಕಿಯಾದ ಸಾರಾ ಅವರು ತಮ್ಮ ಧಾರ್ಮಿಕ ಸಮುದಾಯದಿಂದ ತಮಗುಂಟಾಗುತ್ತಿದ್ದ ಸಮಸ್ಯೆಯನ್ನು ತಮ್ಮ ಆತ್ಮಕಥೆಯಲ್ಲಿ ಮುಕ್ತವಾಗಿ ಹೇಳಿಕೊಂಡಿದ್ದಾರೆ.

ಜನಸಮುದಾಯದ ಪ್ರಮುಖ ಅಸಮಾನತೆಗೆ ಜಾತಿಯೇ ಮೂಲವಾಗಿದೆ. ಈ ಜಾತಿ ಅಸಮಾನತೆಯನ್ನು ಹೊಡೆದೋಡಿಸಲು ಇಂದು ಹೋರಾಟಗಳೇ ನಡೆಯುತ್ತಲಿವೆ. ಚಾತುರ್ವರ್ಣ ವ್ಯವಸ್ಥೆ ಬೇರುಬಿಟ್ಟಿರುವ ಈ ಸಮಾಜ ವ್ಯವಸ್ಥೆಯಲ್ಲಿ ಅನೇಕ ಶರಣರು ಸಂತರು ಸಾರಿಹೋದರೂ ಜಾತಿಯ ಪಿಡುಗು ಇನ್ನೂ ಹೋಗಿಲ್ಲ. ಈ ಜಾತಿ ವ್ಯವಸ್ಥೆ ಏಕಕಾಲಕ್ಕೆ ಒಬ್ಬನನ್ನು ಉತ್ತಮನನ್ನಾಗಿ ಮತ್ತೊಬ್ಬನನ್ನು

ಅಧಮನನ್ನಾಗಿ ಪರಿಗಣಿಸುತ್ತದೆ. ಜನಸಮುದಾಯದಲ್ಲಿ ಉಚ್ಚ-ನೀಚ ಭಾವನೆಯನ್ನು ಹುಟ್ಟುಹಾಕುತ್ತದೆ. ಚಾತುರ್ವರ್ಣ ವ್ಯವಸ್ಥೆಯಲ್ಲಿ ಮೇಲಿನವರಿಗೆ ವರವಾಗಿ ಪರಿಣಮಿಸುವ ಈ ಜಾತಿ ಕೆಳಗಿನವರಿಗೆ ಶಾಪವಾಗಿ ಕಾಡುತ್ತದೆ. ಹೀಗೆ ವರ-ಶಾಪಗಳೆರಡನ್ನು ಏಕಕಾಲಕ್ಕೆ ಬೇರೆ ಬೇರೆಯಾಗಿ ಬಿತ್ತುವ ಈ ಜಾತಿವ್ಯವಸ್ಥೆ ಅತ್ಯಂತ ಕ್ರೂರವೂ-ಅಮಾನವೀಯವೂ ಆಗಿದೆ. ಇಂತಹ ಜಾತಿವ್ಯವಸ್ಥೆಯ ಬಗೆಗೆ ಮೇಲು-ವರ್ಗದಿಂದ ಬಂದ ಈ ಲೇಖಕಿ ಶಾರದಾ ಹೆಮ್ಮಿಗೆಯವರು ದನಿಯೆತ್ತುವುದು ತುಂಬಾ ಮುಖ್ಯವಾಗುತ್ತದೆ.

ಬ್ರಾಹ್ಮಣ ವೃದ್ಧರು, ಕೆಳಜಾತಿಯವರು ಮೇಲೆ ಬರುತ್ತಿರುವುದನ್ನು ಸಹಿಸದಾದಾಗ ಅದನ್ನು ಮುಚ್ಚುಮರೆಯಿಲ್ಲದೆಯೇ ಲೇಖಕಿ ತಮ್ಮ ಆತ್ಮಕಥೆಯಲ್ಲಿ ಹೀಗೆ ಹೇಳಿಕೊಳ್ಳುತ್ತಾರೆ.

"ಗುಂಡಪ್ಪ ಮಾಸ್ತರರು ಚಿಕ್ಕಳ್ಳಿಗೆ ವರ್ಗವಾಗಿ ಬಂದ ನಂತರ ಅನೇಕ ಬದಲಾವಣೆಗಳಾದವು. ಗುಂಡಪ್ಪ ಮಾಸ್ತರರು ರಾತ್ರಿ ಶಾಲೆಯನ್ನು ತೆರೆದು ಹಿಂದುಳಿದ ವರ್ಗದ ಇಳಿ ವಯಸ್ಸಿನವರಿಗೂ ಅಕ್ಷರ ಕಲಿಸತೊಡಗಿದರು. ಕೆಳವರ್ಗದ ಜನ ಸ್ವಾಭಿಮಾನದಿಂದ ಬದುಕುವುದನ್ನು ಕಲಿಸಿದರು. ಇದನ್ನು ಸಹಿಸದ ಕೆಲವು ವೃದ್ಧ ಬ್ರಾಹ್ಮಣರು ಆಡುವ ಮಾತುಗಳು ಹಿಗಿವೆ.. ಯಾವನಿವನು ಗುಂಡಪ್ಪ?..... ಹಳ್ಳಿ ಹೈದಗಳಿಗೆಲ್ಲಾ.... ಏನೇನೋ ಬೋಧಿಸಿ ತಲೆಹರಟೆ ಮಾಡುತ್ತಿದ್ದಾನೆ. ಮೊದಲು ಅವನನ್ನು ಈ ಊರಿನಿಂದ ಹೇಗಾದರೂ ಮಾಡಿ ವರ್ಗಾಯಿಸಿ ಬಿಡಬೇಕು, ಇಲ್ಲದಿದ್ದರೆ ಕೆಳಜಾತಿಯವೆಲ್ಲಾ ಬರಬರುತ್ತಾ ತಲೆಯ ಮೇಲೆ ಹತ್ತಿ ಕುಳಿತು ಬಿಡುವ ಕಾಲ ದೂರವಿಲ್ಲ."[೧] ಎಂದು ತಮ್ಮಲ್ಲೇ ವ್ಯಾಖ್ಯಾನಿಸಿಕೊಳ್ಳುವುದನ್ನು ಒಂದೆರಡು ಬಾರಿ ಮೇಲಕ್ಕೆ ಮೂಗರ್ಜಿ ಬರೆದದ್ದನ್ನು ಲೇಖಕಿ ತಮ್ಮ ಆತ್ಮಕಥನದಲ್ಲಿ ಹೇಳಿರುವುದನ್ನು ಗಮನಿಸಿದಾಗ ಅವರ ಬಗೆಗೆ ಅಭಿಮಾನ ಕುತೂಹಲ ಹುಟ್ಟುತ್ತವೆ.

ಚಿಕ್ಕಳ್ಳಿಯಲ್ಲಿ ನಡೆದ ನಾಟಕ ಪ್ರಸಂಗವೊಂದರ ಮೂಲಕ, ಊರಿನ ಆಚಾರಿಗಳ ಜಾತಿಯ ಅಹಂಭಾವವನ್ನು ಬಿಚ್ಚಿಟ್ಟಿದ್ದಾರೆ. 'ಪರಮೇಶ್ವರ ಪಾತ್ರ ವಹಿಸಿದ ನಟ ಒಕ್ಕಲಿಗ ಜನಾಂಗಕ್ಕೆ ಸೇರಿದರೆ, ನಾರದನ ಪಾತ್ರ ವಹಿಸಿದ ನಟ ಬ್ರಾಹ್ಮಣ ಜನಾಂಗಕ್ಕೆ ಸೇರಿದ ರಂಗಾಚಾರ್ಯರ ಮಗ. ರಂಗಾಚಾರ್ಯರ ಮಗ ಸೀನ ನಾಟಕದಲ್ಲಿ ಪರಮೇಶ್ವರನಿಗೆ ನಮೋನಮಃ ಪರಮೇಶ್ವರ ಎಂದು ಕೈ ಮುಗಿದು ನಮಸ್ಕರಿಸುವ ಸನ್ನಿವೇಶ ಬರುತ್ತದೆ. ಇದನ್ನು ಗಮನಿಸಿದ ರಂಗಾಚಾರ್ಯರು ಮಗ ಸೀನನ್ನು ಹೊಡೆದು ಬಡಿದು ನಾಟಕದ

---

೧. ಶಾರದಾ ಹೆಮ್ಮಿಗೆ ಬದುಕುಬರಹ, ಪು. ೧೧೯

ದಿನ ರೂಮಲ್ಲಿ ಕೂಡಿಹಾಕಿ ಬೀಗ ಹಾಕಿಬಿಟ್ಟರಂತೆ. ಆಗ ನಾಟಕದ ವ್ಯವಸ್ಥಾಪಕರು ಬೇರೊಬ್ಬನಿಗೆ ನಾರದನ ವೇಷಧರಿಸಿ, ಸಂಭಾಷಣೆಯಿಲ್ಲದ ನಾರದನ ಮೂಲಕ ನಾಟಕವನ್ನು ಆಡಿಸಿದರೆಂದು ಲೇಖಕಿ ವಿವರಿಸಿದ್ದಾರೆ."[೧] ಹೀಗೆ ನಾಟಕದಲ್ಲಿ ಪಾತ್ರಧಾರಿಯಾಗಿ ಕೈ ಮುಗಿಯುವುದನ್ನೇ ಸಹಿಸದ ವಿಪ್ರವರ್ಗ ಎಂತಹ ಸಣ್ಣ ಮನಸ್ಸಿನಿಂದ ಕೂಡಿದ್ದಾಗಿತ್ತೆಂಬುದನ್ನು ಲೇಖಕಿ ವಿವರವಾಗಿ ಬಿಚ್ಚಿಟ್ಟಿದ್ದಾರೆ. ಇಂತಹ ಪ್ರಸಂಗಗಳು ಲೇಖಕಿಯ ಜಾತ್ಯಾತೀತ ಭಾವನೆಗೆ ಸಾಕ್ಷಿಯಾಗಿ ನಿಂತಿವೆ.

ಬಡತನದ ಬೇಗೆಯನ್ನನುಭವಿಸುತ್ತಿರುವ ಯಾವುದೇ ಜಾತಿ–ಜನಾಂಗವಾಗಲಿ ಹತಾಶೆಯ ಬದುಕನ್ನೇ ಬದುಕಬೇಕಾಗುತ್ತದೆ. ಅದಕ್ಕೆ ಬ್ರಾಹ್ಮಣವರ್ಗವೂ ಹೊರತಾಗಿಲ್ಲ. ಆದ್ದರಿಂದ ಶೋಷಣೆಯ ಮುಖಗಳು ಬಹಳ ಸೂಕ್ಷ್ಮವಾಗಿವೆ ಉಚ್ಚ ಜಾತಿಯಲ್ಲಿ ಹುಟ್ಟಿದ ತಕ್ಷಣ ಬ್ರಾಹ್ಮಣರೆಲ್ಲರೂ ಸುಖದಿಂದಿರುತ್ತಾರೆಂದಲ್ಲ. ಜಾತಿಗಿಂತ ಇಲ್ಲಿ ವರ್ಗವೇ ಮುಖ್ಯವಾಗುತ್ತದೆ. ಯಾವುದೇ ಜಾತಿಯಲ್ಲಿ ಜನಿಸಿರಲಿ ಬಡವರಿಗಾಗುವ ಅಪಮಾನ ನೋವು, ಹತಾಶೆಗಳು ಎಲ್ಲ ಬಡವರಿಗೂ ಅನ್ವಯಿಸುತ್ತದೆ. ಅಂತೆಯೇ ಕಾರ್ಲ್‌ಮಾರ್ಕ್ಸ್‌ನ ವರ್ಗ ಹೋರಾಟ ಎಲ್ಲ ಕಾಲಕ್ಕೂ, ಎಲ್ಲಾ ಪ್ರದೇಶಕ್ಕೂ ರೆಲೆವೆಂಟ್ ಆಗುತ್ತದೆ. ಬಡತನವಿರುವ ಬ್ರಾಹ್ಮಣ ಮನೆತನದಲ್ಲಿ ಹುಟ್ಟಿದ ಮಹಿಳೆ, ಇತರ ಶೂದ್ರ ಮಹಿಳೆಯರಿಗಿಂತ ಹೆಚ್ಚಿನ ಯಾತನೆಗೊಳಗಾಗುತ್ತಾಳೆ. ಅದಕ್ಕೆ ಕಾರಣ ಆ ಜನಾಂಗದಲ್ಲಿರುವ ಮಡಿವಂತಿಕೆ ಸಂಪ್ರದಾಯ. ಧಾರ್ಮಿಕ ಅವಕಾಶಗಳಿಂದಲೂ ವಂಚಿತಳಾದ ಬ್ರಾಹ್ಮಣ ಮಹಿಳೆ ಅನುಭವಿಸುವ ಯಾತನೆ ತೀವ್ರತರವಾಗಿದೆ. ಇಂತಹ ಮುಖ್ಯ ಸಮಸ್ಯೆಗಳನ್ನು ಬಿಚ್ಚಿಡುವುದರ ಮೂಲಕ ಶಾರದಾ ಅವರ ಈ ಕಥಾನಕ ಸ್ತ್ರೀವಾದಿ ಚಳವಳಿ ತೀವ್ರಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಗಮನಸೆಳೆಯುತ್ತದೆ.

ವಾಸಂತಿ ಪಡುಕೋಣೆಯವರಿಗೆ ದೇವರಲ್ಲಿ ಬಲವಾದ ನಂಬಿಕೆಯಿತ್ತು. ಆ ನಂಬಿಕೆಯಿಂದಲೇ ಅವರು ಜೀವನವನ್ನು ಈಸಿದ್ದರು. ಜೀವನದ ಸಂಧ್ಯೆಯಲ್ಲಿ ಸಾಯಿಬಾಬಾ ಬಗ್ಗೆ ಅವರಿಗೆ ಶ್ರದ್ಧೆ ಬೆಳೆದಿತ್ತು ಆದರೆ ಅವರದ್ದು ತೋರಿಕೆಯ ಶ್ರದ್ದೆಯಾಗಿರಲಿಲ್ಲ. ಬಾಬಾ ಅವರ ದರ್ಶನದಲ್ಲಾಗಲೀ ಬಾಬಾ ಅವರ ಶಕ್ತಿಯ ಪ್ರದರ್ಶನದಲ್ಲಾಗಲೀ ಅವರು ಆಸಕ್ತಿ ತಾಳಲಿಲ್ಲ, ಧಾರ್ಮಿಕ ನಂಬಿಕೆ ಅವರಿಗೆ ಕಷ್ಟದ ಸಮಯದಲ್ಲಿ ಬಲ ಕೊಡುತ್ತಿತ್ತು. 'ಕಷ್ಟದಲ್ಲಿ ನಮ್ಮನ್ನು ಕೇಳುವವರು ಯಾರೂ ಇರಲಿಲ್ಲ. ಇದ್ದವನು ನಮ್ಮ ಪಾಲಿಗೆ ಪರಮಾತ್ಮನೊಬ್ಬನೇ! ಸದಾ ಆತನನ್ನು

೧. ಬದುಕು ಕೊಟ್ಟಿದ್ದು ಕಲಿಸಿದ್ದು– ಶಾರದ ಹೆಮ್ಮಿಗೆ, ಪು. ೪೦.

[illegible]

ಸ್ಮರಿಸುತ್ತಾ ಕಾಲ ಕಳೆಯುತ್ತಿದ್ದೆನು' ಎಂದು ವಾಸಂತಿ ಪಡುಕೋಣೆಯವರು ತಮ್ಮ ಆತ್ಮಕಥೆಯಾದ 'ಜೀವನ ಹೋರಾಟ'ದಲ್ಲಿ ಹೇಳಿಕೊಂಡಿದ್ದಾರೆ.

ವಾಸಂತಿಯವರ ಧಾರ್ಮಿಕತೆಗೆ ಧರ್ಮದ ಸಂಕುಚಿತ ಆಯಾಮವಿರಲಿಲ್ಲ. ಅವರೇ ಹೇಳುವಂತೆ 'ಯಾವಾಗಲೂ ಏನಾದರೂ ತಾಪತ್ರಯ ಬಂದಾಗ, ಮಾಹಿಮ್ ಚರ್ಚಿಗೆ ಹೋಗಿ ಬುಧವಾರ ಮೇಣದ ಬತ್ತಿಗಳನ್ನು ಉರಿಸುತ್ತಿದ್ದೆನು,' ಅವರು ಗಂಡನನ್ನು ಕಳೆದುಕೊಂಡಾಗ ಮಕ್ಕಳಿಗೆ ಸ್ಪಷ್ಟವಾಗಿ ಹೇಳಿದ್ದರು. 'ನನಗೆ ಬಿಳಿ ಸೀರೆ ಉಟ್ಕೊಳ್ಳೋದು, ಬರಿ ಹಣೇಲಿರೋದು ಇಷ್ಟ ಇಲ್ಲ. ನಾನು ಹೇಗೆ ಇದ್ದೇನೋ ಹಾಗೇ ಇರ್ತೀನಿ.

ವಾಸಂತಿಯವರ ವಿಚಾರವಂತಿಕೆ, ಜೀವನದುದ್ದಕ್ಕೂ ಅಂಧಶ್ರದ್ಧೆಗಳನ್ನು ಪ್ರಶ್ನಿಸುತ್ತಲೇ ಇತ್ತು ೧೯೭೬ರಲ್ಲಿ ಅವರು ಉಡುಪಿಗೆ ಬಂದಾಗ ಒಂದು ಸಂದರ್ಭದಲ್ಲಿ ಅವರು ಹೀಗೆ ಪ್ರತಿಕ್ರಿಯಿಸಿದ್ದರು. 'ಈ ದೇವಸ್ಥಾನದಲ್ಲಿ ಈಗಲೂ ಧರ್ಮಾರ್ಥ ಊಟದ ವ್ಯವಸ್ಥೆಯಿದೆ ನೂರಾರು ಜನ ಊಟ ಮಾಡುವರಂತೆ, ನನಗೆ ಆಶ್ಚರ್ಯವಾಯಿತು ಈ ಕಠಿಣ ದಿನಗಳಲ್ಲಿ ಆಲಸ್ಯ ಮತ್ತು ಬೇಜಾವಾಬ್ದಾರಿಗಳು ಹೆಚ್ಚುತ್ತದಲ್ಲವೇ? ಇನ್ನೊಂದು ಸಂದರ್ಭದಲ್ಲಿ ತಾವಿದ್ದ ಆಶ್ರಮದ ಬಗ್ಗೆ ಹೇಳುವಾಗ ಹೀಗೆಂದಿದ್ದಾರೆ; 'ಭಕ್ತಮಂಡಳಿ-ಯವರು ಮಾತಾಜಿಯವರ ಮತ್ತು ರಾಮದಾಸರ ಕಾಲಮೇಲೆ ಹಗಲಿರುಳು ನೂರಾರು ಸಲ ಬಿದ್ದು ನಮಸ್ಕಾರ ಮಾಡುತ್ತಿದ್ದರು, ಅವರಿಬ್ಬರ ಎಂಜಲು ತಿನ್ನಲಿಕ್ಕಾಗಿ ಗಂಟೆಗಟ್ಟಲೇ ಕಾಯುತ್ತಿದ್ದರು, ನನಗೆ ಇವೆಲ್ಲಾ ಆಗುತ್ತಿರಲಿಲ್ಲ.

ವಾಸಂತಿಯವರು ಸ್ವಾಭಿಮಾನಿ ಹೆಣ್ಣಾಗಿದ್ದರು, ೭೦ನೇ ವಯಸ್ಸಿನಲ್ಲೂ, ಅನೇಕ ಭಾಷೆಗಳಲ್ಲಿ ಪ್ರಕಟವಾದ ಸಾಹಿತ್ಯ ಕೃತಿಗಳನ್ನು ಓದುತ್ತಿದ್ದರು. ಸಿನಿಮಾ, ನಾಟಕಗಳನ್ನು ನೋಡುತ್ತಿದ್ದರು, ಸಂಗೀತ ಕಛೇರಿಗಳಿಗೆ ಹೋಗಿ ಬೇಸರವಿಲ್ಲದೆ ಕುಳಿತು ಕೇಳುತ್ತಿದ್ದರು, ಯಾವಾಗಲೂ ಏನಾದರೊಂದು ಕೆಲಸಮಾಡುತ್ತಿರುವುದು ವಾಸಂತಿ ಪಡುಕೋಣೆ-ಯವರ ಜಾಯಮಾನವಾಗಿತ್ತು.

ಚಿಕ್ಕಂದಿನಿಂದಲೂ ಪರರ ಮನೆಯಲ್ಲೇ ಇದ್ದು ಬೇಸತ್ತ ಮನಸ್ಸು ವಾಸಂತಿಯವರದ್ದು. ಆದರೆ ಬದುಕಿನಲ್ಲಿ ಹೋರಾಟದ ಜೀವನ ನಡೆಸಿ ಸ್ವಾತಂತ್ರ್ಯ ಕಂಡುಕೊಂಡರು, ಮುಪ್ಪಿನಲ್ಲಿ ಪುನಃ ಸ್ವಾತಂತ್ರ್ಯ ಕಳೆದುಕೊಂಡ ಅನುಭವ ಅವರದ್ದು ಐಡುಪಿದ್ದರೂ ಬಂಧು-ಮಿತ್ರರ ಮನೆಗಳಿಗೆ ತಿರುಗಾಡಲಿಕ್ಕೆ ಹೋಗುವುದು ಅವರಿಗಿಷ್ಟವಿರಲಿಲ್ಲ. ಪುರಾಣ, ಕೀರ್ತನೆ, ಭಜನೆಗಳಿಗೆ ಹೋಗುವುದು ಅವರಿಗೆ

ಹಿತವಲ್ಲ, ಸ್ನೇಹಿತರಿದ್ದರು ಅತ್ಯಂತ ನಿಕಟ ಸ್ನೇಹಿತರ್‍ಯಾರೂ ಇರಲಿಲ್ಲ. ಹಾಗಾಗಿ ಅವರು ಬರಹದತ್ತಲೇ ವಾಲಿದರು.

ಅನುಪಮಾ ನಿರಂಜನರು ಸಂಪ್ರದಾಯಸ್ಥ ನೇಕಾರ ಕುಟುಂಬದಲ್ಲಿ ಜನಿಸಿದ್ದರು. ಬ್ರಾಹ್ಮಣರಂತೆ ಮಡಿಹುಡಿ ಮಾಡದಿದ್ದರೂ ಹಬ್ಬ ಹರಿದಿನಗಳನ್ನೂ ಅಚ್ಚುಕಟ್ಟಾಗಿ ಆಚರಿಸುತ್ತಿದ್ದರು. ಪ್ರತಿದಿನವೂ ದೇವರ ಪೂಜೆ ನಡೆಯುತ್ತಿದ್ದು, ರಜಾ ದಿನಗಳಲ್ಲಿ ಮಕ್ಕಳೆಲ್ಲಾ ದೇವರ ಮುಂದೆ ಕುಳಿತು ಭಕ್ತಿಗೀತೆಗಳನ್ನು ಹೇಳುವ ಪರಿಪಾಠವನ್ನು ಹೇಗೆ ಬೆಳೆಸಿಕೊಂಡಿದ್ದರು ಎಂಬುದನ್ನು ಅನುಪಮಾ ನಿರಂಜನರು ತಮ್ಮ ಆತ್ಮಕಥೆಯಾದ ನೆನಪು ಸಿಹಿಕಹಿಯಲ್ಲಿ ಹೇಳಿಕೊಂಡಿದ್ದಾರೆ.

"ನಾನು ದೇವರನಾಮಗಳನ್ನು ಹಾಡುತ್ತಿದ್ದೆ ನನ್ನ ಜೊತೆಗೆ ತಮ್ಮಂದಿರೂ ದನಿಗೂಡಿಸುತ್ತಿದ್ದರು, ಎಲ್ಲರೂ ಸಾಲಾಗಿ ಕೂತು ಈ ರೀತಿ ಭಜನೆ ಮಾಡುತ್ತಿದ್ದೆವು. ನಾನು ಬಹುಭಕ್ತಿ ಪರವಶಳಾಗಿ ಹಾಡುತ್ತಿದ್ದೆ, ಮನೆಯ ವಾತಾವರಣ ಹಾಗಿತ್ತು, ತಾಯಿ ಸಿದ್ದ ಮಾಡಿಕೊಟ್ಟ ಮಂಗಳಾರತಿಯನ್ನು ಎತ್ತಿ ತಂದೆ ನಮಗೆಲ್ಲರಿಗೂ ಕೊಡುತ್ತಿದ್ದರೂ. ಬಾಳೆಹಣ್ಣಿನ ರಸಾಯನವೋ ತೀರ್ಥವೋ ಇರುತ್ತಿತ್ತು. ಅದನ್ನು ಸೇರಿಸಿ ನಾವೆಲ್ಲರೂ ದೇವರಿಗೆ ಉದ್ದಂಡ ನಮಸ್ಕಾರ ಹಾಕುತ್ತಿದ್ದೆವು."[೧]

ಬ್ರಾಹ್ಮಣರಲ್ಲದಿದ್ದರೂ ಧಾರ್ಮಿಕ ಆಚರಣೆಗಳನ್ನು ವಿಧಿವಿಧಾನಗಳನ್ನು ತಮ್ಮ ಕುಟುಂಬದವರು ಮಾಡುತ್ತಿದ್ದುದಾಗಿ ಲೇಖಕಿ ಹೇಳಿಕೊಂಡಿದ್ದಾರೆ. ಅನುಪಮಾ ಅವರಿಗೆ ಚಿಕ್ಕವಯಸ್ಸಿನಿಂದಲೂ ಮನೆಮಾಡಿದ್ದ ಪ್ರಶ್ನೆ ಮಾಡುವ ಪ್ರವೃತ್ತಿ, ವ್ಯವಸ್ಥೆಯ ಬಗೆಗೆ ಬಂಡಾಯವೇಳುವ ಮನೋಧರ್ಮವನ್ನು ಅಭಿವ್ಯಕ್ತಿಸುತ್ತವೆ. ಸಮಾಜದ ಎಲ್ಲ ಪಂಗಡಗಳಲ್ಲಿಯೂ ಅಸ್ತಿತ್ವದಲ್ಲಿರುವ ಜಾತಿ ಪದ್ಧತಿಯ ಬಗೆಗೆ ಅನುಪಮಾಗೆ ಬಹಳ ಪ್ರೀತಿ, ಅಕ್ಕಮ್ಮನವರಿಗೆ ಅನಿಬೆಸೆಂಟ್‌ರನ್ನು ಕಂಡರೆ ಮೆಚ್ಚುಗೆ. ಅವರ ಪ್ರಭಾವದಿಂದಾಗಿ ಅಕ್ಕಮ್ಮನವರು, ಜಾತಿಮತಗಳೆಲ್ಲ ಮನುಷ್ಯ ನಿರ್ಮಿತ ಎಂದು ಹೇಳುತ್ತಿದ್ದರೂ, ಹರಿಜನರನ್ನು ಮನೆಯೊಳಕ್ಕೆ ಸೇರಿಸುತ್ತಿರಲಿಲ್ಲ. ಅಕ್ಕಮ್ಮನವರ ಈ ವರ್ತನೆ ಹುಡುಗಿ ಅನುಪಮಾಗೆ ವಿಚಿತ್ರವೆನಿಸುತ್ತಿತ್ತು ಒಮ್ಮೆ ಹರಿಜನರೊಬ್ಬರು ಮನೆಗೆ ಬಂದಾಗ ಅವರನ್ನು ಒಳಗೆ ಸೇರಿಸದೆ ಅಕ್ಕಮ್ಮ "ಹರಿಜನರನ್ನು ಒಳಗೆ ಸೇರಿಸಬಾರದು" ಎಂದಾಗ ಈ ಮೊಮ್ಮಗಳು ಅಜ್ಜಿಯನ್ನು ಪ್ರಶ್ನಿಸಿಯೇ ಬಿಟ್ಟಳು. "ಅದ್ಯಾಕೆ? ಅವರೂ ಮನುಷ್ಯರಲ್ಲವೇ? ಪ್ರಪಂಚದಲ್ಲಿರೋರೆಲ್ಲ ಒಂದೇ ಎಂದು ಅವತ್ತು ಹೇಳಿದಿರಲ್ಲ?" ಈ ಸಂಗತಿ ಅಜ್ಜಿಯ ಹಾಗೂ ಸಮಾಜದ ಅನೇಕ ಜನರ ನಡೆನುಡಿಗಳ ನಡುವಿನ

೧. ನೆನಪು ಸಿಹಿ ಕಹಿ, ಡಾ. ಅನುಪಮಾ ನಿರಂಜನ ಪು. ೪೭.

ವಿರೋಧಾಭಾಸಗಳನ್ನು ಹುಡುಗಿಯ ಮನಸ್ಸಿನ ಮುಂದೆ ತೆರೆದಿಟ್ಟು ಮನುಷ್ಯ ನಿರ್ಮಿತ ವ್ಯವಸ್ಥೆಯಲ್ಲಿರುವ ಭೇದಭಾವಗಳನ್ನು ಪ್ರಶ್ನಿಸುತ್ತಾರೆ.

ಅಂತರ್‌ಜಾತಿಯ ವಿವಾಹವಾದ್ದರಿಂದ ಅನುಪಮಾರವರು ಸಾಕಷ್ಟು ಸಮಸ್ಯೆಗಳನ್ನು ಎದುರಿಸಬೇಕಾಯಿತು. ವೆಂಕಟಲಕ್ಷ್ಮಿಗೂ ನಿರಂಜನರ ಬಗೆಗೆ ಅಪಾರ ಒಲವು ಅಗಾಧ ಗೌರವ. ಆದರೆ ಈ ಪ್ರೀತಿ ಮದುವೆಯಲ್ಲಿ ಸಾಕ್ಷಾತ್ಕಾರಗೊಳ್ಳುವುದು ಅಷ್ಟು ಸುಲಭವಾಗಿರಲಿಲ್ಲ. ನಿರಂಜನ, ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದವರು. ವೆಂಕಟಲಕ್ಷ್ಮಿ ಸಂಪ್ರದಾಯಸ್ಥ ನೇಕಾರ ಕುಟುಂಬದವರು. ಶಿವರಾಮಯ್ಯನವರಿಗೆ ಮಗಳ ಪ್ರೇಮದ ವಿಷಯ ತಿಳಿದು ಅವರು ಕೋಪವಿಷ್ಟರಾದರು. ಆದರೆ ತಂದೆಯ ಕೋಪ, ಹೊಡೆತಗಳಾಗಲೀ, ತಾಯಿಯ ಕಣ್ಣೀರು ವಿರೋಧವಾಗಲೀ ಅನುಪಮಾರ ನಿರ್ಧಾರವನ್ನು ಬದಲಿಸಲಿಲ್ಲ. ಈ ವಿಷಯವಾಗಿ ತಮಗೂ ತಮ್ಮ ತಂದೆಗೂ ನಡೆದ ವಾದ ವಿವಾದಗಳನ್ನು ಅನುಪಮಾ ತಮ್ಮ ಆತ್ಮಕಥನದಲ್ಲಿ ದಾಖಲಿಸಿದ್ದಾರೆ.

ತಂದೆ : "ನಿನಗೂ ನಿರಂಜನರಿಗೂ ಪ್ರೀತಿಯಿರೋದು ನಿಜವೆ?

ನಾ : ಹೌದು

ತಂದೆ : ಇದನ್ನು ಮೊದಲೇ ನಮಗ್ಯಾಕೆ ಹೇಳಲಿಲ್ಲ?

ನಾ : ಈ ಮದುವೆಗೆ ನೀವು ಒಪ್ಪಲ್ಲ ಅಂತ ಗೊತ್ತಿತ್ತು. ಅದಕ್ಕೆ

ತಂದೆ : ಈಗಲೂ ನಾವು ಒಪ್ಪೋಕೆ ಸಾಧ್ಯವಿಲ್ಲ. ಅವನು ನಮ್ಮ ಜನವಲ್ಲ. ಈ ಮದ್ವೆ ಆದ್ರೆ ನಮ್ಮ ನೆಂಟರಿಷ್ಟರು ಏನಂತಾರೆ? ಸಮಾಜದಲ್ಲಿ ನಾವು ತಲೆ ಎತ್ತಿ ಬದುಕಲು ಸಾಧ್ಯವೇ?

ನಾ : ಜಾತಿ ಅಂತ ಯಾಕೆ ಮಾತಾಡ್ತೀರಿ ಅಣ್ಣ? ಜಾತಿ ಮನುಷ್ಯ ಮಾಡಿಕೊಂಡದ್ದಲ್ವೆ?

ತಂದೆ : ಬಹಳ ಬುದ್ಧಿವಂತಳ ಹಾಗೆ ತಲೆಹರಟೆ ಮಾತಾಡ್ಬೇಡ. ನಿಂಗೆ ಮದ್ವೆ ಆಗ್ಲೇಬೇಕೂಂತಿದ್ರೆ ನಮ್ಮ ಜಾತೀರೇ ಯಾರನ್ನಾದದ್ರೂ ಹುಡುಕೋಣ ನಿರಂಜನಾನ ಮರೆತ್ಬಿಡು". [೧]

ಸ್ವಾನುಭವದಿಂದ ಹಾಗೂ ನಿರಂಜನರ ಸ್ನೇಹ, ಸಹವಾಸಗಳಿಂದ ಬದುಕನ್ನು ಧೈರ್ಯದಿಂದ ಎದುರಿಸಬೇಕೆಂಬುದನ್ನು ಅನುಪಮಾ ಅರಿತಿದ್ದರು. ಆ ಕ್ಷಣದಲ್ಲಿ

೧. ನೆನಪು ಸಿಹಿ ಕಹಿ, ಡಾ. ಅನುಪಮಾ ನಿರಂಜನ, ಪು. ೯೪.

ಸಂಪ್ರದಾಯವಾದಿಯಾದ ತಂದೆಯನ್ನು ಎದುರುಹಾಕಿಕೊಳ್ಳುವುದು ಬೇಡವೆಂದು ಉಪಾಯವಾಗಿ ತಮ್ಮ ಕಾರ್ಯ ಸಾಧಿಸಿಕೊಳ್ಳಲು ನಿರ್ಧರಿಸಿದ ಅನುಪಮಾ ಅರಿತಿದ್ದರು. ಆ ಕ್ಷಣದಲ್ಲಿ ಸಂಪ್ರದಾಯವಾದಿಯಾದ ತಂದೆಯನ್ನು ಎದುರುಹಾಕಿಕೊಳ್ಳುವುದು ಬೇಡವೆಂದು ಉಪಾಯವಾಗಿ ತಮ್ಮ ಕಾರ್ಯ ಸಿದ್ಧಿಸಿಕೊಳ್ಳಲು ನಿರ್ಧರಿಸಿದ ಅನುಪಮಾ ತಾವೇ ನಿರಂಜನರನ್ನು ಮರೆತು ಬಿಡುವುದಾಗಿ ತಂದೆಗೆ ಹೇಳಿದರು. ನಿರಂಜನ ಯಾವ ಶಾಸ್ತ್ರ, ಸಂಪ್ರದಾಯಗಳನ್ನು ನಂಬದ ಬ್ರಾಹ್ಮಣ, ಅನುಪಮಾ ಸಂಪ್ರದಾಯಸ್ಥ ನೇಕಾರ ಕುಟುಂಬದವಳಾಗಿದ್ದು ನಿರಂಜನರನ್ನು ಹಿಂಬಾಲಿಸಿ ಬಂದವರು. ಭಾರದ್ವಾಜ ದಂಪತಿಗಳು ಇವರನ್ನು ನಿರಂಜನರಿಗೆ ಧಾರೆಯೆರೆದು ಕೊಟ್ಟಾಗಿನ ತಮ್ಮ ಭಾವನೆಗಳನ್ನು ಅನುಪಮಾ ಹೀಗೆ ದಾಖಲಿಸಿದ್ದಾರೆ: "ನಿರಂಜನರ ಹಸ್ತಗಳಲ್ಲಿ ನನ್ನ ಹಸ್ತಗಳನ್ನಿಟ್ಟಾಗ ನನಗೆ ಮೊದಲಬಾರಿಗೆ ಉಮ್ಮಳ ಬಂತು. ಇಲ್ಲಿ ನನ್ನ ತಂದೆ, ತಾಯಿಯಿಲ್ಲ. ಒಡಹುಟ್ಟಿದವರು ಆರು ಜನರಿದ್ದರೂ ಅಲ್ಲಿಗೆ ಬಂದಿದ್ದವನು ವಿಶ್ವ ಒಬ್ಬನೆ ಆತ್ಮೀಯ ಸ್ನೇಹಿತರಿದ್ದರು... ಆಗ ಅನಿಸಿತು. ನಿರಂಜನರ ಕೈಹಿಡಿದು ಪ್ರಪಂಚದ ಕೊನೆಯವರೆಗೂ ಹೋಗಬಲ್ಲೆ. ಆ ಗಳಿಗೆಯಲ್ಲಿ ನನಗೆ ದುಃಖವಾಗಲಿಲ್ಲ. ಸಂಪ್ರದಾಯದ ಸಂಕೋಲೆ ಕಳಚಿಬಂದೆನೆಂದು ಸಂತೋಷವಿತ್ತು, ತೃಪ್ತಿಯಿತ್ತು"[೧] ಎಂದು ಹೇಳಿದ್ದಾರೆ.

ವೈದ್ಯಕೀಯ ಅಧ್ಯಯನ ಮಾಡಿದ್ದರೂ, ಎಡಪಂಥೀಯ ವಿಚಾರಧಾರೆಯಲ್ಲಿ ನಂಬಿಕೆಯಿದ್ದರೂ, ಪೂಜೆ, ಪುರಸ್ಕಾರಗಳಂತಹ ಆಚರಣೆಗಳಿಂದ ಸಂಪೂರ್ಣವಾಗಿ ಬಿಡಿಸಿಕೊಳ್ಳುವುದು ಅನುಪಮಾ ಸಾಧ್ಯವಾಗಲಿಲ್ಲ. ಮದುವೆಯಾದ ಮೇಲೂ ಹಲವಾರು ದಿನಗಳು ಪೂಜೆ ಪುರಸ್ಕಾರಗಳನ್ನು ಮಾಡುತ್ತಿದ್ದರಂತೆ. ನಿರಂಜನರೂ ಕೂಡ, ತಮ್ಮ ಸಿದ್ಧಾಂತಗಳು ತಮ್ಮ ಹೆಂಡತಿಯ ಮೇಲೆ ಹೇರುತ್ತಿರಲಿಲ್ಲ. ಬದಲಿಗೆ ಪ್ರಗತಿಪರ ಆಲೋಚನೆಗಳನ್ನು ಅನುಪಮಾರ ಮುಂದಿಟ್ಟು, ವಿಚಾರ ಪ್ರಚೋದಕ ಸಾಹಿತ್ಯವನ್ನು ಓದುವಂತೆ ಪ್ರೋತ್ಸಾಹಿಸುತ್ತಿದ್ದರು. ವಿಸ್ತಾರವಾದ ಓದು, ನಿರಂಜನರ ಪ್ರಭಾವ, ಸ್ವಾನುಭವಗಳಿಂದ ನೆಲೆಯಿಂದ ವೈಚಾರಿಕ ಹಾಗೂ ವೈಜ್ಞಾನಿಕ ನೆಲೆಯಲ್ಲಿ ತಾವು ಸ್ಥಿರಗೊಂಡಿದ್ದನು ಅನುಪಮಾ ತಮ್ಮ ಆತ್ಮಕಥನದಲ್ಲಿ ವಿವರಿಸಿದ್ದಾರೆ.

೧. ನೆನಪು ಸಿಹಿ ಕಹಿ, ಡಾ. ಅನುಪಮಾ ನಿರಂಜನ, ಪುಟ. ೧೦೩.

ಅಧ್ಯಾಯ – ೬

ಮಹಿಳಾ ಆತ್ಮಕಥೆಗಳ ಆಶಯ

ಒಂದು ಆತ್ಮಕಥನ ಓದು ಎಂದರೆ ಅದು ಓರ್ವ ವ್ಯಕ್ತಿ ಮತ್ತು ಅವರ ಬದುಕಿನೊಂದಿಗೆ ನಡೆಸುವ ಅನುಸಂಧಾನ. ಇತರರ ಹೋರಾಟದ ಬದುಕನ್ನು ಅರಿತಾಗ, ನಮಗೆ ನಾವು ಎದುರಿಸುವ ವರ್ತಮಾನದ ಕಷ್ಟಗಳು ಹತ್ತಿಯಂತೆ ಹಗುರವಾಗಿ ಕಾಣಬಹುದು. ನಮ್ಮ ಇಕ್ಕಟ್ಟುಗಳಿಂದ ಬಿಡುಗಡೆಹೊಂದಲು ಒಳಕಿಂಡಿ-ಗಳನ್ನು ತೆರೆಯಬಹುದು. ಸಮಸ್ಯೆಗಳ ಸರ್ವಸಾಮಾನ್ಯತೆ ಮತ್ತು ಆಳ-ವಿಸ್ತಾರಗಳ ಅರಿವನ್ನು ನೀಡಬಹುದು. ಸಂಘಟನೆಯ ಅಗತ್ಯವನ್ನು ಮನವರಿಕೆ ಮಾಡಬಹುದು ಮತ್ತು ಇಂತಹ ಇನ್ನೂ ಅನೇಕ ಸಾಧ್ಯತೆಗಳನ್ನು ಮುಂದಿಡಬಹುದು. ನಮ್ಮ ಲೋಕಾನುಭವದ ಮತ್ತು ಲೋಕದೃಷ್ಟಿಯನ್ನು ವಿಸ್ತರಿಸುವ ಕೆಲಸದಲ್ಲಿ ಆತ್ಮಕತೆಗಳ ಓದು ಸಾಕಷ್ಟು ಫಲಪ್ರದ ಎನಿಸುತ್ತದೆ.

"ಮಹಿಳಾ ಆತ್ಮಕಥೆಗಳು ನಮ್ಮ ಮುಂದಿನ ಪೀಳಿಗೆಗೆ ಮಾರ್ಗದರ್ಶನವೂ ಆಗಬಹುದು. ತಾವು ಕನಸುಕಂಡ ಒಂದು ಬದುಕನ್ನು ತಮ್ಮದಾಗಿಸಿಕೊಳ್ಳಲು ಮಹಿಳೆಯರು ಎಷ್ಟು ಹೆಣಗಾಡಬೇಕಾಗುತ್ತದೆ; ಎಷ್ಟೊಂದು ತ್ಯಾಗ ಮಾಡಬೇಕಾಗುತ್ತದೆ ಅಥವಾ ಹಲವು ವಿಧದಲ್ಲಿ ಹೆಣಗಾಡಿದರೂ ತಮ್ಮ ಕನಸಿನ ಬದುಕು ಕೈಗೆಟುಕದಿರುವಾಗ ಮಹಿಳೆಯರ ಬದುಕು ಯಾವ ಹಾದಿ ಹಿಡಿಯಬಹುದು ಮುಂತಾದ ಹಲವಾರು ವಿಷಯಗಳ ಕುರಿತು ಮಹಿಳೆಯರು ಪ್ರಾಮಾಣಿಕವಾಗಿ ಬರೆದರೆ ಅದು ಮಹಿಳಾ ಲೋಕಕ್ಕೆ ಒಂದು ಉತ್ತಮ ಆಸ್ತಿಯಾಗಬಹುದು. ಫ್ಲೇವಿಯೊ ಎಂಬ ಕ್ರೈಸ್ತ ಮಹಿಳೆ ಗಂಡನ ದೌರ್ಜನ್ಯ ಮತ್ತು ಹಿಂಸೆ ತಾಳಲಾರದೆ ಆ ಬದುಕಿನಿಂದ ಹೊರಬಂದು ತನ್ನ ಶಿಕ್ಷಣ ಮುಂದುವರೆಸಿ ನ್ಯಾಯವಾದಿಯಾಗಿ ತನ್ನಂತೆ ನೊಂದ ಮಹಿಳೆಯರಿಗೆ ಸಹಕರಿಸುವಂತಹ ಹೊಸ ಬದುಕನ್ನೇ ರೂಢಿಸಿಕೊಂಡದ್ದು ಸಾಮಾನ್ಯ ಮಹಿಳೆಯರಿಂದಾಗುವ ಕಾರ್ಯದಲ್ಲಿ, ಮಹಿಳೆಯರಲ್ಲಿ ಅಂತಹ ಛಲವೂ ಬೇಕು; ಹಾಗೆಯೇ ತನ್ನ ಆತ್ಮಕಥೆ ಬರೆದು ಬದುಕಿನಲ್ಲಿ ತಾನು ಕಂಡುಂಡ ನೋವುಗಳನ್ನು ಇತರರಿಗೆ ತಿಳಿಯಪಡಿಸುವ ಧೈರ್ಯವೂ ಬೇಕು ಮತ್ತು ಆ ಮೂಲಕ ಆ ರೀತಿ ನೊಂದ ಮಹಿಳೆಯರ ಬದುಕಿಗೆ ಹೊಸ ಹಾದಿ ತೋರಿ ಅವರಲ್ಲಿ ನವಚೈತನ್ಯ ಉಕ್ಕಿಸುವ ಒಂದು ಮನೋಭಾವವೂ ಮಹಿಳೆಯರಲ್ಲಿರಬೇಕು"[೧]

---

೧. ಮಹಿಳಾ ಆತ್ಮಕಥೆಗಳು ಅನುಸಂಧಾನ – ಸಬಿಹಾ ಭೂಮಿಗೌಡ, ಪುಟ –೪.

ಬರವಣಿಗೆ ಅನ್ನುವುದು ಯಾವತ್ತೂ ಹೆಣ್ಣುಮಕ್ಕಳಿಗೆ ಎರಡನೆಯ ಆದ್ಯತೆ. ಮೊದಲನೆಯದು ಕುಟುಂಬ; ಅದರ ಸುಖ, ಶಾಂತಿ, ನೆಮ್ಮದಿ, ಸ್ವಂತದೇನಿದ್ದರೂ ಆಮೇಲೆ. ಬರವಣಿಗೆ ತಂದುಕೊಡುವ ಆತ್ಮಸಮ್ಮಾನ, ಪ್ರತಿಷ್ಠೆ, ನೆಮ್ಮದಿ, ಸಂತೋಷ ಅಷ್ಟಷ್ಟು ಆರ್ಥಿಕ ಸೌಲಭ್ಯಗಳ ಹಿಂದೆ ಎಲ್ಲಾ ಅಡೆತಡೆಗಳನ್ನು ಮೀರಿ ಬರೆಯಬೇಕೆಂಬ ಒತ್ತಡ ಒಳತುಡಿತಗಳು ಎಷ್ಟರಮಟ್ಟಿಗೆ ಪ್ರಬಲವಾಗಿರುತ್ತವೆ. ಅನ್ನುವುದರ ಮೇಲೆ ಲೇಖಕಿಯೊಬ್ಬಳ ಬರವಣಿಗೆ ಸಾಗಿದೆ ಮತ್ತು ಸಾಗುತ್ತಿದೆ. ಮಹಿಳೆಯರ ಜೀವನದ ಅನುಭವಗಳು, ಆ ಅನುಭವಗಳನ್ನು ಅವರು ವ್ಯಕ್ತಪಡಿಸುವ ಕ್ರಮ, ಸಮಸ್ಯೆಗಳಿಗೆ ಅವರು ಸ್ಪಂದಿಸುವ ಪರಿ. ಅವರ ವಿಚಾರ ಧಾಟಿ ಇವೆಲ್ಲಾ ಪುರುಷರಿಗಿಂತ ವಿಭಿನ್ನ, ವಿಶಿಷ್ಟ ಲೇಖಕಿಯೊಬ್ಬಳು ಆತ್ಮಕಥನ ಬರೆದರೆ ಅದು ಸಾಹಿತ್ಯಲೋಕಕ್ಕೆ ಒಂದು ಅಪೂರ್ವಕೊಡುಗೆಯಾಗಿ, ಮಹಿಳಾ ಸಂವೇದನೆಯ ದಾಖಲೆಯಾಗುವುದರಲ್ಲಿ ಸಂದೇಹವೇನಿಲ್ಲ. ನಿರ್ಬೀಡೆಯಿಂದ, ನಿಸ್ಸಂಕೋಚದಿಂದ, ಎಲ್ಲವನ್ನೂ ಹೇಳಿಕೊಳ್ಳುವ ಛಾತಿ ಅವಳಿಗೆ ಬಂದೀತೇ ಎನ್ನುವುದು ಕಾಲಕ್ಕೆ ಬಿಟ್ಟ ವಿಚಾರ. ಬದಲಾಗುತ್ತಿರುವ ಕಾಲದ ಮುನ್ಸೂಚನೆಯೆಂಬಂತೆ ದಾಖಲಾಗಿರುವ ಕೆಲ ಲೇಖಕಿಯರ ಆತ್ಮಕಥನಗಳು ಸ್ಫೂರ್ತಿಯಾಗುತ್ತವೆ.

ಆತ್ಮಕಥೆಯೆಂಬುದು ಲೇಖಕಿಯ ಆತ್ಮಶೋಧ ಮತ್ತು ಸಾಮಾಜಿಕ ಶೋಧವಾಗಿದ್ದು ಚರಿತ್ರೆಯ ಒಂದು ಭಾಗವೂ ಆಗಿ ಹೊರಬಂದಾಗ ಮಾತ್ರ ಸಾರ್ವತ್ರಿಕತೆ ಮತ್ತು ಸಾರ್ವಕಾಲಿಕತೆಯನ್ನು ಪಡೆಯುವ ಒಂದು ಸಾಹಿತ್ಯ ಕೃತಿಯಾಗಿ ನೆಲೆನಿಲ್ಲುತ್ತದೆ. ಅನಾದಿಕಾಲದಿಂದ ಸ್ತ್ರೀಯರ ಮೇಲೆ ಸಂಪ್ರದಾಯವು ಹೇರಿದ ವಿಧಿ-ನಿಷೇಧಗಳನ್ನು ಮೆಟ್ಟಿನಿಂತು ಸ್ವತಂತ್ರರಾಗಲು ಸ್ತ್ರೀಯರು ನಡೆಸುವ ಹೋರಾಟದ ದುರ್ಗಮ ಹಾದಿಯಲ್ಲೆದುರಾದ ಕಲ್ಲುಮುಳ್ಳುಗಳ ಪರೋಕ್ಷ ಚಿತ್ರಣವನ್ನು ಕಥೆಕವನಗಳ ಮೂಲಕ ಪ್ರಕಟಪಡಿಸಿದಂತೆಯೇ ಅವುಗಳ ನೇರನಿರೂಪಣೆಗಾಗಿ ಆತ್ಮಕಥನದಂತೆ ಬರೆದು ಸಶಕ್ತ ಮಾಧ್ಯಮವನ್ನು ಅವರು ಆವರಿಸಿಕೊಂಡಿದ್ದು ಅವರ ಸೃಜನಶೀಲತೆಗೆ ಪ್ರತ್ಯಕ್ಷ ಸಾಕ್ಷಿ, ತಪ್ಪುಗಳಿಗಾಗಿ ಪರಿತಪಿಸುವುದು, ದೌರ್ಬಲ್ಯಗಳನ್ನೂ ಮೀರುವುದು ಸಣ್ಣತನ ಮತ್ತು ಸಂಕುಚಿತ ಬುದ್ಧಿಗಳನ್ನು ಸಾರ್ವಜನಿಕವಾಗಿ ಹೊರಹಾಕಿ ಮನಸ್ಸನ್ನು ಶುದ್ಧಮಾಡಿಕೊಳ್ಳುವ ವಿಶಾಲ ಮನೋಭಾವವನ್ನು ಬೆಳೆಸಿಕೊಳ್ಳುವರು ಮಾತ್ರ ಇತರರಿಗೆ ಆದರ್ಶರಾಗುತ್ತಾರೆ. ಸತ್ಯ ಹೇಳಲು ಧೈರ್ಯ ಮತ್ತು ಆತ್ಮವಿಶ್ವಾಸಗಳು ಬೇಕು. ಸಮಾಜವು ಮಾಡುವ ಕುರುಡು ಟೀಕೆಗಳಿಗೆ ಕಿವಿಗೊಡದಿರುವ ಎದೆಗಾರಿಕೆ ಬೇಕು. ಸ್ತ್ರೀಗಿರುವಷ್ಟು ಕಟ್ಟುಪಾಡುಗಳಿಲ್ಲದಿರುವ ಪುರುಷರು ಈ ರೀತಿಯಲ್ಲಿ ಆತ್ಮಕಥೆಗಳನ್ನು ಬರೆದಾಗ ಓದುಗರು ಮೆಚ್ಚಿಕೊಳ್ಳುತ್ತಾರೆ ಮತ್ತು ಅಂಥವರನ್ನು ಮಹಾತ್ಮರೆಂದು

ಕರೆಯುತ್ತಾರೆ. ಆದರೆ ಓರ್ವ ಸ್ತ್ರೀ ಸತ್ಯ ಹೇಳಿದಾಗ ಜಗತ್ತು ಬೆಚ್ಚಿಬೀಳುತ್ತದೆ. ಆಕೆಯ ಹಿಂದಿನಿಂದ ಗೇಲಿಮಾಡುತ್ತ, ಮುಂದಿನಿಂದ ಚುಚ್ಚಿ ಮಾತನಾಡುತ್ತ ಆಕೆಯನ್ನು ಮಾನಸಿಕವಾಗಿ ಹಿಂಸಿಸುತ್ತದೆ ಮತ್ತು ಆಕೆಗೆ ಬಹಿಷ್ಕಾರ ಹಾಕುತ್ತದೆ. ಆದ್ದರಿಂದ ತನ್ನ ಆತ್ಮಕಥೆಯನ್ನು ಬರೆಯುವಾಗ ಪ್ರತಿಯೊಬ್ಬ ಲೇಖಕಿಯು ತಾನು ಬಳಸುವ ಪ್ರತಿ ಅಕ್ಷರದ ಬಗ್ಗೆಯೂ ಅದರ ಪರಿಣಾಮವನ್ನು ಊಹಿಸಿಕೊಂಡು ಎಚ್ಚರದಿಂದ ಬರೆಯಬೇಕಾಗುತ್ತದೆ. ಭಾರತೀಯ ಭಾಷೆಗಳಲ್ಲಿ ಅನೇಕ ಲೇಖಕಿಯರು ಈ ಎಲ್ಲ ಕಷ್ಟ-ನಿಷ್ಠುರಗಳ ನಡುವೆಯೂ ತಮ್ಮ ಮುಂದಿನ ಪೀಳಿಗೆಯ ಹೆಣ್ಣುಮಕ್ಕಳಿಗೆ ದಾರಿದೀಪವಾಗಬಹುದಾದಂತಹ ಆತ್ಮಕಥೆಗಳನ್ನು ಪ್ರಕಟಿಸಿರುವುದು ಹೆಮ್ಮೆಪಡಬೇಕಾದ ವಿಚಾರ.

ಸಮಾಜದ ರಾಜಕೀಯ ಆರ್ಥಿಕ ಪ್ರಕ್ರಿಯೆಗಳ ಪರಿಣಾಮಗಳು ಕೂಡ ಆತ್ಮಕಥೆ ಬರವಣಿಗೆಯ ಹಿಂದೆ ಒತ್ತಾಸೆಯಾಗಿ ಕೆಲಸಮಾಡಿವೆ. ಹಲವಾರು ಬೇರೆ ಕೃತಿಗಳನ್ನು ಪ್ರಕಟಿಸಿ ಲೇಖಕರು ಅವುಗಳಲ್ಲಿ ತಾವು ಹೇಳಬೇಕಾದದುದ್ದನ್ನು ಹೇಳಿರುತ್ತಾರೆ. ಆದರೆ ಅದು ಸಾಲದೆಂಬಂತೆ ಅಥವಾ ಆತ್ಮಕಥೆಗಳ ಮೂಲಕ ಮತ್ತ್ಯಾವುದೋ ಹೇಳಬೇಕಾದುದು ಇದೆ ಎಂಬಂತೆ ಆತ್ಮಕಥೆಯನ್ನು ಬರೆದಿರುತ್ತಾರೆ. ಆದ್ದರಿಂದ ಆತ್ಮಕಥೆಗಳ ಹಿಂದೆ ಲೇಖಕರ ಮಹತ್ವದ ಆಶಯವೊಂದು ಇದ್ದೇ ಇರುತ್ತದೆ.

ಆತ್ಮಕಥೆಗಳಲ್ಲಿ ಕೇವಲ ಆತ್ಮಕಥನಕಾರನ ಜೀವನ ವಿವರಗಳು ಮಾತ್ರ ಇರುವುದಿಲ್ಲ. ಒಂದು ವೇಳೆ ಕೇವಲ ಜೀವನವಿವರಗಳೇ ಆತ್ಮಕಥನಗಳು ಎನ್ನುವುದಾದರೆ ಅದಕ್ಕೆ ಕೇವಲ ಹತ್ತಾರು ಪುಟಗಳು ಮಾತ್ರವೇ ಸಾಕಾದೀತು. ಆದರೆ ಬಹುತೇಕ ಆತ್ಮಕಥನಗಳು. ನೂರಾರು ಪುಟಗಳನ್ನು ಒಳಗೊಂಡಿರುತ್ತದೆ. ಅವರಲ್ಲಿ ಜೀವನ ವಿವರಗಳೂ ಇರುತ್ತವೆ. ಜೊತೆಗೆ ತನ್ನ ಪರಿಸರದ ಇನ್ನಿತರ ವಿಚಾರಗಳೂ ಇರುತ್ತವೆ. ಪ್ರಾಯಶಃ ಯಾವ ಸಂಗತಿಗಳನ್ನು ತನ್ನ ಇತರೆ ಸಾಹಿತ್ಯ ಕೃತಿಗಳ ಮೂಲಕ ಪ್ರಕಟಿಸಲು ಆಗಿರುವುದಿಲ್ಲವೋ, ಅಂತಹವುಗಳನ್ನು ಪ್ರಕಟಿಸಲು ಆತ್ಮಕಥನಗಳು ಹುಟ್ಟುಕೊಳ್ಳುತ್ತವೆ.

"ಆತ್ಮಕಥೆಗಳನ್ನು ಪ್ರಧಾನವಾಗಿ ಸಾಹಿತಿಗಳು ಬರೆದಿದ್ದಾರೆ. ಉಳಿದಂತೆ ಹೋರಾಟಗಾರರು ಮಠಾಧೀಶರು, ರಾಜಕಾರಣಿಗಳು, ಸಾಮಾನ್ಯ ಶಿಕ್ಷಕ, ಹತ್ತುವರ್ಷ ಆಸ್ಪತ್ರೆಯಲ್ಲೇ ಕಳೆದ ಅಂಗವಿಕಲ, ಪೊಲೀಸ್ ಅಧಿಕಾರಿ, ಒಬ್ಬ ನಿವೃತ್ತ ಅಂಚೆಪೇದೆಯವರೆಗೂ ಬರೆದಿದ್ದಾರೆ. ಇವರೆಲ್ಲರೂ ಸಮಾಜದ ವಿಭಿನ್ನ ವರ್ಗದವರು ಮತ್ತು ವಿಭಿನ್ನ ಮನೋಧರ್ಮದವರು. ಈ ಹಿಂದಿನ ದಶಕಗಳಿಗೆ ಹೋಲಿಸಿದರೆ

[illegible]

ನಿರ್ದಿಷ್ಟವಾಗಿ ಈ ೯೦ರ ದಶಕದಲ್ಲಿ ಆತ್ಮಕಥೆಗಳು ಹೆಚ್ಚು ಬಂದಿವೆ. ಈ ಅಂಶವೂ ಆತ್ಮಕಥೆಗಳ ಬಗ್ಗೆ ಕುತೂಹಲ ಮತ್ತು ಆಸಕ್ತಿಯನ್ನು ಹುಟ್ಟಿಸುತ್ತದೆ.[೧] ಈ ಎಲ್ಲಾ ಬರವಣಿಗೆಗಳಲ್ಲಿ ಎದ್ದು ಕಾಣುವ ಒಂದು ಸಾಮಾನ್ಯ ಅಂಶವೆಂದರೆ ಬರವಣಿಗೆಯಲ್ಲಿ ದಾಖಲಾಗಬೇಕೆಂಬ ಒಂದು ಬಗೆಯ ಚಿತ್ರವಾದ ತಹತಹ ಆತ್ಮಕಥೆಗಳು ಮಾಹಿತಿಯ ದೃಷ್ಟಿಯಿಂದ ಬರೆದವರ ವೈಯಕ್ತಿಕ ಚರಿತ್ರೆಗಳು; ಆದರೆ ಇದು ಇಲ್ಲಿಗೆ ನಿಲ್ಲದೆ ನಿರೂಪಣೆಯ ಸೈದ್ಧಾಂತಿಕ ಕ್ರಮದಿಂದಾಗಿ ಅವು ಸಾಮಾಜಿಕ ಚರಿತ್ರೆಯ ಭಾಗಗಳೂ ಹೌದು. ತನ್ನ ಜೀವನ ವಿವರಗಳು ತನ್ನ ಬರವಣಿಗೆಯ ಮೂಲಕವೇ ದಾಖಲಾಗಬೇಕು ಎಂಬ ಹಂಬಲ ಕೇವಲ ವೈಯಕ್ತಿಕ ತುಡಿತದಂತೆ ಕಂಡರೂ ಅದರಾಚೆಗಿನ ಜಗತ್ತು ಇದನ್ನು ಪ್ರೇರೇಪಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಕನ್ನಡದಲ್ಲಿ ರಚಿತವಾಗಿರುವ ಕೆಲವು ಮಹಿಳಾ ಆತ್ಮಕಥೆಗಳನ್ನು ಅಧ್ಯಯನ ಮಾಡಿದಾಗ ಅದರ ಆಶಯವನ್ನು ಈ ಕೆಳಕಂಡಂತೆ ನೋಡಬಹುದು. ಪುರುಷ ಪ್ರಧಾನವ್ಯವಸ್ಥೆಯಲ್ಲಿ ಗಂಡಸರೇ ಶ್ರೇಷ್ಠ ಎಂಬಂತಹ ಕಲ್ಪನೆಗಳಿರುವಾಗ ಹೆಣ್ಣು ತಾನು ಕೂಡ ಶ್ರೇಷ್ಠ ಎಂದು ಹೇಳಿಕೊಳ್ಳಲು ಅಪಾರಸಿದ್ಧತೆ ಮತ್ತು ಮನಸ್ಥೈರ್ಯ ಬೇಕು ಎನ್ನುವುದರ ಅರಿವಿದ್ದು ಬದುಕಿದವರು ಅನುಪಮಾ ನಿರಂಜನ, ಗಂಡುಹೆಣ್ಣು ಮಕ್ಕಳನ್ನು ಅಸಮಾನ ನೆಲೆಯಲ್ಲೇ ಬೆಳೆಸುವ ಪರಿಸರದಲ್ಲಿ ಬೆಳೆದ ಅನುಪಮಾ ಅವರಿಗೆ ಸಾಹಿತ್ಯ ಅಪಾರ ಆಸಕ್ತಿಯ ವಿಷಯವಾಗಿತ್ತು. 'ಹೊಟ್ಟೆಪಾಡಿಗಾಗಿ ಅದು ನೆರವಾಗುವುದಿಲ್ಲ' ಎನ್ನುವುದು ತಂದೆಯ ಅಭಿಪ್ರಾಯ-ವಾಗಿದ್ದರೇ ಮನೆಯವರ ಗಮನಕ್ಕೆ ಬರದಂತೆ ಸಾಹಿತ್ಯ ಕ್ಷೇತ್ರಕ್ಕೆ ಕಾಲಿಟ್ಟವರು ಆಕೆ. ಹಾಗಾಗಿ ಕೌಟುಂಬಿಕ ಪರಿಸರ ಸೃಜನಶೀಲತೆಗೆ ದೊಡ್ಡ ಇಂಬಾಗಲೂಬಹುದು, ಮಾರಕವಾಗಲುಬಹುದು.

ಅನುಪಮಾ ಆತ್ಮಕಥನ ಬರೆದಿದ್ದು ತಮ್ಮ ೪೮ನೆಯ ವಯಸ್ಸಿನಲ್ಲಿ ಅನುಪಮಾ ಗೆಳತಿಯೊಬ್ಬರು ಅವರಿಗೆ ಒಮ್ಮೆ "ಅನುಪಮಾ ನೀವೊಂದು ಆತ್ಮಕಥನ ಬರೀಬೇಕು. ಅದರಲ್ಲಿ ನೀವೊಂದು ಅಧ್ಯಾಯ. ನಿರಂಜನರು ಒಂದು ಅಧ್ಯಾಯ ಬರೆದ್ರೆ ತುಂಬಾ ರಸವತ್ತಾಗಿರುತ್ತೇ" ಅಂತ. ಆದರೆ ಅನುಪಮಾ ಒಬ್ಬರೇ ತಮ್ಮ ಆತ್ಮಕಥೆಯನ್ನು ಬರೆದರು. ತಮ್ಮ ಬದುಕು, ಸಾವಿನ ಹತ್ತಿರ ಸಾಗುತ್ತಿರುವುದನ್ನು ತಿಳಿದು ಸಿಹಿ-ಕಹಿಯನ್ನು ದಾಖಲಿಸುವುದರಲ್ಲಿ ತಮ್ಮ ನೋವನ್ನು ಮರೆತರು. ಪ್ರೇಮ, ವಿವಾಹ,

---

೧. ಮಹಿಳಾ ಆತ್ಮಕಥೆಗಳು ಅನುಸಂಧಾನ - ಸಜಿಹಾ ಭೂಮಿಗೌಡ, ಪು. ೬೨.

ವಿದ್ಯಾಭ್ಯಾಸ, ಮಕ್ಕಳು ಇವುಗಳ ಜೊತೆಗೆ ತಾವು ಅನುಭವಿಸಿದ ದೈಹಿಕ ಯಾತನೆ, ಮಾನಸಿಕ ನೋವು ಎಲ್ಲವೂ ಆತ್ಮಕಥೆಯಲ್ಲಿ ದಾಖಲಾಗಿದೆ.

ಅನುಪಮಾರ ಸಾಹಿತ್ಯದಲ್ಲಿ ಕಂಡುಬರುವ ಸ್ತ್ರೀಪರ ನಿಲುವು, ಶೋಷಣೆಯ ವಿರುದ್ಧದ ಧ್ವನಿ, ಆದರೂ ಹೆಣ್ಣು ಮೂಲತಃ ತನ್ನ ಸಂಸಾರವನ್ನು ತನ್ನ ಮನೆಯನ್ನು ರೂಪಿಸುವಂತಹ ಕುಶಲ ಶಿಲ್ಪಿ ಎಂಬುವ ಪರಿಕಲ್ಪನೆಗಳು ಪ್ರಸ್ತುತ ಸಾಮಾಜಿಕ ಘಟ್ಟದಲ್ಲಿ ಅವಶ್ಯಕವೆನಿಸುತ್ತದೆ. ಅನುಪಮಾ ಸ್ವತಃ ತಮ್ಮ ಪರಿಕಲ್ಪನೆಗಳನ್ನು ಬಾಳಿನಲ್ಲಿ ಅಳವಡಿಸಿ ಕೊಂಡಿದ್ದರು. ವೈದ್ಯ ವೃತ್ತಿ, ಗೃಹಕೃತ್ಯ, ಸಮಾಜಸೇವೆ, ಸಾಹಿತ್ಯ ಸೃಷ್ಟಿ ಎಲ್ಲವನ್ನೂ ಸಾಮರಸ್ಯದಿಂದ ನಿರ್ವಹಿಸಿದ ಧೀಮಂತ ಮಹಿಳೆ ತ್ರಿವೇಣಿ. ಎಂ.ಕೆ.ಇಂದಿರಾ ಮತ್ತಿತರ ಮಹಿಳಾ ಲೇಖಕಿಯರಂತೆ ಅನುಪಮಾ ಕೂಡ ಕನ್ನಡ ಮಹಿಳಾಲೋಕದಲ್ಲಿ ಓದಿನ ಅಭಿರುಚಿ ಹುಟ್ಟಲು ಕಾರಣರಾದವರು ಹಾಗೂ ಸಮಕಾಲೀನ ಜೀವನದ ವಿಭಿನ್ನ ಮುಖಗಳನ್ನೂ ತಮ್ಮ ಸಾಹಿತ್ಯದ ಮೂಲಕ ಜನರಿಗೆ ಪರಿಚಯಿಸುವರು. ಅವರ ಕಷ್ಟಸಹಿಷ್ಣುತೆ, ಅನುಕಂಪ, ತನ್ನ ನೋವನ್ನು ಮರೆತು ನಕ್ಕು ನಗಿಸುವ ಮನೋಧರ್ಮ ಅನುಕರಣೀಯ, ಕ್ಯಾನ್ಸರಿನ ತೀವ್ರ ನೋವನ್ನು ಅನುಭವಿಸುತ್ತಲೇ "ಸಿಹಿಕಹಿ"ಯಂತಹದೊಂದು ಕೃತಿರಚಿಸಿ. ಓದಿದವರ ಮನಸ್ಸಿನಲ್ಲಿ ಬದುಕಿನ ಬಗೆಗೆ ಭರವಸೆ, ಗೌರವ, ಶ್ರದ್ಧೆಗಳನ್ನು ಹುಟ್ಟಿಸಿ, ಬದುಕಿನ ಸವಾಲುಗಳನ್ನು, ಕಷ್ಟಗಳನ್ನು ಸಮಚಿತ್ತದಿಂದ, ಧೈರ್ಯದಿಂದ ಎದುರಿಸುವಂತಹ ಶಕ್ತಿ ನೀಡುವ ಅನುಪಮಾ ನಿಜಕ್ಕೂ ಅನನ್ಯ ಚೇತನ. ದೈಹಿಕವಾಗಿ, ಮಾನಸಿಕವಾಗಿ, ಬದುಕಿನ ಜಂಜಾಟದಿಂದ ಸೋತವರಿಗೆ, "ನೆನಪು ಸಿಹಿಕಹಿ" ಸ್ಫೂರ್ತಿ, ಶಕ್ತಿ, ಬದುಕುವ ಆಸೆಗಳನ್ನು ತುಂಬುವಂತಹ ಅದ್ಭುತ ಟಾನಿಕ್‌ನಂತೆ ಕೆಲಸಮಾಡುತ್ತದೆ.

ಅನುಪಮಾರ ನೆನಪು ಸಿಹಿಕಹಿ ಓದುಗರಿಗೆ ಹೇಗೆ ಮಾರ್ಗದರ್ಶನ ಕೃತಿಯಾಗಿತ್ತು ಎಂಬುದನ್ನು ಓದುಗರೊಬ್ಬರು ಅನುಪಮಾರಿಗೆ ಬರೆದ ಪತ್ರದ ಮೂಲಕ ತಿಳಿಯಬಹುದು.

"ನಿಮ್ಮ ಆತ್ಮಕಥನ ಓದಿ ನಮಗೆ ಧೈರ್ಯ ಬಂದಿದೆ. ಕಷ್ಟಬಂದಾಗ, ತುಂಬ ದುಃಖವಾದಾಗ ಅದನ್ನು ಓದುತ್ತೇವೆ. ಆಗ ನಿಮ್ಮಂತೆಯೇ ನಾವು ಕೂಡ ಗೆಲ್ಲಬಹುದೆಂಬ ಆತ್ಮವಿಶ್ವಾಸ ಬರುತ್ತದೆ".

"ಒಂದು ಗ್ರಂಥದಿಂದ ಒಂದಷ್ಟು ಜನರಿಗೆ ಧೈರ್ಯವನ್ನೂ ಆತ್ಮವಿಶ್ವಾಸವನ್ನೂ ಕೊಡಲು ಸಾಧ್ಯವಾಯಿತೆಂದರೆ ಬರಹಗಾರ್ತಿಗೆ ಅದಕ್ಕಿಂತ ದೊಡ್ಡ ಸಾರ್ಥಕತೆ ಯಾವುದಿದೆ? ಎಂದು ಅನುಪಮಾರವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ".[೧]

೧. ಬರಹಗಾರ್ತಿಯ ಬದುಕು – ಅನುಪಮ ನಿರಂಜನ, ಪು. ೪೭.

ಹಾಗೆಯೇ ಕನ್ನಡದಲ್ಲಿ ಮೊದಲಬಾರಿಗೆ "ಜೀವನಹೋರಾಟ" ಎಂಬ ಆತ್ಮಕಥೆಯನ್ನು ಬರೆದುಕೊಂಡ ಪಡುಕೋಣೆಯವರು ತಾವು ಬದುಕಿನಲ್ಲಿ ಕಂಡುಂಡ ಅನುಭವದ ಹಿನ್ನೆಲೆಯಲ್ಲಿ ಹೇಳಿರುವ ಮಾತು ಗಮನಾರ್ಹ. "ಪತಿಯೇ ಪತ್ನಿಯ ದೇವರು ಎಂಬ ಭಾವನೆ ಆ ಕಾಲಕ್ಕೆ ಇತ್ತಲ್ಲವೇ? ಆತ ಹೊಡೆಯಲಿ, ಬಡಿಯಲಿ, ಸಮಾಜದಲ್ಲಿ ಅದನ್ನು ವಿರೋಧಿಸುವ ಹಕ್ಕು ಹೆಂಗಸರಿಗಿದ್ದರಲ್ಲವೆ? ಪತಿ ಎನಿಸಿಕೊಂಡವನಿಗೆ ಸಮಾಜದಲ್ಲಿ ಮರ್ಯಾದೆ, ಆದರೆ ಸ್ತ್ರೀಯರಿಗೆ? ನನ್ನಂತೆ ಅದೆಷ್ಟೋ ಸ್ತ್ರೀಯರು ಬಾಯಿ ಮುಚ್ಚಿಕೊಂಡು, ಮಕ್ಕಳ ಮುಖ ನೋಡಿಕೊಂಡು ತೆಪ್ಪಗೆ ಎಲ್ಲವನ್ನೂ ಸಹಿಸಿಕೊಳ್ಳಲೇಬೇಕಾಗಿತ್ತು. ಅವರ ಕಾಲಕ್ಕೆ ಇದು ಸಾಮಾನ್ಯ ಸಂಗತಿಯಾಗಿತ್ತು. ಅವರ ಪತಿ ದುಡಿದು ಕುಟುಂಬದ ಅಗತ್ಯವನ್ನು ಪೂರೈಸದಿರುವಾಗ ಬದುಕಿನ ನೊಗಕ್ಕೆ ಹೆಗಲುಕೊಟ್ಟವರು ಆಕೆ. ಶಿಕ್ಷಣವನ್ನು ಮುಂದುವರೆಸಿ ಉದ್ಯೋಗಕ್ಕೆ ಸೇರಿದರು. ಪತಿ ಅಕಾರಣವಾಗಿ ದೊರೆತ ಕೆಲಸ ಬಿಟ್ಟು ಊರಿಂದೂರಿಗೆ ಹೊರಟಾಗ ಅವರೊಂದಿಗೆ ಹೋಗಿ ಹೊಸ ಪರಿಸರದಲ್ಲಿ ಮತ್ತೆ ಬದುಕಿನ ಹೋರಾಟಕ್ಕೆ ಸಜ್ಜಾದವರು ವಾಸಂತಿ.

ತಾಯಿಗೆ ಮಕ್ಕಳು ಭಾರವಲ್ಲ ಎಂಬ ಮಾತಿದೆ. ಆದರೆ ಇದು ಪೂರ್ಣಸತ್ಯವಲ್ಲ. ವಾಸಂತಿ ಪಡುಕೋಣೆ ಗರ್ಭಿಣಿಯಾದಾಗ ಇರುವ ಮಕ್ಕಳು ನಾಕೆಂದು ಎರಡು ಬಾರಿ ಗರ್ಭ ಇಳಿದುಹೋಗಲಿ ಎಂದು ಪ್ರಯತ್ನಿಸಿದರಂತೆ, ತಾಯ್ತನದ ಭಾರಕ್ಕೆ ಎಷ್ಟೋ ಮಹಿಳೆಯರು ರೋಸಿದ್ದಿದೆ. ಆದರೆ ಅವರು ಬಾಯಿ ತೆರೆಯುವ ಪರಿಸರ ಇರಲಿಲ್ಲ. ಬದುಕಿನಲ್ಲಿ ಎಷ್ಟೇ ಅಡೆತಡೆಗಳು ಎದುರಾದರೂ ಬರವಣಿಗೆಗೆ ವಿಮುಖರಾಗಲಿಲ್ಲ. ಪ್ರತಿಯೊಬ್ಬರ ಬದುಕಿನಲ್ಲಿ ಹೋರಾಟವೆಂಬುದು ಇದ್ದದ್ದೆ. ಇದು ಅನಿರೀಕ್ಷಿತವೂ, ಅಲ್ಲ ಆಕಸ್ಮಿಕವೂ ಅಲ್ಲ. ಮಾನವನ ಬದುಕನ್ನು ಎದುರಿಸುವ ಕೆಚ್ಚು ಅವರನ್ನು ಕೈಹಿಡಿದು ನಡೆಸಿರಬಹುದು.

'ಈಗೇನ್ ಮಾಡಿರಿ?' ಎನ್ನುವ ಪ್ರಶ್ನೆಯೇ ಕೃತಿಯ ನೆಲೆಯಾವುದೆನ್ನುವುದನ್ನು ಸೂಚಿಸುತ್ತದೆ. ದು.ಸರಸ್ವತಿ ಕೆಲವು ವರ್ಷಗಳಿಂದ ಮಹಿಳಾ ಚಳುವಳಿಯ ಭಾಗವಾಗಿದ್ದವರು. ಲೇಖಕಿಯ ಬದುಕಿನ ಕೆಲವು ಬಳೆಗಳನ್ನು ಬಚ್ಚಿಡುವ ಕೃತಿ ಇದು. ಹೊರಜಗತ್ತಿನ ವ್ಯವಹಾರದ ಅರಿವಿಲ್ಲದ ಮುಗ್ಧ ಮನಸ್ಸಿನ ವ್ಯಕ್ತಿ ಇತರರು ಎಸಗಿದ ತಪ್ಪಿಗಾಗಿ ಹಿಂಸೆಗೆ, ನೋವಿಗೆ ಒಳಗಾದುದರ ವಿವರಗಳನ್ನು ಇದು ದಾಖಲಿಸುತ್ತದೆ. ಹೆತ್ತವರ ಬೆಚ್ಚನೆಯ ಆಶ್ರಯದಲ್ಲಿಬೆಳೆದು, ಜಗತ್ತನ್ನು ಆ ದೃಷ್ಟಿಯಿಂದ ಗ್ರಹಿಸಿ, ಎಲ್ಲವೂ ಸರಿಯಾಗಿದೆ ಎಂದು ತಿಳಿದು ಹೊರಜಗತ್ತಿಗೆ ಕಾಲಿಟ್ಟರೆ ಅಲ್ಲಿನ ಮೋಸ, ವಂಚನೆ, ದಗಲಬಾಜಿತನ – ಇವೆಲ್ಲ ವ್ಯಕ್ತಿತ್ವವನ್ನು ನಾಶಗೈಯಲು ಹೊಂಚುಹಾಕಿರುವ ಸಂಗತಿಗಳ

ಅನಾವರಣ ಇಲ್ಲಿವೆ. ಅನೂಹ್ಯ ರೀತಿಯಲ್ಲಿ ಆಘಾತಕ್ಕೊಳಗಾದಾಗ ವ್ಯಕ್ತಿ ಕುಗ್ಗಿ ಹೋಗಿ ತೀರಾ ಹತಾಶ ಸ್ಥಿತಿಗೆ ತಲುಪಬಹುದು. ಗಟ್ಟಿತನ ಇದ್ದಾಗ ತನ್ನಲ್ಲಿ ಭರವಸೆ ಉಳಿದುಕೊಂಡು ಮತ್ತೆ ಎದ್ದು ನಿಂತು ಹೋರಾಟ ನಡೆಸುವ ಸಾಧ್ಯತೆಯನ್ನು ಕಾಣಿಸುವುದು ಕೃತಿಯ ಇತ್ಯಾತ್ಮಕ ಅಂಶ. ಮುನ್ನುಡಿಯಲ್ಲಿ ಕೆ.ವಿ.ನಾರಾಯಣ ಅವರು ಗುರುತಿಸುವಂತೆ ಸರಸ್ವತಿಯವರ ಈ ಕಥನವನ್ನು ಒಂದು ಅನುಭವ ಕಥನವಾಗಿ ಮಾತ್ರ ಓದುವುದು ಸಾಧ್ಯವಿಲ್ಲ. ವಿಕಾಸಗೊಳ್ಳುತ್ತ ಹೋದಂತೆ ಜೀವನದವಲಯ ಹಿಗ್ಗುತ್ತಾ ಹೋದಂತೆ ಒದಗುವ ಕುಗ್ಗಿಸುವ ಅನುಭವಗಳ ನೋವನ್ನು ವ್ಯಕ್ತಿ ಎದುರಿಸುವ ಕ್ರಮವನ್ನು ನಮ್ಮೆದುರು ತೆರೆದಿಡುವ ಕಥನವಿದು. ಇದು ಜೀವನ ಶ್ರದ್ಧೆಯ ಕಥನ.

ಏಳನೆಯ ತರಗತಿ ಮುಗಿಯುತ್ತಿದ್ದಂತೆ ವೈವಾಹಿಕ ಬದುಕಿಗೆ ಕಾಲಿಟ್ಟವರು ಪರಮೇಶ್ವರಿ ಲೋಕೇಶ ತಮ್ಮ ಅರವತ್ತು ವರ್ಷಗಳ ಬದುಕನ್ನು 'ಬಹುಧಾನ್ಯದಿಂದ ಬಹುಧಾನ್ಯಕೆ' ಕೃತಿಯಲ್ಲಿ ಅನಾವರಣಗೊಳಿಸಿದ್ದಾರೆ. ಯೌವನದಲ್ಲಿ ಗಂಡನನ್ನು ಕಳೆದುಕೊಳ್ಳುವ ಆಕೆ ಕಂಗೆಡದೆ, ತಮ್ಮ ಶಿಕ್ಷಣ ಮುಂದುವರಿಸಲು ಶ್ರಮಿಸಿದ್ದು, ಉದ್ಯೋಗ ಪಡೆಯಲು ಪಟ್ಟಪಾಡು, ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸುವ ಮೂಲಕ ತಮ್ಮ ಜವಾಬ್ದಾರಿ ನಿಭಾಯಿಸಿದ್ದು ಇವೆಲ್ಲ ಮಹಿಳೆಯ ಸಾಮರ್ಥ್ಯಕ್ಕೆ ಸವಾಲಾದ ಸಂಗತಿ. ಬಂಧುಗಳ ಸಹಾಯವಿಲ್ಲದೆ, ಬದುಕು ಮೂರಾಬಟ್ಟೆಯಾಗದಂತೆ ರೂಪಿಸಿಕೊಂಡು ಮಹಿಳೆ ಅಬಲೆ ಎನ್ನುವುದು ಒಂದು 'ಮಿಥ್' ಎನ್ನುವುದನ್ನು ಸಾಬೀತು ಮಾಡಿದರು.

ಅಕ್ಷರಸಂಸ್ಕೃತಿಯ ಅರಿವಿಲ್ಲದ ಕಾಡಿನಿಂದ ನಾಡಿಗೆ ತಳ್ಳಲ್ಪಟ್ಟ ಜಾಜಿತಿಮ್ಮಯ್ಯ ಅವರ ಆತ್ಮಕಥೆ 'ಹೆಜ್ಜೇನು' ಒಂದು ಗಮನಾರ್ಹ ಕೃತಿ. ಅವರ ಆತ್ಮಕಥೆ ರವೀಂದ್ರ ಭಟ್ಟ ಐನಕೈ ಅವರ ನಿರೂಪಣೆಯಲ್ಲಿ ಪುಸ್ತಕರೂಪ ತಾಳಿದೆ. ಜಾಜಿ ತಿಮ್ಮಯ್ಯ ಜೇನು ಕುರುಬ ಆದಿವಾಸಿ ಮಹಿಳೆ, 'ಎಲ್ಲರನ್ನೂ ಸಲಹುವವಳು ಕಾಡವ್ವ' ಎನ್ನುವ ನಂಬಿಕೆಯಲ್ಲಿ ಬೆಳೆದ ಮಹಿಳೆಯಾಗಿ ಅದಕ್ಕೆ ಕಂಟಕ ಬಂದಾಗ ತಮ್ಮ ಹಕ್ಕಿನ ವಿರುದ್ಧ ಹೋರಾಡಿದ್ದು ಅವರಲ್ಲಿದ್ದ ನಾಯಕತ್ವಗುಣಕ್ಕೆ ಉದಾಹರಣೆಯಾಗಿದೆ. ಶಾಲೆಯ ಮಹತ್ವವನ್ನು ಅರಿಯದೇ ಬೆಳೆದ ಆಕೆ ರಾತ್ರಿ ಶಾಲೆಯಲ್ಲಿ ಕಲಿತು ಮುಂದೆ ಹಾಡಿಯ ಮಕ್ಕಳಿಗೆ ಶಿಕ್ಷಕಿಯಾದದ್ದು ತನ್ನವರ ಬಗೆಗೆ ಅವರಲ್ಲಿದ್ದ ಕಾಳಜಿಯನ್ನು ತೋರಿಸುತ್ತದೆ. 'ಕೈ ಜೋಡಿಸಿ ನಿಲ್ಲುವುದರ ಬದಲು ತಮ್ಮ ಹಕ್ಕನ್ನು ಪಡೆದುಕೊಳ್ಳಬೇಕು' ಎನ್ನುವ ಮಾತು ಸಮುದಾಯದ ಪರವಾಗಿ ಹೋರಾಡುವವರಿಗೆ ಮಾರ್ಗದರ್ಶನ ನೀಡುವಂಥದು.

[illegible]

ಪಿತೃ ಪ್ರಧಾನ ಸಮಾಜದ ನಡುವೆಯೂ ಅನೇಕ ಲೇಖಕಿಯರಿಗೆ ತಂದೆಯಿಂದ ಬರವಣಿಗೆಗೆ ಸಾಕಷ್ಟು ಪ್ರೋತ್ಸಾಹ, ಬೆಂಬಲ ದೊರೆತಿದೆ. ಮಧ್ಯಮವರ್ಗದ ಸುಶಿಕ್ಷಿತ ಕುಟುಂಬಗಳಲ್ಲಿ ದಿನನಿತ್ಯದ ಬದುಕಿಗೆ ವ್ಯತ್ಯಯ ಬರದಂತೆ ಬಿಡುವಿನ ವೇಳೆಯಲ್ಲಿ ಮಹಿಳೆ ಬರವಣಿಗೆ ಮಾಡಲು ಅವಕಾಶವಿತ್ತು. ಇವರೆಲ್ಲ ಸುಶಿಕ್ಷಿತ ಕುಟುಂಬಕ್ಕೆ ಸೇರಿದವರಾದುದರಿಂದ ಶಿಕ್ಷಣ ಪಡೆಯಲು ಸಾಧ್ಯವಾಯಿತು. ಮಲ್ಲಿಕಾ ಕಡಿದಾಳ, ಪದ್ಮಾಶೆಣ್ಯೆ, ಪದ್ಮಾಗುರುರಾಜ ಮುಂತಾದವರು ತಮ್ಮ ಅಭಿವ್ಯಕ್ತಿಗೆ ಅವಕಾಶ ಮಾಡಿಕೊಂಡರೂ ಮಹಿಳಾ ದೃಷ್ಟಿಯಿಂದ ಬರವಣಿಗೆ ಮಾಡಿದ್ದು ಕಡಿಮೆ. ಮಹಿಳೆಯರನ್ನು ಎರಡನೆಯ ದರ್ಜೆಯ ಪ್ರಜೆಯಂತೆ ಕಾಣುತ್ತಿರುವ ಸಾಮಾಜಿಕ ಧೋರಣೆಯನ್ನು ವೈಯಕ್ತಿಕ ನೆಲೆಯಲ್ಲಾಗಲೀ, ಬರವಣಿಗೆಯ ಮೂಲಕವಾಗಲೀ ಪ್ರಶ್ನಿಸಲಿಲ್ಲ. ಆದರೆ ಮಲ್ಲಿಕಾಕಡಿದಾಳ ಅವರು ವಿವಾಹಪೂರ್ವದಲ್ಲಿಯೇ ಬರವಣಿಗೆಯನ್ನು ಪ್ರಾರಂಭಿಸಿದ್ದರೂ ರಾಜಕೀಯ ವ್ಯಕ್ತಿಯೊಂದಿಗೆ ವಿವಾಹ ಕಾರಣದಿಂದ ೪೦ ವರ್ಷದಾಟುವವರೆಗೆ ತಿರುಗಿ ಹಿಡಿಯಲು ಸಾಧ್ಯವಾಗಲಿಲ್ಲ ಎನ್ನುವುದು ಮಹಿಳೆಯರಿಗಿರುವ ಅವಕಾಶ ಎಷ್ಟು ಎನ್ನುವುದನ್ನು ಸೂಚಿಸುತ್ತದೆ. ತಾವು ಲಿಂಗವ್ಯವಸ್ಥೆಯ ತಾರತಮ್ಯಕ್ಕೆ ಒಳಗಾದುದನ್ನು ಅದರಿಂದ ಪಟ್ಟಪಾಡನ್ನು ಮಾಲತಿಪಟ್ಟಣಶೆಟ್ಟಿ, ಶಶಿಕಲಾ ವೀರಯ್ಯಸ್ವಾಮಿ, ಗೀತಾನಾಗಭೂಷಣ ಅವರು ಮುಕ್ತವಾಗಿ ಬಿಚ್ಚಿಟ್ಟಿದ್ದಾರೆ.

"ಧಾರ್ಮಿಕ ಅಲ್ಪಸಂಖ್ಯಾತ ಮಹಿಳೆಯರು ಧರ್ಮದ ಹೆಸರಿನಲ್ಲಿ 'ಒಳಗೆ' ಮಹಿಳೆಯ ಮೇಲೆ ನಡೆಯುತ್ತಿರುವ ಶೋಷಣೆಗಳನ್ನು ಅನಾವರಣಗೊಳಿಸಿದಂತೆ ಇರುವ ಸಾಮಾಜಿಕ ಒತ್ತಡವು ಅಭಿವ್ಯಕ್ತಿಯನ್ನು ಹತ್ತಿಕ್ಕಲು ಪ್ರಯತನಿಸುವುದನ್ನು ಸಾರಾ ಅಬೂಬಕ್ಕರ್ ಅವರ ಬದುಕಿನ ಸಂದರ್ಭವು (ಮುಸ್ಲಿಂ, ಹುಡುಗಿ ಶಾಲೆ ಕಲಿತದ್ದು) ಬಿಚ್ಚಿಡುತ್ತದೆ. ಕೌಟುಂಬಿಕ ಬದುಕಿಗೂ ಇರುವ ತಾಕಲಾಟವನ್ನು ಇತರ ಲೇಖಕಿಯರು 'ಕಾಣಿಸಿದರೆ, ಗೀತಾನಾಗಭೂಷಣ ಅವರ ಬದುಕಿನ ಅನುಭವ ಭಿನ್ನ ನೆಲೆಯದು. ಶ್ರೇಣಿಕೃತ ಸಮಾಜ ವ್ಯವಸ್ಥೆಯಲ್ಲಿ ಶಿಕ್ಷಣವನ್ನು ನಿರಾಕರಿಸಿದ ಸಮುದಾಯದಲ್ಲಿ ಹುಟ್ಟಿ, ಶಿಕ್ಷಣ ಪಡೆಯುವುದೇ ಒಂದು ಸವಾಲಾದುದು ಮೇಲುವರ್ಗದ ಮಹಿಳೆಯರಿಂದಲೇ ಅಪಮಾನಕ್ಕೆ ಈಡಾದುದು. ಅದನ್ನು ಎದುರಿಸಿ ಸಮಾಜದಲ್ಲಿ ಮಾನ್ಯತೆಗಳಿಸಿದುದು ಒಂದು ಸಾಹಸಗಾಥೆ. ಲಿಂಗವ್ಯವಸ್ಥೆಯ ತಾರತಮ್ಯದೊಂದಿಗೆ ಸಾಮಾಜಿಕ ತಾರತಮ್ಯವು ಸೇರಿದಾಗಿನ, ನೋವು ಎಷ್ಟೆನ್ನುವುದು ಗಮನಾರ್ಹ ಅಂಶ.[೧] ಇಬ್ಬಗೆಯಲ್ಲಿ ಮಹಿಳೆ ಶೋಷಣೆಗೆ ಒಳಗಾಗುವುದರ ತೀವ್ರತೆಯನ್ನು ಅವರ ಅನುಭವ

---

೧. ಮಹಿಳಾ ಆತ್ಮಕಥೆಗಳು ಅನುಸಂಧಾನ – ಸಬಿಹಾ ಭೂಮಿಗೌಡ, ಪು. ೧೦೨, ೧೦೪.

ಕಥನ ಕಂಡರಿಸುತ್ತದೆ. ಮಹಿಳೆಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಅವುಗಳನ್ನು ರಕ್ಷಿಸಲು ಸಮಾಜ ಮತ್ತು ಕುಟುಂಬ ಸಿದ್ಧವಾಗಿರುವಂತೆ ಮೇಲುನೋಟಕ್ಕೆ ಅನಿಸುತ್ತದೆ. ಲಾಗಾಯ್ತಿನಿಂದ ಮಹಿಳೆ ಅದನ್ನು ನಿಜವೆಂದೇ ತಿಳಿಯುತ್ತಾ ಬಂದಿದ್ದಾಳೆ. ಮಹಿಳೆಯ ರಕ್ಷಣೆಯ ಹೊಣೆಗಾರಿಕೆ ಪುರುಷನದು ಎನ್ನುವ ಸಮಾಜ ಧೋರಣೆಯನ್ನು ವೈದೇಹಿಯವರು ನವಿರಾದ ವ್ಯಂಗ್ಯದಲ್ಲಿ ತೆರೆದಿಟ್ಟಿದ್ದಾರೆ. ಇಂಥ ನಡವಳಿಕೆ ಮಹಿಳೆಯರನ್ನು ಅಬಲೆ ಎಂದು ಭಾವಿಸುವುದರ ಪ್ರತೀಕ ಎನ್ನುವ ಸೂಕ್ಷ್ಮವನ್ನು ಅವರದೇ ಆದ ನೆಲೆಯಲ್ಲಿ ಅನಾವರಣಗೊಳಿಸಿದ್ದಾರೆ.

ಒಂದು ಹೆಣ್ಣು ಸಮಾಜದಲ್ಲಿ ಜೀವಿಸಬೇಕಾದ ಅವಳು ಕೌಟುಂಬಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ, ಸಾಹಿತ್ಯಕವಾಗಿ, ಧಾರ್ಮಿಕವಾಗಿ ಹೀಗೆ ಹಲವಾರು ಸಮಸ್ಯೆಗಳನ್ನು ಅವಳು ಎದುರಿಸುತ್ತಿದ್ದಾಳೆ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡು ಅವನಿಂದ ಶೋಷಣೆಗೆ ಒಲಗಾಗುತ್ತಿದ್ದಾಳೆ. ಸ್ವಾತಂತ್ರವಾಗಿ ಬರೆಯುವ ಓದುವ, ಬದುಕುವ ಅವಕಾಶವು ಅವಳಿಗೆ ಇಲ್ಲದಂತಾಗಿದೆ.

ಮಹಿಳೆಯು ಸಮಾಜದಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡು ಮುಂದುವರೆಯಬೇಕೆಂದು ಎಷ್ಟೇ ಪ್ರಯತ್ನಿಸಿದರೂ ಅವಳಿಗೆ ಸರಿಯಾದ ರೀತಿಯಲ್ಲಿ ಪ್ರೋತ್ಸಾಹ, ಬೆಂಬಲ ಸಿಗುತ್ತಿಲ್ಲ. ಸಿಕ್ಕಿದರೂ ತೊಂದರೆಯಾಗುವಂತಹ ಸಂದರ್ಭಗಳೂ ಹೆಚ್ಚಾಗಿ ಕಂಡುಬರುತ್ತವೆಯೇ ವಿನಃ ಅವಳ ಗುರಿಸಾಧನೆಗೆ ಸ್ಫೂರ್ತಿ ಸಿಗುತ್ತಿಲ್ಲ.

ಹೀಗೆ ಇಲ್ಲಿಯವರೆಗೂ ಚರ್ಚಿಸಲಾದ ಮಹಿಳಾ ಆತ್ಮಕಥೆಗಳಲ್ಲಿ ಲೇಖಕಿಯರು ಮುಕ್ತವಾಗಿ ತಮ್ಮ ಜೀವನದಲ್ಲಿ ನಡೆದ ಪ್ರತಿಯೊಂದು ಘಟನೆಯನ್ನು ಓದುಗರ ಮುಂದೆ ತೆರೆದಿಟ್ಟಿದ್ದಾರೆ. ತಮ್ಮ ಬದುಕಿನಲ್ಲಿ ಎಷ್ಟೇ ಸಮಸ್ಯೆಗಳು ಬಂದರು ಆತ್ಮವಿಶ್ವಾಸವನ್ನು ಬಿಡದೆ ಇವರು ತಮ್ಮದೇ ಆದ ಸಾಧನೆಯನ್ನು ಮಾಡಿದ್ದಾರೆ. ಇಂದಿಗೂ ಸಹ ಎಷ್ಟೋ ಜನರು ತಮ್ಮ ಜೀವನದಲ್ಲಿ ಸೋಲನ್ನನುಭವಿಸುತ್ತಾ, ಕಷ್ಟದಲ್ಲಿ ಜೀವನವನ್ನು ನಡೆಸುತ್ತಿದ್ದಾರೆ. ಇಂತಹವರು ಇವರ ಆತ್ಮಕಥೆಗಳನ್ನು ಓದಿದಾಗ ಮಾರ್ಗದರ್ಶನವನ್ನು ನೀಡುತ್ತ, ಬದುಕಿನಲ್ಲಿ ಭರವಸೆಯನ್ನು ತುಂಬುತ್ತಾ ಜೀವನದಲ್ಲಿ ಮುಂದೆ ಹೋಗಲು ಸಹಾಯಕ ಕೃತಿಗಳಾಗಿವೆ.

ಅಧ್ಯಾಯ – ೭

ಅಧ್ಯಯನದ ಫಲಿತಗಳು

ಆತ್ಮಕಥೆಯಲ್ಲಿ ತಿಳಿಸುವ ಪ್ರತಿಯೊಂದು ವಿಷಯವು ಇತರರಿಗೆ ಜೀವನದಲ್ಲಿ ಸ್ಫೂರ್ತಿನೀಡುವಂಥಾಗಿರಬೇಕು. ತಮ್ಮ ಜೀವನದಲ್ಲಿ ಎದುರಾದ ಸಮಸ್ಯೆಗಳನ್ನು ಹೇಗೆ ಎದುರಿಸಿದೆ, ಸಂಕಷ್ಟಗಳನ್ನು ಹೇಗೆ ಮೀರಿ ನಿಂತೆ ದಾಟಿ ಬಂದೆ, ಹೇಗೆ ಜೀವನಮುಖಿಯಾಗಿ ಬೆಳೆದೆ ಎಂಬ ಸಕಾರಾತ್ಮಕ ಭಾವನೆಯಿಂದ ಬರೆದು, ಅದು ಓದುಗರಲ್ಲೂ ಅವರವರ ನಕಾರಾತ್ಮಕ ಭಾವವನ್ನು ಕಳೆದು ಜೀವನ ಪ್ರೀತಿ ಹುಟ್ಟಿಸಿದರೆ ಅಂತಹ ಆತ್ಮಚರಿತ್ರೆ ಸಾರ್ಥಕತೆ ಕಾಣುತ್ತದೆ. ಮಹಿಳೆಮಹಿಳೆಯಾಗಿ ಎದುರಿಸಿದ ಸಮಸ್ಯೆಗಳು, ಸಂಕಷ್ಟಗಳು ಅದನ್ನು ಮಹಿಳೆ ಎದುರಿಸಿದ ರೀತಿ ದಾಟಿಬಂದ ಕ್ರಮ ಮುಖ್ಯವೆನಿಸುತ್ತದೆ. ಇಂದಿಗೂ ಸಹ ಎಷ್ಟೋ ಮಹಿಳೆಯರು ಕಷ್ಟದಲ್ಲಿ ಜೀವನವನ್ನು ನಡೆಸುತ್ತಾ ಆತ್ಮವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಅಂತಹವರಿಗೆ ಈ ಆತ್ಮಕಥೆಗಳು ಮಾರ್ಗದರ್ಶಕವಾಗುತ್ತಾ ಜೀವನದಲ್ಲಿ ಭರವಸೆಯನ್ನು ತುಂಬುವ ಕೃತಿಗಳಾಗಿವೆ.

ಈ ನಿಟ್ಟಿನಲ್ಲಿ ಅನುಪಮಾ, ವಾಸಂತಿ, ಶಾರದಹೆಮ್ಮಿಗೆ, ಸಾರಾ ಅವರ ಆತ್ಮಕಥೆಗಳು ಅವರ ಬದುಕಿನ ಒಳಗನ್ನು, ಹೊರಗನ್ನು ಮುಕ್ತವಾಗಿ ತೋರಿಸುತ್ತದೆ. ಮಹಿಳೆಯರ ಆತ್ಮಕಥೆಗಳೇ ಕಡಿಮೆಯಿರುವ ಸಂದರ್ಭದಲ್ಲಿ ಇವರ ಆತ್ಮಕಥೆಯ ಪ್ರಯತ್ನಗಳು ತುಂಬಾ ಮಹತ್ವವನ್ನು ಪಡೆಯುತ್ತವೆ.

ಅನುಪಮಾರವರ ಆಯಸ್ಸು ದೀರ್ಘವಾಗಿರದಿದ್ದರೂ, ಅವರು ಬೌದ್ಧಿಕವಾಗಿ, ಸಾಂಸ್ಕೃತಿಕವಾಗಿ ಬದುಕಿನಲ್ಲಿ ಕ್ರಮಿಸಿದ ದೂರ ದೀರ್ಘವಾದುದು. ಬದುಕಿನಲ್ಲಿ ಕಂಡ ಸಿಹಿಕಹಿ ಘಟನೆಗಳೆಲ್ಲಾ ಇದರಲ್ಲಿ ಪ್ರಾಮಾಣಿಕವಾಗಿ ದಾಖಲಾಗಿದೆ. ಈ ಆತ್ಮಕಥೆ ಆತ್ಮಸ್ತುತಿಗಾಗಲಿ ಅಥವಾ ಆತ್ಮನಿಂದನೆಗಾಗಲಿ ಅವಕಾಶವನ್ನು ನೀಡುವುದಿಲ್ಲ. ವಾಸ್ತವಿಕ ಜೀವನದ ಏಳುಬೀಳುಗಳ ಪ್ರಾಮಾಣಿಕ ಘಟನೆಗಳಿವೆ.

ಮುನ್ನೂರು ಪುಟಗಳ ಈ ಆತ್ಮಕಥನದಲ್ಲಿ ಅನುಪಮಾರವರು ತಮ್ಮ ಬದುಕಿನ ಪದದ ಪದರಗಳನ್ನೆಲ್ಲಾ ಮುಚ್ಚುಮರೆಯಿಲ್ಲದೆ ಲೋಕದ ಎದುರು ಬಿಡಿಸಿ ಇರಿಸಿದ್ದಾರೆ. ಸಹಜವಾದ ಸರಳವಾದ ನಿರೂಪಣೆಯನ್ನು ಹೊಂದಿದೆ. ಇಲ್ಲಿ ವರ್ಣರಂಜನೆಯಲ್ಲಿ ಯಥಾರ್ಥ ಚಿತ್ರಣಕ್ಕೆ ಪ್ರಾಶಸ್ತ್ಯ ನೀಡಲಾಗಿದೆ. ಈ ಕೃತಿಯ ಪುಟಗಳನ್ನು ತಿರುವುತ್ತಿದ್ದಂತೆಯೆ ಅನೇಕ ಚಿತ್ರಗಳು ಕಣ್ಣಿಗೆ ಕಟ್ಟಿದಟ್ಟವಾಗಿ ನಿಲ್ಲುತ್ತದೆ.

ಬದುಕನ್ನು ತಾವು ಸ್ವೀಕರಿಸಿರುವ ವಿಧಾನವನ್ನು ಅವರು "ನೆನಪು ಸಿಹಿಕಹಿ"ಯಲ್ಲಿ ತಿಳಿಸುತ್ತಾರೆ. "ಸುಖದ ಬೆನ್ನಿಗೆ ದುಃಖ ಸಂಕಟದ ಬೆನ್ನಿಗೆ ಸಂತೋಷ

ಇದ್ದೇ ಇರುತ್ತದೆ ಎಂಬುದು ಜನ ಆಡುವ ಮಾತು ಆದರೆ ಈ ಸತ್ಯ ನನ್ನ ಜೀವನದಲ್ಲಿ ಆಗಾಗ ದುಃಖತೋರಿಸಿದೆ. ಶಸ್ತ್ರಕ್ರಿಯೆಯ ಚಿಕಿತ್ಸೆಗಳಿಂದಾಗಿ ದೈಹಿಕವಾಗಿ ನಾನು ಬಸವಳಿದಿದ್ದರೂ ಮಾನಸಿಕವಾಗಿ ತುಂಬ ಉತ್ಸಾಹಿತಳಾಗಿದ್ದೆ ಸಾವಿನ ಸಮೀಪಕ್ಕೆ ಹೋಗಿ ಬಂದವಳು ನನಗೆ ಸಾವಿನ ಬಗ್ಗೆ ಹೆದರಿಕೆಯಿರಲಿಲ್ಲ. ಅದು ಬಂದಾಗ ಆರಾಮವಾಗಿ ಸ್ವೀಕರಿಸುವ ಮನೋಭಾವ ತಾಳಿದ್ದೆ, ಆದರೆ ಬದುಕಿನ ಬಗ್ಗೆ ವಿಪರೀತ ಗೌರವ ಬಂದುಬಿಟ್ಟಿತ್ತು ಬದುಕನ್ನು ಪ್ರೀತಿಸುವುದು ಅಂದರೇನು? ನನಗಾಗಿ ಬಾಳುವುದು ಎಂದರ್ಥವಲ್ಲ. ನಾಲ್ಕು ಜನರಿಗೆ ಉಪಯುಕ್ತವಾಗುವ ಹಾಗೆ ಬದುಕಬೇಕು. ಆ ಕೆಲಸವನ್ನು ನನ್ನ ವೈದ್ಯಕೀಯ ಸೇವೆಯಿಂದ ಮಾಡಬಹುದು. ನನ್ನ ಬರಹದಿಂದ ಸಾಧಿಸಬಹುದು ಎಂದು ತೋರಿತು".

ಈ ಮಾತುಗಳು ಅನುಪಮಾರ ಜೀವನದರ್ಶನವನ್ನು ಅಭಿವ್ಯಕ್ತಿಸುತ್ತದೆ. ಹನ್ನೆರಡು ವರ್ಷಗಳ ಸತತ ನೋವುಂಡು ಅನುಪಮಾರ ಭೌತಿಕ ಚೇತನ ೫೭ನೆಯ ವಯಸ್ಸಿನಲ್ಲಿಯೇ ಫೆಬ್ರವರಿ ೧೪, ೧೯೯೧ರಂದು ಈ ವ್ಯಕ್ತ ಪ್ರಪಂಚದಿಂದ ಮರೆಯಾಯಿತು. ಆದರೆ ತಮ್ಮ ಬರಹಗಳ ಮೂಲಕ ತಮ್ಮನ್ನು ಎಚ್ಚರಿಸುತ್ತಾ, ಜೀವನದ ಸವಾಲುಗಳನ್ನು ಸ್ವೀಕರಿಸಲು ಹುರಿದುಂಬಿಸುತ್ತಾ, ಯಾವಾಗಲೂ ನಮ್ಮೊಡನೆಯೇ ಇರುತ್ತಾರೆ.

ವಾಸಂತಿಯವರ 'ಜೀವನ ಹೋರಾಟ' ಹೆಚ್ಚು ಮುಕ್ತತೆಯನ್ನೊಳಗೊಂಡ ಆತ್ಮಕಥೆಯಾಗಿದೆ. ತನ್ನ ನೋವು, ನಲಿವು, ಪತಿ ಮತ್ತು ಇವರ ಸ್ವಭಾವದಲ್ಲಿ ಅಜಗಜಾಂತರ ವ್ಯತ್ಯಾಸ, ಹೈರಾಣಾಗಿಸುವ ದುಡಿಮೆ, ಸಾವಿಗಾಗಿ ಕಾದು ಕುಳಿತು ತಾವು ಬದುಕು ಸವೆಸಿದ್ದು ಇದನ್ನೆಲ್ಲ ಮುಕ್ತವಾಗಿ ಹೇಳಿಕೊಂಡಿದ್ದಾರೆ. ಆದರೆ ತಮ್ಮ ಬರಹದ ಬಗ್ಗೆ ಹೆಚ್ಚು ಬರೆದಿಲ್ಲವೆಂಬುದು ಗಮನಾರ್ಹ.

ತುಂಬಾ ಕಷ್ಟದ ಬದುಕನ್ನು ಬದುಕಿ ಹೆಂಗಸಿನ ಕೌಟುಂಬಿಕ ಇಕ್ಕಟ್ಟನ್ನೂ, ಹೈರಾಣಾಗಿಸುವ ದುಡಿಮೆಯನ್ನು ತಮ್ಮ ಆತ್ಮಕಥನದಲ್ಲಿ ಧೈರ್ಯ ಮತ್ತು ಮುಕ್ತವಾಗಿ ಬಿಚ್ಚಿಟ್ಟಿದ್ದು ವಾಸಂತಿಯವರ ಪ್ರಧಾನ ಗುರುತು, ಸುಖಕ್ಕಿಂತ ಕಷ್ಟವೇ ಹೆಚ್ಚಾಗಿ ಅವರ ಬದುಕು ನಾನಾ ಸವಾಲುಗಳಿಂದ ಇಂಥ ಆತ್ಮಕತೆಯನ್ನು ಬರೆಯಲು ಪ್ರೇರೇಪಣೆ ಕೊಟ್ಟಿರಬಹುದು, ಬರಹದ ಕಷ್ಟಗಳಿಗಿಂತ ಬದುಕಿನ ಕಷ್ಟಗಳೇ ಭೂತಕಾರವಾದ ವಿಷಾದಮಯ ಬದುಕು ಇವರದ್ದು.

ವಾಸಂತಿಯವರ ಬರಹದಲ್ಲಿ ಸರಳತೆಯಿದೆ. ಯಾವುದನ್ನೂ ಮುಚ್ಚಿಡದೆ ಹೇಳುವ ಮನಸ್ಸು ಹಗುರ ಮಾಡಿಕೊಂಡ ಲಕ್ಷಣಗಳು ಅವರ 'ಜೀವನ

ಹೋರಾಟ'ದಲ್ಲಿ ಎದ್ದು ಕಾಣಿಸುತ್ತದೆ. ತಮ್ಮ ಹೋರಾಟಮಯ ಜೀವನದಲ್ಲಿ ಹೆಚ್ಚು ಬರೆಯಲಾಗದಿದ್ದರೂ, ಸಾಹಿತ್ಯ ಕ್ಷೇತ್ರಕ್ಕೆ ತಮ್ಮಿಂದಾದಷ್ಟು ಕೊಡುಗೆಗಳನ್ನು ಕೊಟ್ಟು ಹೋಗಿದ್ದಾರೆ. ತಾವು ನಡೆದು ಬಂದ ಹಾದಿಯಲ್ಲಿ ಹೆಜ್ಜೆ ಗುರುತನ್ನು ಮೂಡಿಸಿ ಸಾಹಿತ್ಯಕ್ಷೇತ್ರದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದ್ದಾರೆ. ಬಡತನ, ಭವಿಷ್ಯದ ಅಸ್ಥಿರತೆ ಪ್ರಾಣಾಂತಿಕ ಆಪತ್ತುಗಳು, ಜೀವಕ್ಕಂಟಿದ ಪ್ರಿಯ ಜೀವಗಳ ಸಾವು, ಸಾಮರಸ್ಯವಿಲ್ಲದ ದಾಂಪತ್ಯ ಇತ್ಯಾದಿ ನೂರು ಕಷ್ಟಕೋಟಲೆಗಳ ನಡುವೆಯೂ ೮೭ ವರ್ಷಗಳ ಕಾಲ ಬದುಕಿ ೧.೪.೧೯೫೫ರಂದು ತೀರಿಕೊಂಡರು. ಸಾಯುವ ತನಕವೂ ಸ್ವಾತಂತ್ರ್ಯವನ್ನು ಬಯಸಿದ ಜೀವ ಅವರದ್ದು ಸ್ವಾತಂತ್ರ್ಯಕ್ಕಾಗಿ ಅವರು ಹೋರಾಟಮಯವಾದ ಜೀವನವನ್ನು ಒಪ್ಪಿಕೊಂಡರು. ದಕ್ಷಿಣ ಕನ್ನಡ ಜಿಲ್ಲೆಯ ಮೊದಲ ಲೇಖಕಿಯರ ಸಾಲಿನಲ್ಲಿ ಗುರುತಿಸಲ್ಪಟ್ಟ ಶ್ರೀಮತಿ ವಾಸಂತಿ ಪಡುಕೋಣೆ ಎಲ್ಲಾ ಮಹಿಳೆಯರಿಗೂ ಮಾದರಿಯಾಗಬಲ್ಲರು.

ಶಾರದಾ ಹೆಮ್ಮಿಗೆಯವರ ೧೬೦ ಪುಟಗಳ ಆತ್ಮಕಥೆ 'ಬದುಕು ಕೊಟ್ಟಿದ್ದು ಕಲಿಸಿದ್ದು' ಈ ಆತ್ಮಕಥನದಲ್ಲಿ ತಮ್ಮ ಬದುಕಿನ ವಿವರಗಳನ್ನು ಮುಕ್ತವಾಗಿ ತೆರೆದಿಟ್ಟಿದ್ದಾರೆ. ಇವರು ಸೌಜನ್ಯ, ಸದಾಭಿರುಚಿ, ಸೌಹಾರ್ದ ಹೀಗೆ ತ್ರಿಗುಣಗಳನ್ನು ಅಳವಡಿಸಿಕೊಂಡ ವ್ಯಕ್ತಿ ಅವರು ತ್ರಿದಳದ ಬಿಲ್ವಪತ್ರೆ.

ಶಾರದಾ ಹೆಮ್ಮಿಗೆ ಮಧ್ಯಮವರ್ಗದ ಒಬ್ಬ ಸಾಮಾನ್ಯ ಗೃಹಿಣಿ ಲೇಖಕಿ ಡಾ. ಕಮಲಾ ಹೆಮ್ಮಿಗೆಯವರ ತಾಯಿ, ಸೂಕ್ಷ್ಮಬುದ್ಧಿಯ, ವಿಶಾಲಮನಸ್ಸಿನ ಹೃದಯವಂತಿಕೆಯ ಮಾತೆ. ಇವರು ಈಗಿಲ್ಲ. ಆದರೆ ೧೯೯೬ರಲ್ಲಿ ಪ್ರಕಟವಾದ ತಮ್ಮ ಆತ್ಮಕಥನದ ಮೂಲಕ ಹಾಗೂ ಇತರ ಕೃತಿಗಳ ಮೂಲಕ ಸದಾ ಜೀವಂತವಾಗಿರುತ್ತಾರೆ. ಸಾಮಾನ್ಯ ಗೃಹಿಣಿಯೊಬ್ಬರು ಈ ಶತಮಾನದ ಬದುಕನ್ನು ನೋಡುವ ದೃಷ್ಟಿಕೋನ ಇಲ್ಲಿ ಮುಖ್ಯವಾಗುತ್ತದೆ. ಇಲ್ಲಿಯ ನೋವು ನಿರಾಸೆ, ಸಂತೋಷ–ಸಂಭ್ರಮ, ಕೇವಲ ಒಬ್ಬ ಗೃಹಿಣಿಗೆ ಹಾಗೂ ಆಕೆಯ ಕುಟುಂಬಕ್ಕೆ ಮಾತ್ರ ಸೀಮಿತವಾಗದೆ ಇಡೀ ಒಂದು ತಲೆಮಾರಿನ ತಳಮಳವಾಗಿ, ಮಧ್ಯಮ ವರ್ಗದ ಬದುಕಿನ ಸಹಜ ದಾಖಲೆಯಾಗಿ ರೂಪುಗೊಂಡಿರುವುದರಿಂದ ಈ ಕೃತಿಗೆ ಚಾರಿತ್ರಿಕ ಮಹತ್ವ ಬರುತ್ತದೆ. ಮಹಿಳಾ ಲೋಕದ ಕೆಲವು ಸಂವೇದನಾ ಶೀಲ ಗೃಹಿಣಿಯರಿಗೆ ಈ ಕೃತಿ ಅತ್ಯುತ್ತಮ ಕೈಪಿಡಿ ಮಧ್ಯಮವರ್ಗದ ಮಡಿಸಂಸ್ಕೃತಿಯಲ್ಲಿ ಬೆಳೆದುಬಂದ ಮಹಿಳೆಯೊಬ್ಬಳು ಯಾವ ಉನ್ನತ ಶಿಕ್ಷಣ ಪಡೆಯದಿದ್ದರೂ, ಜನಪರ ನಿಲುವು ತಾಳಿರುವುದು, ಮೌಲ್ಯಗಳಿಗಾಗಿ ಬದುಕು ಸವೆಸಿರುವುದು ಬಹುಮುಖ್ಯ ಸಂಗತಿಯಾಗುತ್ತದೆ. ಕಣ್ಣೀರು, ನೋವು, ಯಾತನೆ ಹೆಣ್ಣಿಗೆ ಸಹಜವಾದವುಗಳು.

ಅವುಗಳನ್ನೆಲ್ಲಾ ಅನುಭವಿಸಿ ಕಷ್ಟದಲ್ಲಿ ಬೆಳೆದು, ಮಕ್ಕಳನ್ನು ಬೆಳೆಸಿ, ಅವರ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ತನ್ನನ್ನೂ ಗುರುತಿಸಿಕೊಂಡು ಸಂತೋಷಪಟ್ಟ ಇಂತಹ ಲೇಖಕಿಯರ ಬದುಕು–ಬವಣೆಗಳ ಪ್ರೇರಣೆಯ ನೆಲೆಯಲ್ಲಿ ಇಂದಿನ ಸ್ತ್ರೀವಾದ ಅರಳಬೇಕಾಗಿದೆ. ಯಾವ ಸಿದ್ಧಾಂತವನ್ನೂ ಗಹನವಾಗಿ ತಿಳಿದಿರದ ಯಾವ ಸಂಪ್ರದಾಯಕ್ಕೂ ಕಟ್ಟುಬೀಳುವ ಮಾನವೀಯ ಅಂತಃಕರಣದಿಂದ ತುಡಿತ ಈ ಜೀವನ ಗಾರ್ಕಿಕ ತಾಯಿಯ ಪಾತ್ರವನ್ನು ನೆನಪಿಸುತ್ತದೆ. ಇಂತಹ ಅನೇಕ ಮಹಿಳೆಯರು ನಮ್ಮ ನಡುವೆ ಇಂದೂ ಇದ್ದಾರೆ.

"ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು" ಇಲ್ಲಿ ಸಾರಾ ಅವರಿಗೆ ಓದುವ ಬಯಕೆ ಇದ್ದರೂ ಧರ್ಮದ ಬಲೆಯೊಳಗೆ ಸಿಲುಕಿ ಓದುವುದಕ್ಕೆ ಕಷ್ಟಪಡುವ ಚಿತ್ರಣವನ್ನು ಮತ್ತು ಅಡೆತಡೆಗಳನ್ನು ಕಾಣಬಹುದು. ಸಾರಾ ಅವರು ಮುಸ್ಲಿಂ ಮಹಿಳೆಯಾದ್ದರಿಂದ ಮುಸ್ಲಿಂ ಹುಡುಗಿ ಶಾಲೆ ಕಲಿಯುವುದಕ್ಕಾಗಿ ಅನುಭವಿಸಿದ ನೋವು, ಯಾತನೆ, ಮಾನಸಿಕ ಹಿಂಸೆಗಳನ್ನು ಚಿತ್ರಿಸಿದ್ದಾರೆ. ತಮಗೆ ತಮ್ಮ ಧರ್ಮ ಸಂಪ್ರದಾಯಗಳು ಹೇರಿದ ಒತ್ತಡ ತಂತ್ರಗಳಿಂದ ಹೆಣ್ಣುಮಕ್ಕಳು ಹೇಗೆ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎಂಬುದನ್ನು ತಮ್ಮ ಅನುಭವದ ಮೂಲಕ ತಿಳಿಸಿದ್ದಾರೆ.

ಒಟ್ಟಿನಲ್ಲಿ ನನ್ನ ಪ್ರಬಂಧದಲ್ಲಿ ಚರ್ಚಿಸಲಾಗಿರುವ ಈ ಆತ್ಮಕಥೆಗಳಲ್ಲಿ ಸ್ತ್ರೀಪರವಾದ ನಿಲುವುಗಳಿಂದ ಕೂಡಿ ಜೀವನಮುಖಿಯಾಗಿದೆ. ಮಹಿಳೆಯರ ನೋವು ನಲಿವುಗಳಿವೆ. ಮಹಿಳೆಯರ ಕಷ್ಟಕಾರ್ಪಣ್ಯಗಳಿವೆ, ಸುಡುವಾಸ್ತವಗಳಿವೆ. ಭಗ್ನಬದುಕಿನ ಚಿತ್ರಣಗಳಿವೆ. ಭಾಷೆ, ಶೈಲಿ ಸರಳ ಸುಂದರವಾಗಿ ಮೂಡಿಬಂದಿದೆ. ಗಂಭೀರವಾದ ಆಲೋಚನೆಗಳಿವೆ. ಒಂದು ತಲೆಮಾರಿನ ಜೀವನ, ಸಾಂಸ್ಕೃತಿಕ ಚರಿತ್ರೆಯಿದೆ. ಮಹಿಳೆಯರ ಬದುಕಿಗೆ ಈ ಆತ್ಮಚರಿತ್ರೆಗಳು ಇಂದಿಗೂ ಪ್ರಸ್ತುತ ಹಾಗೂ ದಾರಿದೀಪವಾಗಲಿವೆ. ಮಾನವೀಯ ಅಂತಃಕರಣದ ವೈಚಾರಿಕ ಸೃಜನಶೀಲ ಅಂಶಗಳು ಈ ಆತ್ಮಕಥೆಗಳಲ್ಲಿ ದಾಖಲಾಗಿವೆ. ಮಧ್ಯಮವರ್ಗದ ಸ್ತ್ರೀಮನಸ್ಸಿನ ತಲ್ಲಣಗಳಿವೆ. ಮಡಿ ಸಂಸ್ಕೃತಿಯ ಒಳವಿವರಗಳೊಂದಿಗೆ ಒಂದು ಹೆಣ್ಣು ಹೇಗೆ ವೈಚಾರಿಕತೆಯನ್ನು ಬೆಳೆಸಿಕೊಳ್ಳುವುದರ ಜೊತೆಗೆ ಮೌಲ್ಯಗಳ ಹುಡುಕಾಟಕ್ಕೆ ಹವಣಿಸುವ ಮನಸ್ಸು ಈ ಆತ್ಮಕಥೆಗಳಲ್ಲಿ ಗುರುತಿಸಬಹುದಾಗಿದೆ.

ಆಕರ ಗ್ರಂಥಗಳು

೧) ಜೀವನದ ಹೋರಾಟ, ವಾಸಂತಿ ಪಡುಕೋಣೆ, ಪ್ರಕಾಶಕರು: ಸಾಹಿತ್ಯಧೂತ, ಮಲ್ಲೇಶ್ವರಂ, ಬೆಂಗಳೂರು, ಮೊದಲ ಮುದ್ರಣ ೧೯೭೭.

೨) ನೆನಪು ಸಿಹಿಕಹಿ, ಅನುಪಮಾ ನಿರಂಜನ, ಪ್ರಕಾಶಕರು: ಡಿ.ವಿ.ಕೆ.ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು, ಮೊದಲ ಮುದ್ರಣ, ೧೯೮೫, ಎರಡನೇ ಮುದ್ರಣ, ೨೦೦೦.

೩) ಬರಹಗಾರ್ತಿಯ ಬದುಕು, ಅನುಪಮಾ ನಿರಂಜನ, ಪ್ರಕಾಶಕರು: ಡಿ.ವಿ.ಕೆ.ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು, ಮೊದಲ ಮುದ್ರಣ, ೧೯೯೦, ಎರಡನೇ ಮುದ್ರಣ, ೨೦೦೨.

೪) ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು ಸಾ.ರಾ.ಅಬೂಬಕ್ಕರ್, ಪತ್ರಿಕಾ ಪ್ರಕಾಶನ, ಬೆಂಗಳೂರು, ಮೊದಲ ಮುದ್ರಣ, ೧೯೮೫.

೫) ಬದುಕು ಕೊಟ್ಟಿದ್ದು ಕಲಿಸಿದ್ದು, ಶಾರದಾ ಹೆಮ್ಮಿಗೆ, ನೆಲೆಮನೆ ಪ್ರಕಾಶನ, ಮೈಸೂರು.

ಪರಾಮರ್ಶನ ಗ್ರಂಥಗಳು

೧) ಅನುಪಮಾ ನಿರಂಜನ, ವಿಜಯಾದಬ್ಬೆ, ಪ್ರಕಾಶನ, ಸಾಹಿತ್ಯ ಅಕಾಡೆಮಿ, ಪ್ರಧಾನ ಕಾರ್ಯಾಲಯ, ರವೀಂದ್ರಭವನ, ೩೫ ಫಿರೋಜ್ ಶಾಹ್ ಮೇರ್ಗ, ನವದೆಹಲಿ –೧

೨) ಅನುಪಮಾ ಅಭಿನಂದನ, ಸಂಪಾದಕರು: ಬೋಳಂತಕೋಡಿ ಈಶ್ವರಭಟ್ಟ, ಪ್ರಕಾಶನ: ಕರ್ನಾಟಕ ಸಂಘ, ಪುತ್ತೂರು – ೫೭೪೨೦೧, ದಕ್ಷಿಣ ಕನ್ನಡ, ಮೊದಲ ಮುದ್ರಣ, ೧೯೮೮.

೩) ಆತ್ಮಕಥೆಗಳಲ್ಲಿ ಕರ್ನಾಟಕದ ಕಥೆ, ಪುಟ್ಟಯ್ಯ ಬಿ.ಎಂ., ಪ್ರಕಾಶಕರು: ಪ್ರ.ವಿ.ವಿ. ನಾವಡ, ನಿರ್ದೇಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ – ೫೮೩೨೭೬, ಮೊದಲ ಮುದ್ರಣ, ೧೯೯೯.

೪) ಕನ್ನಡ ಮಹಿಳೆಯರ ಆತ್ಮಕಥೆಗಳು, ರತ್ನಶೀಲಾ ಗುರಡ್ಡಿ.ಎಸ್, ಪ್ರಕಾಶನ: ಚಿಕ್ಕಮ್ಮ ದೊಡ್ಡಮ್ಮ ಪ್ರತಿಷ್ಠಾನ, ಬ್ಯಾಲದಕೆರೆ, ಮಂಡ್ಯಜಿಲ್ಲೆ, ಮೊದಲ ಮುದ್ರಣ, ೨೦೦೮.

೫) ಮಹಿಳಾ ಆತ್ಮಕಥೆಗಳು: ಅನುಸಂಧಾನ, ವಿಚಾರ ಸಂಕಿರಣ, ಸಂಪಾದಕರು: ಸಬಿಹಾ ಭೂಮಿಗೌಡ, ಪ್ರಕಾಶನ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨, ಪ್ರಥಮ ಮುದ್ರಣ, ೨೦೦೭.

೬) ಶಾರದಾ ಹೆಮ್ಮಿಗೆ : ಬದುಕುಬರಹ, ಸಂಪಾದಕರು: ಡಾ. ಕಮಲಾ ಹೆಮ್ಮಿಗೆ, ಮುದ್ರಕರು: ಲಾವಣ್ಯ ಮುದ್ರಣ ಬನಶಂಕರಿ ೧ನೇ ಹಂತ, ಬೆಂಗಳೂರು – ೫೬೦ ೦೫೦, ಮೊದಲಮುದ್ರಣ –೨೦೦೦.

೭) ಆಲಯಗಳ ಬಯಲು, ಸಂಪಾದಕರು : ಡಾ. ಶ್ರೀಪಾದ ಶೆಟ್ಟಿ, ಡಾ. ಗುರುಪಾದ ಮರಿಗುದ್ದಿ, ಮುದ್ರಕರು: ತ್ವರಿತ ಮುದ್ರಣ ಆಫ್ಸೆಟ್ ಪ್ರಿಂಟರ್ಸ್, ಕಾಗದಗೇರಿ ಓಣಿ, ಗದಗ – ೫೮೨ ೧೦೧, ಪ್ರಥಮ ಮುದ್ರಣ, ಆಗಸ್ಟ್ ೨೦೦೮.

೮) ಈಗೇನ್ ಮಾಡೀರಿ? ದು.ಸರಸ್ವತಿ ಇಳಾಮುದ್ರಣ, ನಂ. ೩೬, ೪೦, ಅಡ್ಡರಸ್ತೆ ರಾಘವನಗರ, ನ್ಯೂ ಥೆಂಬರ್ ಯಾರ್ಡ್ ಲೇಔಟ್, ಬೆಂಗಳೂರು–೫೬೦ ೦೨೬, ಪ್ರಥಮ ಮುದ್ರಣ –೨೦೦೧.

೯) ಕನ್ನಡ ಸಾಹಿತ್ಯದಲ್ಲಿ ಆತ್ಮಚರಿತ್ರೆ, ಶರಣಮ್ಮ, ಆ ಗೂರೇಬಾಳ, ಪ್ರಕಾಶನ, ದಲಿತ ಸಾಹಿತ್ಯ ಪರಿಷತ್, ರಾಜ್ಯ ಘಟಕ, ಗದಗ.

೧೦) ನನ್ನ ಬಯೋಗ್ರಫಿ, ಬೀಚಿ, ನನ್ನ ಬಯೋಗ್ರಫಿ, ಬೀಚಿ, ಪ್ರಕಾಶನ, ದೀಪಕ, ಎಸ್ ಶಾಹ, ಎಸ್.ವಿ.ಎಸ್. ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್, ರೈಲ್ವೆ ಪ್ಯಾರಲಲ್ ರೋಡ್, ಬೆಂಗಳೂರು – ೫೬೦ ೦೦೧, ಮುದ್ರಣ – ೨೦೦೨.